ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 23 ಭಾನುವಾರ 2023

ಸಂಪುಟ: 44 | ಸಂಚಿಕೆ: 8 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಮ್ದು ಭಲೇ ಜೋಡಿ...



ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಡುವೆ ಮತ್ತೆ ಒಡಕು ಮೂಡಿದೆ ಎಂಬ ಬಿಜೆಪಿ ನಾಯಕರ ಪ್ರಚಾರದ ಹಿನ್ನೆಲೆಯಲ್ಲಿ ಈ ಇಬ್ಬರು ನಾಯಕರು ಶನಿವಾರ ವಿಶೇಷ ಫೋಟೋ ಸೆಷನ್ ನಡೆಸಿ ನಮ್ಮ ನಡುವೆ ಯಾವುದೇ ಬಿರುಕಿಲ್ಲ ಎಂಬ ಸಂದೇಶ ಸಾರಿದ್ದಾರೆ.


ಕಾಂಗ್ರೆಸ್, ಜೆಡಿಎಸ್ ಪ್ರಭಾವಿ ನಾಯಕರ ಕ್ಷೇತ್ರದಲ್ಲಿ

ಪ್ರಧಾನಿ ಮೋದಿ ಪ್ರಚಾರ ತಂತ್ರ

● ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕುಮಾರಸ್ವಾಮಿ, ಪ್ರಿಯಾಂಕ್ ಖರ್ಗೆ ಇನ್ನಿತರ ಕಡೆ ರೋಡ್ ಶೋ ಮೂಲಕ ರಣಕಹಳೆ ● ಬಿಜೆಪಿ ಚುನಾವಣಾ ಚಾಣಕ್ಯ 'ಅಮಿತ್ ಶಾ' ಕಾರ್ಯತಂತ್ರ ● ಬಿಜೆಪಿ ದುರ್ಬಲವಾಗಿರುವ ಕ್ಷೇತ್ರಗಳಲ್ಲಿ ಮೋದಿ ಮಂತ್ರ ಮೋಡಿ

ಬೆಂಗಳೂರು, ಏ.22 (ಕೆಎಂಶಿ)–ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಕಾಂಗ್ರೆಸ್–ಜೆಡಿಎಸ್ ಪ್ರಭಾವವಿರುವ 30ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡಲಿದ್ದಾರೆ.

ಬಿಜೆಪಿ ಯಾವ ಕ್ಷೇತ್ರದಲ್ಲಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆಯೋ ಅಂತಹ ಕ್ಷೇತ್ರಗಳಲ್ಲಿ ತಮ್ಮ ವರ್ಚಸ್ಸಿನ ಮೂಲಕ ಮತದಾರರನ್ನು ಸೆಳೆಯಲು ಪ್ರಧಾನಿ ಪ್ರವಾಸ ನಿಗದಿ ಮಾಡಲಾಗಿದೆ. ಕಂದಾಯ ಸಚಿವ ಆರ್.ಅಶೋಕ್ ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಕಣಕ್ಕಿಳಿದಿದ್ದಾರೆ. ತಮ್ಮ ಅಭ್ಯರ್ಥಿ ಅಶೋಕ್ ಪರ ಮೋದಿ ಅವರು, ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ರೋಡ್ ಶೋ ನಡೆಸಲಿದ್ದಾರೆ. ಕಳೆದ ಎರಡು ದಿನಗಳಿಂದ ರಾಜ್ಯ ಪ್ರವಾಸದಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ತಡರಾತ್ರಿ ರಾಜ್ಯ ಬಿಜೆಪಿ ಮುಖಂಡರೊಟ್ಟಿಗೆ ಚುನಾವಣಾ ತಂತ್ರಗಾರಿಕೆಗೆ ಸಂಬಂಧಿಸಿದಂತೆ ನಡೆಸಿದ ಚರ್ಚೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಸಿದ್ದರಾಮಯ್ಯ ಅವರು ಸ್ಪರ್ಧಿಸಿರುವ ವರುಣ ಕ್ಷೇತ್ರವನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡಿರುವ ಬಿಜೆಪಿ ಈ ಕ್ಷೇತ್ರದಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಸೋಮಣ್ಣ ಪರ ಪ್ರಧಾನಿಯವರು ರೋಡ್ ಶೋ ನಡೆಸಲಿದ್ದಾರೆ. ಅಷ್ಟೇ ಅಲ್ಲ ಸೋಮಣ್ಣ ಅವರು ಸ್ಪರ್ಧಿಸಿರುವ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲೂ ಪ್ರಧಾನಿಯವರು ಪ್ರಚಾರ ಮಾಡಲಿದ್ದಾರೆ.



ಜೆಡಿಎಸ್‌ನ ಕುಮಾರಸ್ವಾಮಿ ಸ್ಪರ್ಧಿಸಿರುವ ಚನ್ನಪಟ್ಟಣ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ ಖರ್ಗೆ ಪ್ರತಿನಿಧಿಸುವ ಚಿತ್ತಾಪುರದಲ್ಲೂ ಪ್ರಧಾನಿಯವರು ರೋಡ್ ಶೋ ನಡೆಸಲು ಸಭೆ ತೀರ್ಮಾನಿಸಿದೆ. ಬಿಜೆಪಿ ಪ್ರಭಾವವಿರುವ ಕ್ಷೇತ್ರಗಳಲ್ಲಿ ಮೋದಿ ಪ್ರವಾಸ ತುಂಬಾ ಕಡಿಮೆ. ಆದರೆ ವಿಧಾನಸಭಾ ಚುನಾವಣಾ ಪೂರ್ವ ಸಮೀಕ್ಷಾ ವರದಿಗಳ ಆಧಾರದ ಮೇಲೆ ಎರಡನೇ ಮತ್ತು ಮೂರನೇ ಸ್ಥಾನದಲ್ಲಿರುವ ಪಕ್ಷದ ಅಭ್ಯರ್ಥಿಗಳ ಈ ಕ್ಷೇತ್ರಗಳನ್ನು ಬಿ ಮತ್ತು ಸಿ ಎಂದು ವರ್ಗೀಕರಿಸಲಾಗಿದೆ.

ಇಂತಹ ವಿಧಾನಸಭಾ ಕ್ಷೇತ್ರಗಳಲ್ಲಿ ಮೋದಿ ಅವರು ರೋಡ್ ಶೋ ಮತ್ತು ಪ್ರಚಾರವನ್ನು ನಡೆಸಲಿದ್ದಾರೆ. ಇದೇ 27ರಂದು ಆನ್‌ಲೈನ್ ಮೂಲಕ 44 ಸಾವಿರ ಬೂತ್ ಹಾಗೂ ಏಕಕಾಲದಲ್ಲಿ 50 ಲಕ್ಷ ಮತದಾರರನ್ನು ತಲುಪುವಂತೆ ಪ್ರಚಾರಕ್ಕೆ ಚಾಲನೆ ಕೊಡಲಿರುವ ಮೋದಿ ಅವರು ಮರುದಿನವೇ ಕರ್ನಾಟಕಕ್ಕೆ ದಾಂಗುಡಿ ಇಡಲಿದ್ದಾರೆ. ಆನ್‌ಲೈನ್ ಮೂಲಕ ನಡೆಸಲಿರುವ ಪ್ರಚಾರ ಅಂದಾಜು ಒಂದು ಕೋಟಿಗೂ ಅಧಿಕ ಮತದಾರರನ್ನು ತಲುಪುವಂತೆ ವ್ಯವಸ್ಥೆ ಕಲ್ಪಿಸಲಾಗಿದ್ದು, ಇದಕ್ಕಾಗಿ ಬೂತ್ ಮಟ್ಟದಲ್ಲಿ ಬೃಹದಾಕಾರದ ಎಲ್‌ಇಡಿಗಳನ್ನು ಅಳವಡಿಸಲಾಗಿದೆ. ಪಕ್ಷದ ಕಾರ್ಯಕರ್ತರು ಕುಳಿತು ಇಲ್ಲವೇ ನಿಂತು ಮೋದಿ ಅವರ ಭಾಷಣವನ್ನು ಆಲಿಸುವಂತೆ ವಿಶೇಷ ವ್ಯವಸ್ಥೆಯನ್ನು ಬಿಜೆಪಿ ಕಲ್ಪಿಸಿದೆ. ಮೇ 28ರಂದು ಕೋಲಾರ ನಗರದ ಹೊರವಲಯದಲ್ಲಿ ಚಿಕ್ಕಬಳ್ಳಾಪುರ ಮತ್ತು

● 6ನೇ ಪುಟಕ್ಕೆ

ಮಾಜಿ ಸಿಎಂ ಕುಮಾರಸ್ವಾಮಿ ಆಸ್ಪತ್ರೆಗೆ ದಾಖಲು



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತೀವ್ರ ಜ್ವರದಿಂದಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ವಿಧಾನಸಭೆ ಚುನಾವಣಾ ಪ್ರಚಾರಕ್ಕಾಗಿ ವಿಶ್ರಾಂತಿಯಿಲ್ಲದೆ ನಿರಂತರವಾಗಿ ಪ್ರವಾಸ ಮಾಡುತ್ತಿರುವ ಅವರು, ಜ್ವರದಿಂದಾಗಿ ಇಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಆತಂಕಪಡಬೇಕಾದ ಅವಶ್ಯಕತೆ ಇಲ್ಲ ಎಂದು ಕುಮಾರಸ್ವಾಮಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದ ಉತ್ತಮ ಭವಿಷ್ಯದ ದೃಷ್ಟಿಯಿಂದ ಹೊಸ ಮುಖಗಳಿಗೆ ಅವಕಾಶ

■ ರಾಜ್ಯ ಬಿಜೆಪಿ ಉಪಾಧ್ಯಕ್ಷ ವಿಜಯೇಂದ್ರ ಸಮರ್ಥನೆ ■ ಮೈಸೂರಿನಲ್ಲಿ ಕಾರ್ಯಕರ್ತರ ಜತೆ ಸಮಾಲೋಚನೆ; ಬಿಜೆಪಿಗೆ ಈ ಬಾರಿ ಜನ ಬೆಂಬಲ



ಮೈಸೂರು,ಏ.22(ಎಂಟಿವೈ)– ರಾಜ್ಯದ ಉತ್ತಮ ಭವಿಷ್ಯಕ್ಕಾಗಿ ಬಿಜೆಪಿ ಈ ಬಾರಿ ಚುನಾವಣೆಯಲ್ಲಿ ಹೊಸ ಮುಖಗಳಿಗೆ ಆದ್ಯತೆ ನೀಡಿದ್ದು, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದಿದ್ದಾರೆ. ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಹೊಸ ಮುಖಗಳಿಗೆ ಅವಕಾಶ ನೀಡಿದೆ. ಮುಂದಿನ 40–50 ವರ್ಷಗಳ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿ ಈ ಬಾರಿಯ ಚುನಾವಣೆಯಲ್ಲಿ ಹೊಸ ಮುಖಗಳಿಗೆ ಮನ್ನಣೆ ನೀಡಲಾಗಿದೆ ಎಂದರು. ಈ ಬಾರಿ ಕಾರ್ಯಕರ್ತರ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಹಾಗೂ ಕೇಂದ್ರದ ವರಿಷ್ಠರು ಎಲ್ಲಾ ಕ್ಷೇತ್ರಗಳ ಸಮೀಕ್ಷೆ ನಡೆಸಿ ಹೊಸ ಮುಖಗಳಿಗೆ ಟಿಕೆಟ್ ನೀಡಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ

● 9ನೇ ಪುಟಕ್ಕೆ

ಲಕ್ಷ ಮತಗಳ ಅಂತರದಲ್ಲಿ ನನ್ನ ಗೆಲ್ಲಿಸಿದರೆ

ನನಗೆ ಮತ್ತೆ ಅಧಿಕಾರ ಸಿಗುತ್ತೆ...!

ಮೊದಲ ಬಾರಿ 28 ಸಾವಿರ ಮತದಿಂದ ಗೆದ್ದು ವಿಪಕ್ಷ ನಾಯಕನಾದೆ; ಎರಡನೇ ಸಲ 35 ಸಾವಿರ ಮತಗಳ ಅಂತರದಲ್ಲಿ ಗೆದ್ದು ಮುಖ್ಯಮಂತ್ರಿಯಾದೆ; ಈಗ ಮತ್ತೆ ಅಧಿಕಾರ ಹಿಡಿಯಲು ಅಧಿಕ ಮತದಿಂದ ಗೆಲ್ಲಿಸಿ: ವರುಣ ಮತದಾರರಲ್ಲಿ ಸಿದ್ದರಾಮಯ್ಯ ಮನವಿ





ನಂಜನಗೂಡು, ಏ.22–ಯಾರು ಎಷ್ಟೇ ದ್ವೇಷದ ರಾಜಕಾರಣ ಮಾಡಿದರೂ ವರುಣ ಕ್ಷೇತ್ರದ ಜನರ ಪ್ರೀತಿ, ವಿಶ್ವಾಸದ ಮುಂದೆ ಅವೆಲ್ಲವೂ ನಗಣ್ಯ. 2008ರಲ್ಲಿ 28 ಸಾವಿರ ಮತಗಳಿಂದ ಗೆದ್ದು ವಿರೋಧ ಪಕ್ಷದ ನಾಯಕನಾಗಿದ್ದೆ. 2013ರಲ್ಲಿ 35 ಸಾವಿರ ಮತಗಳಿಂದ ಗೆದ್ದು ಮುಖ್ಯಮಂತ್ರಿಯಾಗಿದ್ದೆ. ಈ ಬಾರಿ 1 ಲಕ್ಷ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿ, ಶಕ್ತಿ ತುಂಬಿದರೆ ನನಗೆ ಮತ್ತೆ ಅಧಿಕಾರ ಸಿಗಲಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು. ತಾಲೂಕಿನ ಕಾರ್ಯ, ಚಿನ್ನಂಬಳ್ಳಿ,

● 6ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಪ್ರತ್ಯೇಕ ಅಪಘಾತ

ಹವಾನಿಯಂತ್ರಿತ ಬಸ್ ಅಗ್ನಿಗಾಹುತಿ; ರಸ್ತೆ ವಿಭಜಕ ಹಾರಿ ಇನ್ನೋವಾಗೆ ಅಪ್ಪಳಿಸಿದ ಆಲ್ಟೋ ಕಾರು: ಐವರ ಸಾವು





ಶ್ರೀರಂಗಪಟ್ಟಣ/ಚನ್ನಪಟ್ಟಣ, ಏ. 22– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಶನಿವಾರ ಖಾಸಗಿ ಹವಾನಿಯಂತ್ರಣ ಬಸ್ ಸುಟ್ಟು ಕರಕಲಾಗಿದ್ದರೆ, ಎರಡು ವಾಹನಗಳ ನಡುವೆ ಡಿಕ್ಕಿಯಾಗಿ ಒಂದೇ ಕುಟುಂಬದ ಮೂವರು ಮಕ್ಕಳು ಸೇರಿದಂತೆ ಐವರು ಸಾವನ್ನಪ್ಪಿದ್ದಾರೆ.

ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಖಾಸಗಿ ಹವಾನಿಯಂತ್ರಣ ಬಸ್ ಶಾರ್ಟ್ ಸರ್ಕ್ಯೂಟ್‌ನಿಂದ ಹೊತ್ತಿ ಉರಿದ ಘಟನೆ ಶ್ರೀರಂಗಪಟ್ಟಣ ತಾಲೂಕು ಗಣಂಗೂರು ಗೇಟ್ ಬಳಿ ಇಂದು ಬೆಳಗ್ಗೆ 11.30ರ ಸುಮಾರಿನಲ್ಲಿ ಸಂಭವಿಸಿದೆ.

● 9ನೇ ಪುಟಕ್ಕೆ

ಸುತ್ತೂರು ಶ್ರೀಗಳ ಆಶೀರ್ವಾದ



ಮೈಸೂರು ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಅವರು ತಮ್ಮ ಪತ್ನಿ ಸಮೇತ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಹೆಚ್.ಕೆ. ರಮೇಶ್ ಮಾಜಿ ಶಾಸಕರಾದ ಕೆಂಪೇಗೌಡರ ಪುತ್ರ ಹಾಗೂ ಮೈಸೂರಿನ ಹೆಸರಾಂತ ಉದ್ಯಮಿಯಾಗಿದ್ದಾರೆ.

ಬಡವರ ಹಿತ ಕಾಪಾಡುವ ಕಾಂಗ್ರೆಸ್ ಬೆಂಬಲಿಸಿ

ಮತಯಾಚನೆ ವೇಳೆ ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಮನವಿ



ಮೈಸೂರು,ಏ.22–ಬಡವರ, ದಲಿತರ, ಹಿಂದುಳಿದವರ ಹಿತ ಕಾಪಾಡುವ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಿದ್ದೇಗೌಡ ರನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯನವರಿಗೆ ಶಕ್ತಿ ತುಂಬಬೇಕೆಂದು ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಮನವಿ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ, ಏಕಲವ್ಯನಗರ, ಶ್ಯಾದನಹಳ್ಳಿ, ನಾಗನಹಳ್ಳಿ, ಸಿದ್ದಲಿಂಗಾಪುರ, ಕೆ.ಆರ್. ಮಿಲ್‌ಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ ರೊಂದಿಗೆ ಮತಯಾಚಿಸಿ ಮಾತನಾಡಿದ ಅವರು, ಸಿದ್ದರಾಮಯ್ಯರವರು ಏಕಲವ್ಯನಗರದ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ. ಆದರೆ ಕಳೆದ 10 ವರ್ಷಗಳಿಂದ ಶಾಸಕರಾಗಿರುವ ಜಿ.ಟಿ.ದೇವೇಗೌಡರು ಈ ಕಡೆ ತಿರುಗಿಯೂ ನೋಡಿಲ್ಲ. ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ. ಬಿಜೆಪಿ ಸರ್ಕಾರ ಗ್ಯಾಸ್, ಪೆಟ್ರೋಲ್ ಬೆಲೆ ಏರಿಕೆ ಜೊತೆಗೆ ಮಜ್ಜಿಗೆ, ಮೊಸರಿನ ಮೇಲೂ ಜಿಎಸ್‌ಟಿ ಹಾಕಿ ಬಡಜನರ ಹೊಟ್ಟೆ ಮೇಲೆ ಬರೆ ಎಳೆಯುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ನುಡಿದಂತೆ ನಡೆಯುವ ಪಕ್ಷವಾಗಿದ್ದು, ಎಲ್ಲರೂ ಕಾಂಗ್ರೆಸ್ ಬೆಂಬಲಿಸಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ ಮಾತನಾಡಿ, ಪಕ್ಷದಿಂದ ಪಕ್ಷಕ್ಕೆ ಹಾರುವ ಅವಕಾಶವಾದಿ ಜಿ.ಟಿ.ದೇವೇಗೌಡರು ಎರಡು ಬಾರಿ ಶಾಸಕರಾದರೂ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸವಾಗಿಲ್ಲ. ಕಾಂಗ್ರೆಸ್ ಕೊಟ್ಟ ಮಾತಿಗೆ ಎಂದೂ ತಪ್ಪುವುದಿಲ್ಲ. ಸಿದ್ದರಾಮಯ್ಯರವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 158 ಭರವಸೆಗಳನ್ನು ಈಡೇರಿಸಿ ಹಸಿವುಮುಕ್ತ ಕರ್ನಾಟಕ ಮಾಡಿದ್ದಾರೆ. ಆದ್ದರಿಂದ ಈ ಬಾರಿ ಎಲ್ಲರೂ ಕಾಂಗ್ರೆಸ್ ಬೆಂಬಲಿಸಬೇಕು. ಸಿದ್ದರಾಮಯ್ಯರವರಿಗೇ ಮತ ಚಲಾಯಿಸುತ್ತೇನೆಂದು ತಿಳಿದು ನನಗೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಮಾದೇಗೌಡ, ಕೂರ್ಗಳ್ಳಿ ಮಹಾದೇವ, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಸತೀಶ್‌ಕುಮಾರ್, ನಾರಾಯಣ, ಓಲೆ ಸಿದ್ದು, ರವಿ, ಗೋವಿಂದಪ್ಪ, ರೇವಣ್ಣ, ಪುಟ್ಟಲಕ್ಷ್ಮಮ್ಮ, ಶಂಕರ್, ರಾಜೇಂದ್ರಪ್ರಸಾದ್ ಇದ್ದರು.

ಹಿರಿಯರ ಈಜು ಸ್ಪರ್ಧೆಯಲ್ಲಿ ಬೆಳ್ಳಿ ಪದಕ



ಮೈಸೂರು,ಏ.22–ಮೈಸೂರಿನ ಶ್ರೀ ಕಂಠೀರವ ನರಸಿಂಹ ರಾಜ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಮೈಸೂರು ಸ್ಪೋರ್ಟ್ಸ್ ಕ್ಲಬ್ ಈಜು ಕೊಳದಲ್ಲಿ ನಡೆದ ಹಿರಿಯರ ಈಜು ಸ್ಪರ್ಧೆಯಲ್ಲಿ ಲಯನ್ಸ್ ಇಂಟರ್‌ನ್ಯಾಷನಲ್ ಲಯನ್ಸ್ ಕ್ಲಬ್ ಆಫ್ ಮೈಸೂರು, ಇಂದಿರಾ ನಗರದ ಸದಸ್ಯರು ಹಾಗೂ ಚಾರ್ಟರ್ಡ್ ಅಕೌಂಟೆಂಟ್ ಎಸ್.ಅಚ್ಯುತಾ ಅವರು 500 ಮೀಟರ್ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ.

ನೇಮಕ



ಮೈಸೂರು, ಏ. 22–ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ, ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಕಾಡನಹಳ್ಳಿ ಗ್ರಾಮದ ಡಿ.ಚಿಕ್ಕಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರಿನ ಏಳು ಕೇಂದ್ರಗಳಲ್ಲಿ

ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ



ಮೈಸೂರು, ಏ.22(ಆರ್‌ಕೆ)–ಮೈಸೂರಿನ 7 ಕೇಂದ್ರಗಳಲ್ಲಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಏ.21ರಿಂದ ಆರಂಭವಾಗಿದೆ. 2023ರ ಮಾರ್ಚ್ 31ರಿಂದ ಏಪ್ರಿಲ್ 15ರವರೆಗೆ ನಡೆದ ಪರೀಕ್ಷಾ ಮೌಲ್ಯಮಾಪನವು ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಪ್ರೌಢಶಾಲೆ, ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಕಾವೇರಿ ಪಿಯು ಕಾಲೇಜು, ಜಯನಗರ ಹೈಸ್ಕೂಲ್, ಲಷ್ಕರ್ ಮೊಹಲ್ಲಾದ ಗುಡ್‌ಶಫರ್ಡ್ ಶಾಲೆ, ಎನ್.ಆರ್.ಮೊಹಲ್ಲಾದ ಸೆಂಟ್ ಫಿಲೋಮಿನಾ ಹೈಸ್ಕೂಲ್, ವಿವಿ ಮೊಹಲ್ಲಾದ ನಿರ್ಮಲ ಹೈಸ್ಕೂಲ್ ಹಾಗೂ ಸಿದ್ಧಾರ್ಥ ಬಡಾವಣೆಯ ಜೆಎಸ್‌ಎಸ್‌ಎಸ್ ಬಂಟ್ವಾಳ ಮಾಧ್ವ ಶೆಣೈ ಹೈಸ್ಕೂಲ್‌ಗಳಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆ ನಡೆಯುತ್ತಿದೆ. ಪ್ರತೀ ಕೇಂದ್ರಕ್ಕೊಬ್ಬರಂತೆ ಜಂಟಿ ಮುಖ್ಯ ಪರೀಕ್ಷಕ (ICE), ಉಪ ಮುಖ್ಯ ಪರೀಕ್ಷಕರು (DCE) ಹಾಗೂ ಕ್ಯಾಂಪ್ ಕಸ್ಟೋಡಿಯನ್‌ಗಳು ಈಗಾಗಲೇ ಶುಕ್ರವಾರ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಸಹಾಯಕ ಪರೀಕ್ಷಕರು(AE) ಸೋಮವಾರದಿಂದ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಆರಂಭಿಸುವರು.

ಎಲ್ಲಾ ಕೇಂದ್ರಗಳಲ್ಲೂ ಸ್ಟ್ರಾಂಗ್ ರೂಂ ಸಿದ್ಧಪಡಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಭದ್ರವಾಗಿರಿಸಿದ್ದು, ದಿನದ 24 ಗಂಟೆಯೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ. ಪ್ರತೀ ದಿನ ಬೆಳಗ್ಗೆ 9.30ರಿಂದ ಸಂಜೆ 4.30 ಗಂಟೆವರೆಗೆ ನಡೆಯಲಿರುವ ಮೌಲ್ಯಮಾಪನ ಕಾರ್ಯವು ಒಂದು ವಾರದಲ್ಲಿ ಮುಕ್ತಾಯಗೊಳ್ಳಲಿದೆ.

ಮೌಲ್ಯಮಾಪನ ಕೇಂದ್ರಗಳ ಸುತ್ತ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಅನ್ಯವ್ಯಕ್ತಿಗಳು ಸುಳಿದಾಡದಂತೆ ಎಚ್ಚರಿಕೆ ವಹಿಸಲಾಗಿದೆ. ಎಲ್ಲಾ ಕೇಂದ್ರಗಳಲ್ಲೂ ಸಕಲ ಸಿದ್ಧತೆ ನಡೆಸಲಾಗಿದ್ದು, ಮೇ ಮೊದಲ ವಾರ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಹೊರಬೀಳುವ ಸಾಧ್ಯತೆ ಇದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದ್ದಾರೆ.

ನೈಪುಣ್ಯ ಬೇಸಿಗೆ ಬಂಡಿಯಲ್ಲಿ ವಿದ್ಯಾರ್ಥಿಗಳಿಂದ ಸಾಹಸ ಜಲ ಕ್ರೀಡೆ





ಮೈಸೂರು: ಆರ್.ಟಿ.ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ಬೇಸಿಗೆ ಬಂಡಿ ಬೇಸಿಗೆ ಶಿಬಿರದ 12ನೇ ದಿನದಂದು ಮಕ್ಕಳು ಸಾಹಸ ಜಲ ಕ್ರೀಡೆಗಳಲ್ಲಿ ಭಾಗವಹಿಸಿ ರೋಮಾಂಚನ ಅನುಭವ ಪಡೆದುಕೊಂಡರು. ಮಹದೇವಪುರದ ಬಳಿ ಇರುವ ಶ್ರೀ ಕಾವೇರಿ ಬೋರೇದೇವರ ಸನ್ನಿಧಿಯಲ್ಲಿರುವ ಕಾವೇರಿ ನದಿಯಲ್ಲಿ 50ಕ್ಕೂ ಹೆಚ್ಚು ಮಕ್ಕಳು ಸಾಹಸ ಜಲ ಕ್ರೀಡೆಗಳಲ್ಲಿ ಭಾಗವಹಿಸಿ ತಮ್ಮಲ್ಲಿರುವ ಸಾಹಸ ಪ್ರವೃತ್ತಿ, ಆತ್ಮವಿಶ್ವಾಸ ಗಳಿಸಿಕೊಂಡಿದ್ದರಲ್ಲದೆ ಪ್ರಕೃತಿಯ ವೈಭವ ಸವಿದು ಮಾನಸಿಕ ಹಾಗೂ ದೈಹಿಕ ಸದೃಢತೆಯನ್ನು ಬೆಳೆಸಿಕೊಂಡರು. ನೇಷನ್ ಅಡ್ವೆಂಚರ್ ಫೌಂಡೇಶನ್‌ನ ನಿರ್ದೇಶಕಿ ರುಕ್ಮಿಣಿ ಚಂದ್ರನ್ ನೇತೃತ್ವದಲ್ಲಿ ರಿವರ್ ರಾಫ್ಟಿಂಗ್, ಸಾಹಸ ಜಲ ಕ್ರೀಡೆಗಳಲ್ಲಿ ಮಕ್ಕಳು ಭಾಗವಹಿಸಿ ರೋಮಾಂಚಕ ಅನುಭವವನ್ನು ಪಡೆದುಕೊಂಡರು.

ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜಿಗೆ ಶೇ.98.6 ಫಲಿತಾಂಶ



ನಿಹಾರಿಕಾ–588 ಪೂಜಾ–583 ಇಂಚರ–581 ಪ್ರಿಯಾಂಕ–581 ಪ್ರಿಯಾ–580 ಯಶ್ವಿತಾ–580


ಮೈಸೂರು, ಏ. 22– ಈ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರಿನ ಹೆಬ್ಬಾಳಿನ ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜಿಗೆ ಶೇ. 98.6 ಫಲಿತಾಂಶ ಬಂದಿದೆ. ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಶೇ. 97.8 ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ. 99.3 ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ 48 ಉನ್ನತ ಶ್ರೇಣಿ ಮತ್ತು 53 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದ ನಿಹಾರಿಕಾ ಬಿ.ಎಲ್. –588, ಇಂಚರ ಎ.ಬಿ.–581 ಮತ್ತು ಪ್ರಿಯಾ ಆರ್. –580, ವಾಣಿಜ್ಯ ವಿಭಾಗದಲ್ಲಿ ಪೂಜಾ ಎಲ್. ಪಾಟೀಲ್–583, ಪ್ರಿಯಾಂಕ ಎಸ್.–581 ಮತ್ತು ಯಶ್ವಿತಾ ವಿ.–580 ಅಂಕಗಳನ್ನು ಪಡೆದಿದ್ದಾರೆ.

ಎಂ.ಪಿ.ಅಂಕಿತಾ ಉನ್ನತ ಶ್ರೇಣಿ



ಕೆ.ಆರ್ .ಪೇಟೆ, ಏ. 22– ತಾಲೂಕಿನ ಬಲ್ಲೇನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಎಂ.ಪಿ. ಅಂಕಿತ ವಾಣಿಜ್ಯ ವಿಭಾಗದಲ್ಲಿ 564 (94%) ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಏಳು ವಿದ್ಯಾರ್ಥಿಗಳು ಪ್ರಥಮ ದರ್ಜೆ ಪಡೆದಿದ್ದಾರೆ. ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಶೇಕಡ 100 ಫಲಿತಾಂಶ ಬಂದಿದೆ. ಕಾಲೇಜಿನ ಒಟ್ಟು ಫಲಿತಾಂಶ ಶೇ.79.





ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅರಸನಕೆರೆ ಗ್ರಾಮದ ವಿಶ್ವಕರ್ಮ ಸಮಾಜದ ಮುಖಂಡರಾದ ಎ.ಎನ್.ಸಿದ್ದಪ್ಪಾಜಿ, ನಾರಾಯಣಚಾರಿ, ಸಿದ್ದಪ್ಪಾಜಿ, ರವಿ, ಬಸವರಾಜ್, ರಾಜಾಚಾರಿ, ಸೋಮಶೇಖರಚಾರಿ, ರವಿ, ಮಂಜುನಾಥ್, ಕುಮಾರಚಾರಿ ಇತರರು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಗೆಜ್ಜಗಳ್ಳಿ ಲೋಕೇಶ್, ಗ್ರಾಪಂ ಸದಸ್ಯರಾದ ನವೀನ್ ಪಟೇಲ್ ಇತರರಿದ್ದರು. (ಬಲಚಿತ್ರ) ನಾಡನಹಳ್ಳಿ ಗ್ರಾಮದ ಮಹೇಶ್, ಸೋಮಣ್ಣ, ಬಸವರಾಜು, ಮಹೇಶ್, ಕುಮಾರ್, ಗುರುಸ್ವಾಮಿ, ಹೋಟೆಲ್ ಮಲ್ಲೇಶ್, ಗುಡ್ಡಪ್ಪ, ಮಹದೇವಸ್ವಾಮಿ, ಪ್ರಭು, ಸತ್ಯ, ಸ್ವಾಮಿ, ಶಿವಸ್ವಾಮಿ, ವೆಂಕಟೇಶ್, ಸತೀಶ್, ಬಸವಣ್ಣ, ಕೃಷ್ಣ, ಮಹದೇವ್, ವೆಂಕಟೇಶ್ ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಮಾರ್ಬಳ್ಳಿ ವೆಂಕಟಪ್ಪ, ರವಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ನವೀನ್‌ಕುಮಾರ್ ಹಾಗೂ ನಗರ ಬಿಜೆಪಿ ಓಬಿಸಿ ಉಪಾಧ್ಯಕ್ಷ ರವಿಕುಮಾರ್ ಬಿಜೆಪಿ ತೊರೆದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು. ಈ ವೇಳೆ ಮಾಜಿ ಪಾಲಿಕೆ ಸದಸ್ಯ ಎಂ.ಸುನೀಲ್, ಕಾಂಗ್ರೆಸ್ ಮುಖಂಡರಾದ ರವಿಶಂಕರ್, ಸೋಮು, ಅಭಿಷೇಕ್ ಶಿವಣ್ಣ, ಟೈಲರ್ ಸಿದ್ದು, ಧರ್ಮೇಂದ್ರ ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಏ.22–ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಸಾಹುಕಾರ್ ಚನ್ನಯ್ಯ ಬ್ಲಾಕ್ ವಾರ್ಡ್ ನಂ.37ರ ಮಹಿಳಾ ಘಟಕದ ಅಧ್ಯಕ್ಷರಾಗಿ ರಾಘವೇಂದ್ರ ನಗರದ ನಿವಾಸಿ ಜಯಲಕ್ಷ್ಮಿ ಅವರನ್ನು ನೇಮಕ ಮಾಡಲಾಗಿದೆ.

ನಿಧನ

ಅರ್ಜುನ್‌ದಾಸ್ ಕೆ. ಲುಂದ್



ಮೈಸೂರು, ಏ. 22– ಮೈಸೂರಿನ ಗಾಯತ್ರಿಪುರಂ ಎರಡನೇ ಹಂತದ ನಿವಾಸಿ ಅರ್ಜುನ್‌ದಾಸ್ ಕೆ.ಲುಂದ್ (82) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಮೂವರು ಪುತ್ರರು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರಲಕ್ಷ್ಮಿ ಮಾಲೋತ್ಕರ್




ಮೈಸೂರಿನ ಲಕ್ಷ್ಮೀಪುರಂ ನಿವಾಸಿ ವರಲಕ್ಷ್ಮಿ ಮಲೋತ್ಕರ್(82) ಶುಕ್ರವಾರ ನಿಧನರಾದರು. ಮೃತರು ಮೂವರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಶ್ರೀಮತಿ ತ್ರಿವೇಣಿ




ಮೈಸೂರು ವಿದ್ಯಾರಣ್ಯಪುರಂ 12 ಕ್ರಾಸ್ ನಿವಾಸಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಪಿ.ಬೋರೇಗೌಡರ ಪತ್ನಿ ತ್ರಿವೇಣಿ(58) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಹೆಚ್.ಡಿ.ಕೋಟೆ ತಾಲೂಕು ಬೆಟ್ಟದಬೀಡು ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಪುಟ್ಟಪ್ಪ




ಹುಣಸೂರು ತಾಲೂಕಿನ ಬೀಜಗನಹಳ್ಳಿ ಗ್ರಾಮದ ನಿವಾಸಿ ಪುಟ್ಟಪ್ಪ (83) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರಿಗೆ ಪುತ್ರ, ಪುತ್ರಿ, ಬಂಧು–ಬಳಗವನ್ನು ಅಗಲಿದ್ದಾರೆ. ಬೀಜಗನಹಳ್ಳಿ ಗ್ರಾಮದಲ್ಲಿರುವ ಕುಟುಂಬದ ಜಮೀನಿನಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹೇಂದ್ರಚಾರ್ಯ



ಮೈಸೂರು ಕೆ.ಟಿ.ಸ್ಟ್ರೀಟ್‌ನ ಶ್ರೀ ಕಾಳಿಕಾಂಬ ದೇವಸ್ಥಾನದ ಉಪಾಧ್ಯಕ್ಷ ಮಹೇಂದ್ರಚಾರ್ಯ(76) ಅವರು ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.4.2023 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023ರಿಂದ 24.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ,
ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ರೋಹಿಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ :** ಚುನಾವಣೆ ಹಿನ್ನೆಲೆಯಲ್ಲಿ ಸಾಂಕೇತಿಕ ಹಾಗೂ ಸರಳವಾಗಿ ಶ್ರೀ ಬಸವೇಶ್ವರ ಜಯಂತಿ ಆಚರಣೆ, ಬೆಳಗ್ಗೆ 9.30ಕ್ಕೆ ಡಾ.ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ.

■ **ಜೆಎಸ್‌ಎಸ್ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಆವರಣ, ಸರಗೂರು, ಬೆಳಗ್ಗೆ 10ರಿಂದ.

■ **ಯೂರೋ ಕಿಡ್ಸ್ :** ಉದ್ಘಾಟನಾ ಸಮಾರಂಭ, ಉದ್ಘಾಟನೆ : ನೃತ್ಯ ಪಟು ಶ್ರೀಧರ್ ಜೈನ್, ಅಧ್ಯಕ್ಷತೆ: ವ್ಯವಸ್ಥಾಪಕ ಎಚ್.ಸಿ. ಕೃಷ್ಣೇಗೌಡ ಹಾಗಲಹಳ್ಳಿ, ಸ್ಥಳ: ಆಲನಹಳ್ಳಿ ಬಡಾವಣೆ, ಬೆಳಗ್ಗೆ 10ಕ್ಕೆ.

■ **ಹಿತರಕ್ಷಣಾ ವೇದಿಕೆ ಹಾಗೂ ಜೀವಧಾರ ರಕ್ತನಿಧಿ ಕೇಂದ್ರ :** ಬಸವ ಜಯಂತಿ ಪ್ರಯುಕ್ತ ಮಜ್ಜಿಗೆ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕುದೇರು ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬಿಜೆಪಿ ಕಾರ್ಯಾಧ್ಯಕ್ಷ ಎಚ್.ಜಿ. ಗಿರಿಧರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರದ ಮುಂಭಾಗ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಮೈಸೂರು ಜಿಲ್ಲಾ ಸಮಿತಿ :** 76ನೇ ಸಂಸ್ಥಾಪನಾ ದಿನದ ಅಂಗವಾಗಿ ರಾಜಕೀಯ ಸಮಾವೇಶ, ಉಪಸ್ಥಿತರು : ಕೆ. ರಾಧಾಕೃಷ್ಣ, ಪ.ಎಸ್. ಸಂಧ್ಯಾ, ಜಿ.ಎಸ್. ಸೀಮಾ, ಪ್ರಾಸ್ತಾವಿಕ ನುಡಿ : ಬಿ. ರವಿ, ಅಧ್ಯಕ್ಷತೆ : ಎಂ. ಉಮಾದೇವಿ, ಸ್ಥಳ: ಕುಂಚಿಟಿಗರ ವಿದ್ಯಾರ್ಥಿ ನಿಲಯ ಆವರಣ, ದಿವಾನ್ಸ್ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಮೈಸೂರಿನ ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗ:** ಎನ್.ವಿ.ರಮೇಶ್ ಅವರ 'ಅವಸರದ ಅವಾಂತರ' ಹಾಸ್ಯ ನಾಟಕಗಳ ಸಂಕಲನದ ಬಿಡುಗಡೆ, 'ಅಕ್ಷಯ ತೃತೀಯ–ಬಸವ ಜಯಂತಿ', 'ಶಂಕರ ಜಯಂತಿ' 'ರಾಮಾನುಜಾಚಾರ್ಯ ಜಯಂತಿ' ಹಾಗೂ 'ಡಾ.ರಾಜಕುಮಾರ್' ಜನ್ಮದಿನದ ಸಂದರ್ಭದಲ್ಲಿ ಎನ್.ವಿ.ರಮೇಶ್ ಅವರಿಂದ ಉಪನ್ಯಾಸ ಹಾಗೂ ಕವಿಗೋಷ್ಠಿ, ಉದ್ಘಾಟನೆ: ಹಿರಿಯ ಸಾಹಿತಿ ಬೆಳವಾಡಿ ಅಶ್ವತ್ಥ ನಾರಾಯಣ, ಮುಖ್ಯ ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಾಹಿತ್ಯ ದಾಸೋಹ ಸಂಸ್ಥೆಯ ಪದ್ಮಾ ಆನಂದ್, ಕೃತಿಗಳ ಲೋಕಾರ್ಪಣೆ : ಹಿರಿಯ ರಂಗಕರ್ಮಿ ನಾಗಚಂದ್ರ, ಅಧ್ಯಕ್ಷತೆ: ಸ್ನೇಹ ಸಿಂಚನ ಸಂಸ್ಥೆ ಅಧ್ಯಕ್ಷೆ ಲತಾ ಮೋಹನ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 2.30ಕ್ಕೆ.

■ **ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಶ್ರೀ ಬಸವೇಶ್ವರ ಜಯಂತಿ :** ಅಂತರ್‌ದೃಷ್ಟಿ ಮಹತ್ವ ಮತ್ತು ಪ್ರದರ್ಶನ, ವಿದ್ಯಾರ್ಥಿಗಳಿಗೆ ಪಿರಮಿಡ್ ಕ್ಯಾಪ್ ಮತ್ತು ಅಂತರ್‌ದೃಷ್ಟಿ ಬಾಕ್ಸ್ ವಿತರಣಾ ಸಮಾರಂಭ, ಅಧ್ಯಕ್ಷತೆ : ಅಕಾಡೆಮಿ ಸಂಸ್ಥಾಪಕ ಶಿವಪ್ರಕಾಶ್ ಗುರೂಜಿ, ಅಂತರ್‌ದೃಷ್ಟಿ ಮಹತ್ವ : ಆಧ್ಯಾತ್ಮಿಕ ಚಿಂತಕ ಡಾ. ರಾಮಚಂದ್ರ ನಾಯಕ್, ಪಿರಮಿಡ್ ಮಹತ್ವ ಮತ್ತು ಧ್ಯಾನ : ಚನ್ನಬಸವ ಮೊಮ್ಮನಾಲ್, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 4ಕ್ಕೆ

■ **ನಿನಾದ್ ಮ್ಯೂಸಿಕಲ್ ಟ್ರಸ್ಟ್, ಫಿಲಂ ಹಿಟ್ಸ್ ಗ್ರೂಪ್ :** ಎ.ಆರ್. ರೆಹಮಾನ್, ಆರ್.ಡಿ. ಬರ್ಮನ್, ಜಿ.ಕೆ. ವೆಂಕಟೇಶ್ ಹಾಗೂ ಬಪ್ಪಿಲಹರಿ ಅವರ ಸಂಗೀತ ನಿರ್ದೇಶನದ ಚಲನಚಿತ್ರ ಗೀತಾ ಗಾಯನ ಕಾರ್ಯಕ್ರಮ, ಸ್ಥಳ: ಗಾನಭಾರತಿ (ರಮಾ ಗೋವಿಂದ ಕಲಾ ವೇದಿಕೆ), ಕುವೆಂಪುನಗರ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 8.30 ಹಾದಿಯಲ್ಲಿ ಕಂಡ ಮುಖ, ಭಾಗವಹಿಸುವವರು– ಬೆಲ್ಜಿಯಂ ಸಂಜಾತ, ಡೆನ್ಮಾರ್ಕ್ ದೇಶಸ್ಥ, ಮೈಸೂರು ವಾಸಿ ಹೆನ್ರಿಕ್ ಹರ್ದಮನ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ– ಅಬ್ದುಲ್ ರಶೀದ್, 9.30 ಚುನಾವಣೆ 2023 –ವಿಧಾನಸಭಾ ಕ್ಷೇತ್ರ ಪರಿಚಯ, 9.45 ನಮ್ಮ ಆರೋಗ್ಯ "ಮಕ್ಕಳಲ್ಲಿ ತಲೆನೋವು ಕುರಿತು ಡಾ. ವೇಣುಗೋಪಾಲಕೃಷ್ಣ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ವಿ.ವಿ.ಎಸ್. ಬಿ.ಎಂ.ಶ್ರೀ ಶಾಲಾ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಬಾಲ್ಯವಿವಾಹ ಮತ್ತು ದೇವದಾಸಿ ಪದ್ಧತಿ ವಿರುದ್ಧ ಜನಜಾಗೃತಿ ಮೂಡಿಸುತ್ತಿರುವ ಕಾರ್ಯಕರ್ತೆಯರ ಜೊತೆ ಮಾತುಕತೆ, 11.00ಸಾಲಿಟ್ಟು ಹಣತೆ ಬೆಳಗೀವು, ಪ್ರಸ್ತುತಿ–ಡಾ.ಮೈಸೂರು ಉಮೇಶ್ **ಮಧ್ಯಾಹ್ನ:** 12.30 ದೇವರನಾಮ –ಶಂಕರ್ ಶ್ಯಾನುಭೋಗ್, ಎನ್.ಶ್ರೀನಾಥ್, 12.45 ಜನಪದ ಸಂಗೀತ–ಮದ್ದೂರಮ್ಮ ಮತ್ತು ತಂಡ, 1.00 ರಂಗಗೀತೆಗಳು–ಸಂಪೂರ್ಣ ರಾಮಾಯಣ ನಾಟಕದ ಹಾಡುಗಳು, 1.20 ಭಾವಗೀತೆಗಳು–ಕೆ.ಎಸ್.ಸುರೇಖಾ, ಎನ್.ಅಪರ್ಣಾ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಮಾರುತೀ ಪ್ರತಾಪ, ಪ್ರಸ್ತುತಿ–ಮಂಗಳೂರು ಶಕ್ತಿನಗರದ ಕರಾವಳಿ ಯಕ್ಷಗಾನ ಮಿತ್ರ ಮಂಡಳಿ ಕಲಾವಿದರು, 5.05 ಮಿತ್ರ ಮಾಧುರ್ಯ, 6.55 ಕೃಷಿರಂಗ–ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಣೆಯಾದ 50 ವರ್ಷಾಚರಣೆಯ ಸಂದರ್ಭದಲ್ಲಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರು ಹಾಗೂ ಅರಣ್ಯ ಸಂರಕ್ಷಣಾಧಿಕಾರಿ ಡಾ.ರಮೇಶ್‌ಕುಮಾರ್ ಅವರೊಂದಿಗೆ ಮಾತುಕತೆ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಶಿಲ್ಪಿ, ಮೈಸೂರಿನ ಅರುಣ್‌ಯೋಗಿರಾಜ್ ಅವರೊಂದಿಗೆ ಸಂವಾದ ನಡೆಸಿಕೊಡುತ್ತಾರೆ–ದಿವಾಕರ ಹೆಗಡೆ, 9.15 ರಂಗಗೀತೆಗಳು–ರಾಜಾ ವಿಕ್ರಮ ನಾಟಕದ ಹಾಡುಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಸೋನಿಯಾ ರಾಯ್– ಹಾಡುಗಾರಿಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಶ್ರೀ ಮುರಳೀಧರದಾಸ್ ಅವರಿಂದ ಜಗನ್ನಾಥದಾಸರ ಹರಿಕಥಾಮೃತಸಾರ ಕುರಿತು ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಅಮೃತವರ್ಷಿಣಿ ಗಾನವೃಂದ:** ಡಾ.ರಾಜ್, ವಾಣಿ ಜಯರಾಂ, ಭಗವಾನ್ ಅವರಿಗೆ ಗಾನನಮನ, ಕನ್ನಡ ಚಲನಚಿತ್ರ ಗೀತೆಗಳ ಕರೋಕೆ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ, ಶ್ರೀ ಸಾಯಿ ಮೆಲೋಡಿಸ್:** ಡಾ.ರಾಜ್–ಗಾನ ಸವಿಸಂಜೆ ಹಾಗೂ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ: ಮಾಜಿ ರಾಜ್ಯಪಾಲ ಲಯನ್ ಕೆ.ದೇವೇಗೌಡ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದಿತರು: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಡಾ.ಬಿ.ಎನ್.ರವೀಶ್, ಅಭಿನಂದಿಸುವವರು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು: ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಡಾ. ವೈ.ಡಿ. ರಾಜಣ್ಣ, ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಅಧ್ಯಕ್ಷ ಎನ್.ಬೆಟ್ಟೇಗೌಡ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅದಮ್ಯ ರಂಗಶಾಲೆ, ಜೆಪಿಐಇಆರ್ ರಂಗ ತಂಡ :** ಹನುಮಂತ ಹಾಲಗೇರಿ ರಚನೆಯ 'ಊರು ಸುಟ್ಟರೂ ಹನುಮಪ್ಪ ಹೊರಗ' ನಾಟಕ ಪ್ರದರ್ಶನ, ನಿರ್ದೇಶನ : ಸಿ. ವಿನೋದ್, ಬೆಳಕಿನ ವಿನ್ಯಾಸ : ಮಧು ಮಳವಳ್ಳಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ :** ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯುತ್ಸವ, ಬೆಳಗ್ಗೆ 7ರಿಂದ ಶ್ರೀ ಬಸವೇಶ್ವರರ ಜಯಂತಿ ಅಂಗವಾಗಿ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಮಧ್ಯಾಹ್ನ 2.30ಕ್ಕೆ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಪ್ರೊ. ಡಿ.ಎಸ್. ಸದಾಶಿವಮೂರ್ತಿ, ದೇವನೂರು, ಅಧ್ಯಕ್ಷತೆ : ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಸ್. ರಮಾನಂದ, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ.

■ **ನಟನ ರಂಗಶಾಲೆ :** ಅಭಿಯಂತರರು ಮೈಸೂರು ಅವರಿಂದ 'ಮರಣ ಮೃದಂಗ' ನಾಟಕ ಪ್ರದರ್ಶನ, ನಿರ್ದೇಶನ : ರಂಗಕರ್ಮಿ ರಾಜೇಂದ್ರ ಕಾರಂತ, ರಂಗ ನಿರ್ವಹಣೆ : ಹೆಚ್.ಎಸ್. ಸುರೇಶ್‌ಬಾಬು, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ರಂಗಾಯಣ:** ರಂಗಾಯಣದ ಭಾರತೀಯ ರಂಗ ವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಂದ ಹಾನೂಶ್ ನಾಟಕ ಪ್ರದರ್ಶನ, ನಿರ್ದೇಶನ: ಚಿತ್ತರಂಜನ್ ಗಿರಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ನಕ್ಕರೆ ಅದೇ ಸ್ವರ್ಗ

ಆತ : ನಿನ್ನ ಹೆಂಡತಿ ಹೆಚ್ಚು ಸಮಯ ಅಡಿಗೆ ಮನೇಲೇ ಕಳೀತಾಳಾ?

ಈತ : ಹೌದು

ಆತ : ಹಾಗಾದರೆ ಅವಳು ಒಳ್ಳೆ ಅಡಿಗೆ ಮಾಡ್ತಾಳೆ ಅಲ್ವಾ?

ಈತ : ಹಾಗೇನಿಲ್ಲ, ನಮ್ಮ ಟೆಲಿಫೋನು ಅಡಿಗೆ ಮನೇಲಿದೆ.

ಮೈಸೂರು ಮಿತ್ರ

ಭಾನುವಾರ, 23 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಯಾವುದೇ ಕೆಲಸವನ್ನು ಮಾಡುವ ಕುರಿತು ಅತಿಯಾಗಿ ಚಿಂತಿಸುತ್ತಾ ಕುಳಿತರೆ ಆ ಕೆಲಸವನ್ನು ನೀವು ಎಂದೂ ಪೂರ್ಣಗೊಳಿಸುವುದಿಲ್ಲ. –ಬ್ರೂಸ್‌ಲೀ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನವಿಲು ಕುಣಿಯಿತೆಂದು ಕೆಂಬೂತವೂ ಕುಣಿಯಿತಂತೆ!

ನಿಮ್ಮ ಪತ್ರಗಳು

ಉತ್ತಮ ಸರ್ಕಾರದ ರಚನೆಗೆ ಕೈಜೋಡಿಸೋಣ

ಮಾನ್ಯರೆ,

ಮುಂಬರಲಿರುವ ರಾಜ್ಯ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕಡೆಯ ದಿನಾಂಕ ಮುಕ್ತಾಯಗೊಳ್ಳುವುದರೊಂದಿಗೆ ರಾಜ್ಯ ವಿಧಾನಸಭಾ ಚುನಾವಣಾ ಅಖಾಡ ಸಿದ್ಧವಾಗಿದೆ. ಟಿಕೆಟ್ ವಂಚಿತರಾಗಿ ಆ ಪಕ್ಷದಿಂದ ಈ ಪಕ್ಷಕ್ಕೆ ಹಾಗೂ ಈ ಪಕ್ಷದಿಂದ ಆ ಪಕ್ಷಕ್ಕೆ ಜಿಗಿದವರ ಸಂಖ್ಯೆ ಕೂಡ ಹೆಚ್ಚಿದೆ. ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿಯಂತಹ ಮುಂಚೂಣಿ ನಾಯಕರು ತಮ್ಮ ಮನೆಯನ್ನು ಬದಲಾಯಿಸಿದ್ದಾರೆ.

ರಾಜಕೀಯದಲ್ಲಿ ಪಕ್ಷಾಂತರ ಎನ್ನುವುದು ಈಗ ಸರ್ವೇ ಸಾಮಾನ್ಯವಾಗಿದೆ. ಕೆಲವರು ಅಧಿಕಾರ, ಅಂತಸ್ತು ಇತ್ಯಾದಿಗಳಿಗೆ ಪಕ್ಷಾಂತರ ಮಾಡಿದರೆ, ಕೆಲವೇ ಕೆಲವು ಮಂದಿ ಮಾತ್ರ ಸ್ವಾಭಿಮಾನಕ್ಕಾಗಿ ಪಕ್ಷಾಂತರ ಮಾಡಬಹುದು.

ಮುಂದಿನ ತಿಂಗಳ ಹತ್ತರಂದು ನಡೆಯುವ ಚುನಾವಣೆ ರಾಜ್ಯದ ಮೂರು ರಾಜಕೀಯ ಪಕ್ಷಗಳಿಗೆ ಅಗ್ನಿಪರೀಕ್ಷೆಯಾಗಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಪಾಲಿಗೂ ಇದೊಂದು ರೀತಿಯ ಅಗ್ನಿಪರೀಕ್ಷೆ. ಏಕೆಂದರೆ, ಬಿಜೆಪಿ ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತಿದೆ. ಅತ್ತ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ಡಿಕೆಶಿ ಹಾಗೂ ಮತ್ತೊಂದು ಅವಧಿಗೆ ಮುಖ್ಯಮಂತ್ರಿಯಾಗಲು ಬಯಸುತ್ತಿರುವ ಸಿದ್ದರಾಮಯ್ಯನವರಿಗೂ ಇದು ಅಗ್ನಿಪರೀಕ್ಷೆಯೇ ಸರಿ. ಈ ಹಿಂದಿನ ಅನೇಕ ಚುನಾವಣೆಗಳಲ್ಲಿ ಅಚ್ಚರಿಯ ಫಲಿತಾಂಶ ಹೊರಬಿದ್ದಿದ್ದು, ಮತದಾರರ ನಾಡಿಮಿಡಿತ ಅರಿಯುವುದೇ ಕಷ್ಟವಾಗಿದೆ.

ಕೆಲವು ಸಮೀಕ್ಷೆಗಳ ಪ್ರಕಾರ ಈ ಬಾರಿ ಕೂಡ ಅತಂತ್ರ ಪರಿಸ್ಥಿತಿ ತಲೆದೋರಬಹುದು. ಫಲಿತಾಂಶ ಪ್ರಕಟವಾದ ನಂತರ, ಯಾವುದೇ ತರಹದ ಪರಿಸ್ಥಿತಿ ಎದುರಿಸಲು ಈ ಮೂರು ಪಕ್ಷಗಳು, ಈಗಾಗಲೇ ತೆರೆಮರೆಯ ಕಸರತ್ತು ನಡೆಸುತ್ತಿವೆ ಎಂದು ಹೇಳಲಾಗಿದೆ. ತಾರಾ ಪ್ರಚಾರಕರು ಇನ್ನು ಒಂದೆರಡು ದಿನಗಳಲ್ಲಿಯೇ ವಿವಿಧ ಚುನಾವಣಾ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಒಟ್ಟಿನಲ್ಲಿ ಈ ಬಾರಿಯ ಚುನಾವಣೆ ಕಳೆದ ಚುನಾವಣೆಗಳಿಗಿಂತ ಹೆಚ್ಚಿನ ಕುತೂಹಲವನ್ನು ಹುಟ್ಟುಹಾಕಿದೆ. ಆದರೆ ಮತದಾರರಾದ ನಾವು, ನಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಹಾಗೂ ಅಭ್ಯರ್ಥಿಗಳ ಹಿಂದಿನ ಸಾಧನೆಗಳನ್ನು ಓರೆಗೆ ಹಚ್ಚಿ ಮತ ಚಲಾಯಿಸಿ ಉತ್ತಮ ರೀತಿಯ ಸರ್ಕಾರದ ರಚನೆಗೆ ಕೈಜೋಡಿಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಎರಡು ರತ್ನಗಳು



ಮಾನ್ಯರೆ,

ಮನುಷ್ಯ ಸಾಕು ಎನ್ನುವುದು ಎಲೆ ಮುಂದೆ ಊಟಕ್ಕೆ ಕೂತಾಗ ಮಾತ್ರ. ಉಳಿದಂತೆ ಇನ್ನೂ ಬೇಕು, ಮಗ–ಮಗಳು ಇತ್ಯಾದಿ ಎಲ್ರಿಗೂ ಬೇಕು ಎಂದು ಹೇಳ್ತಾನೆ. ಇದು ರಾಜಕಾರಣಿಗಳಿಗೆ ಚೆನ್ನಾಗಿ ಹೊಂದುತ್ತದೆ. ಅವರನ್ನು ನೋಡಿದ್ರೆ ಹೇಸಿಗೆ ಆಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮೈಸೂರಿನಲ್ಲಿ ಇಬ್ಬರು ಚುನಾವಣೆಯಲ್ಲಿ ನಿಲ್ಲಲು ಟಿಕೆಟ್ ಸಿಗದಿದ್ರೂ, ಪಕ್ಷ ಬಿಡದೆ, ಬಂಡಾಯ ಏಳದೆ ಪಕ್ಷಕ್ಕೆ ನಿಯತ್ತಾಗಿ ಸಾಮಾನ್ಯ ಕಾರ್ಯಕರ್ತರಾಗಿ ಇರುವುದಾಗಿ ಹೇಳಿದ್ದಾರೆ. ಅವರು ಕಾಂಗ್ರೆಸ್‌ನ ವಾಸು ಮತ್ತು ಬಿಜೆಪಿಯ ರಾಮದಾಸ್. ಈ ಮೂಲಕ ಜನಗಳ ಹೃದಯ ಗೆದ್ದಿದ್ದಾರೆ. ಪ್ರಬುದ್ಧತೆ ಮೆರೆದಿದ್ದಾರೆ. ಬಂಡಾಯ ಎದ್ದಿರುವ ಇತರರು ಇವರೆದುರು ತೀರಾ ಸಣ್ಣವರಾದರು. ಟಿಕೆಟ್‌ಗಾಗಿ ಪಕ್ಷ ತೊರೆದವರು (ಹೆಸರು ಬೇಡ) ಇವರ ಆದರ್ಶ ಪಾಲಿಸಬಹುದಿತ್ತಲ್ಲವೇ? ಜೈ ವಾಸು, ಜೈ ರಾಮದಾಸ್ (ಅಂದಹಾಗೆ ಇವರಿಬ್ಬರನ್ನು ನಾನು ನೋಡಿಯೂ ಇಲ್ಲ, ಪರಿಚಯವೂ ಇಲ್ಲ. ಪೇಪರ್‌ನಲ್ಲಿ ಓದಿ ಇವರ ಬಗ್ಗೆ ತಿಳಿದಿರುವುದು. ನೀವು ಕಾಯಿರಿ ಅಚ್ಛೇದಿನ್ ಆತಾ ಹೈ.

–ಅಕ್ಕಿಹೆಬ್ಬಾಳ್ ವೆಂಕಟೇಶ್, ಮೈಸೂರು

ಶ್ರೀ ಚಾಮರಾಜೇಂದ್ರ ಮೃಗಾಲಯ ಪ್ರಾಧಿಕಾರದ ಗಮನಕ್ಕೆ

ಮಾನ್ಯರೆ,



ಏ.19ರಂದು ಶ್ರೀ ಚಾಮರಾಜೇಂದ್ರ ಮೃಗಾಲಯ ವೀಕ್ಷಿಸಲೆಂದು ಹೋಗಿದ್ದಾಗ, ದ್ವಿಚಕ್ರ ವಾಹನಗಳ ಪಾರ್ಕಿಂಗ್ ಶುಲ್ಕವನ್ನು ಕೇಳಿ ದಿಗ್ಭ್ರಮೆಯಾಯಿತು, 4 ಗಂಟೆಗಳ ಅವಧಿಗೆ 40 ರೂ. ದ್ವಿಚಕ್ರ ವಾಹನಗಳ ಶುಲ್ಕವಾಗಿದ್ದು, 4 ಗಂಟೆಗಳ ನಂತರ 1 ನಿಮಿಷವಾದರೂ ಮತ್ತೆ 10 ರೂ.ಗಳ ಶುಲ್ಕವನ್ನು ಹೆಚ್ಚಾಗಿ ವಿಧಿಸುತ್ತಾರೆ. ಮತ್ತೆ ಒಂದು ಗಂಟೆ ಆದರೆ ಪ್ರತಿ ಗಂಟೆಗೊಮ್ಮೆ 10 ರೂ.ಗಳನ್ನು ಹೆಚ್ಚಿಗೆ ವಿಧಿಸುತ್ತಾರೆ. ಇತರೇ ವಾಹನಗಳ ಶುಲ್ಕವು ದುಬಾರಿಯಾಗಿದೆ. ಮೃಗಾಲಯ ವೀಕ್ಷಣೆಗೆ ಬರುವವರು ಗ್ರಾಮೀಣ ಭಾಗದ ಬಡ, ಮಧ್ಯಮ ವರ್ಗದ ಜನರು, ಬೇರೆ ಬೇರೆ ಜಿಲ್ಲೆ, ರಾಜ್ಯ, ದೇಶ, ವಿದೇಶಗಳಿಂದ ವೀಕ್ಷಣೆಗೆಂದು ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಮೃಗಾಲಯದಲ್ಲಿರುವ ಅನೇಕ ಪ್ರಾಣಿ, ಪಕ್ಷಿಗಳನ್ನು ದಾನಿಗಳು ದತ್ತು ಪಡೆದು ಖರ್ಚು, ವೆಚ್ಚಗಳನ್ನು ಭರಿಸುತ್ತಿದ್ದಾರೆ. ಇಷ್ಟಾಗಿಯೂ ಮೃಗಾಲಯ ಪ್ರಾಧಿಕಾರವು ದುಬಾರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರಿಯಲ್ಲ. ಇದು ಹಗಲುದರೋಡೆಯಾಗಿದೆ. ಹಣ ಗಳಿಸುವುದೇ ಮೃಗಾಲಯದ ಮುಖ್ಯ ಉದ್ದೇಶವಾಗಬಾರದು. ಮೃಗಾಲಯ ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ. ದುಬಾರಿ ಶುಲ್ಕದ ಬಗ್ಗೆ ಅನೇಕ ಬಾರಿ ಟೀಕೆಗಳು ವ್ಯಕ್ತವಾಗಿದ್ದರೂ, ಶುಲ್ಕವನ್ನು ಇಳಿಕೆ ಮಾಡದೆ ಮೊಂಡುತನವನ್ನು ತೋರಿ, ಪ್ರವಾಸಿಗರ ಕೆಂಗಣ್ಣಿಗೆ ಗುರಿಯಾಗಿದೆ. ಇನ್ನಾದರೂ ಎಚ್ಚೆತ್ತುಕೊಂಡು, ಶ್ರೀ ಚಾಮರಾಜೇಂದ್ರ ಮೃಗಾಲಯ ಪ್ರಾಧಿಕಾರ ಪ್ರವಾಸಿಗರ ಹಿತದೃಷ್ಟಿಯಿಂದ ದುಬಾರಿ ಪಾರ್ಕಿಂಗ್ ಶುಲ್ಕ ಮತ್ತು ಪ್ರವೇಶ ಶುಲ್ಕವನ್ನು ಕಡಿತಗೊಳಿಸಬೇಕೆಂದು ವಿನಂತಿ.

–ಪರಶಿವಮೂರ್ತಿ ಎನ್.ಪಿ, ಸರಗೂರು ತಾ.

ಸಮೀಕ್ಷೆಯಿಂದ ಕದನಕ್ಕೆ ನಾಂದಿ

ಮಾನ್ಯರೆ,

ದಿನದಿಂದ ದಿನಕ್ಕೆ ಚುನಾವಣೆಯ ಪ್ರಚಾರ ಜೋರಾಗಿದೆ. ಮೊಬೈಲ್, ದೂರದರ್ಶನ, ಪತ್ರಿಕೆಯು ಇದಕ್ಕೆ ಹೊರತಾಗಿಲ್ಲ. ತಮಗೆ ಇಷ್ಟ ಬಂದವರ ಬಗ್ಗೆ ಬಹಿರಂಗವಾಗಿ ಇಲ್ಲವೇ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಅದು ಸಹಜ. ಇದರ ಜೊತೆಗೆ ಎಲ್ಲೆಡೆ ಹಲವಾರು ಪಕ್ಷದವರ ಒಂದೆಡೆ ಸೇರಿಸಿ ಸಮೀಕ್ಷೆ ನಡೆಸುತ್ತಿದ್ದಾರೆ. ಯಾವ ಪಕ್ಷಕ್ಕೆ ಓಟು ಹಾಕುತ್ತೀರಾ. ಆ ಪಕ್ಷದವರು ಏನು ಕೆಲಸ ಮಾಡಿದ್ದಾರೆ ಎಂದು ಸಮೀಕ್ಷೆ ವೇಳೆ ಪ್ರಶ್ನೆ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಕದನಕ್ಕೆ ನಾಂದಿಯಾಗುತ್ತದೆ. ಆ ಸ್ಥಳದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದವರು ಸಾಕಷ್ಟು ಸಂಖ್ಯೆಯಲ್ಲಿ ಸೇರಿರುತ್ತಾರೆ. ಪರ, ವಿರುದ್ಧ ವಾದ ಮಾಡುವಾಗ ಅಲ್ಲಿ ಗಲಾಟೆ, ಹೊಡೆದಾಟ ನಡೆಯುವ ಸಂಭವವಿರುತ್ತದೆ. ಪ್ರತಿಯೊಬ್ಬರು ಮುಖಸ್ತುತಿಗೆ ಸಾರ್ವಜನಿಕರೊಂದಿಗೆ ಮಾತನಾಡುತ್ತಾರೆ. ಸಮೀಕ್ಷೆಯಿಂದ ಸೋಲು ಗೆಲುವು ನಿರ್ಧರಿಸುವುದಕ್ಕೆ ಆಗುವುದಿಲ್ಲ. ಗಲಾಟೆಗೆ ಅವಕಾಶ ಕೊಟ್ಟಂತೆ ಆಗುತ್ತದೆ. ಆದ್ದರಿಂದ ಸಮೀಕ್ಷೆ ಮಾಡಿ ಕದನಕ್ಕೆ ನಾಂದಿ ಹಾಡಬೇಡಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ, ಮೈಸೂರು.

ಪುಸ್ತಕ ವಿಮರ್ಶೆ

ಭೈರಪ್ಪನವರ ಕೃತಿಗಳಲ್ಲಿ ತಾಯ್ತನದ ತೆರೆಗಳು

–ಪ್ರೊ. ಜಿ.ಎಲ್.ಶೇಖರ್

ತಮ್ಮ "ಭಾವಶಕ್ತಿಯ ಮೂಲ" ಎಂದಿದ್ದಾರೆ ಭೈರಪ್ಪನವರು. ಅಂತಹ ಭಾವಶಕ್ತಿಯ ಮೂಲದಿಂದ ಚೈತನ್ಯ ಪಡೆದು ತಾಯ್ತನದ ಅನಂತ ಮುಖಗಳನ್ನು ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ಹೇಗೆ ಅಭಿವ್ಯಕ್ತಿಸಿದರೆಂಬುದನ್ನು, ಎಲ್.ವಿ. ಶಾಂತಕುಮಾರಿಯವರು "ಭೈರಪ್ಪನವರ ಕೃತಿಗಳಲ್ಲಿ ತಾಯ್ತನದ ತೆರೆಗಳು" ವಿಮರ್ಶಾ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ.



ಪ್ರೊ. ಜಿ.ಎಲ್.ಶೇಖರ್


ತಾಯ್ತನ ಎಂಬ ಸತ್ತ್ವವು, ಸತ್ಯವು, ಸೃಷ್ಟಿಯಾದ್ಯಂತ ಸತತವಾಗಿ ತನ್ನನ್ನು ತಾನು ಸಾರ್ಥಕ್ಯಗೊಳಿಸಿಕೊಳ್ಳುತ್ತಿರುತ್ತದೆಂಬುದನ್ನು ಕಾಣಬಹುದು. ಮೊಟ್ಟೆಗಳನ್ನು ಬಾಯಲ್ಲಿ ಕಚ್ಚಿಕೊಂಡು ಶಿಸ್ತಾಗಿ ಸಾಲುಗಟ್ಟಿ ನಡೆಯುವ ಇರುವೆಗಳು, ಸಾವಿರಾರು ಮೈಲುಗಳ ದೂರವನ್ನು ಆಕಾಶ ಮಾರ್ಗದಲ್ಲಿ ಕ್ರಮಿಸಿ ವಲಸೆ ಬಂದು ಗೂಡು ಕಟ್ಟಿ ಮೊಟ್ಟೆಯಿಟ್ಟು ಮರಿ ಮಾಡಿಕೊಳ್ಳುವ ಹಕ್ಕಿಗಳು, ತಮ್ಮ ಮರಿಗಳಿಗೆ ಮೆತ್ತನೆಯ ಸುರಕ್ಷಿತ ಗೂಡು ಕಟ್ಟುವ, ಅವುಗಳಿಗೆ ಆಹಾರ ನೀಡುವ ತಾಯ್ತನದ ಕೌಶಲ, ಕಾಳಜಿಗಳು, ಕ್ರೂರಮೃಗಗಳಲ್ಲಿ ಹಾಗೂ ಸಾಧು ಪ್ರಾಣಿಗಳಲ್ಲಿಯೂ ಕಂಡುಬರುವ ತಮ್ಮ ಸಂತಾನದ ಬಗೆಗಿನ ಮಮತೆಯ ತಾಯ್ತನ, ಆಮೆ, ಮೊಸಳೆ, ಸರ್ಪಗಳಿಂದ ತಮ್ಮ ಮೊಟ್ಟೆಗಳನ್ನು ರಕ್ಷಿಸಿ, ಮರಿ ಮಾಡುವ ತಾಯ್ತನ ಹೀಗೆ ವಿಶ್ವಾದ್ಯಂತ ಪ್ರಕಟಗೊಳ್ಳುವ ತಾಯ್ತನವನ್ನು ಪ್ರಸ್ತಾಪಿಸಿ, ಮಾನವರಲ್ಲಿ ಈ ತಾಯ್ತನ ತಳೆಯುವ ವಿವಿಧ ಆಯಾಮಗಳು ಭೈರಪ್ಪನವರ ಕೃತಿಗಳಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ಶಾಂತಕುಮಾರಿ ವಿವರಿಸಿದ್ದಾರೆ.

ವ್ಯಕ್ತಿಯ ಜೀವನವನ್ನು ರೂಪಿಸುವುದರಲ್ಲಿ ತಾಯಿಯ ಪಾತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿದೆ ಎನ್ನುವುದು ಸಾಮಾನ್ಯವಾಗಿ ಎಲ್ಲರೂ ಸಹಮತಿಸುವ ಸಂಗತಿಯಾಗಿದೆ. ತಾಯಿ ಎನ್ನುವ ಭಾವದ ಆಯಾಮಗಳು ಪ್ರತಿ ಹೆಣ್ಣಿನಲ್ಲಿಯೂ ಸುಪ್ತವಾಗಿ ಕೆಲವೊಮ್ಮೆ ಜಾಗ್ರತವಾಗಿ ಕಂಡುಬರುತ್ತವೆ. ಸೀರೆ ಉಟ್ಟಿರಲಿ, ಜೀನ್ಸ್, ಬಿಕನಿ, ಸ್ಕರ್ಟ್ ಧರಿಸಿರಲಿ, ಕ್ಯಾಟ್ವಾಕ್ ಮಾಡುತ್ತಾ ಫ್ಯಾಷನ್ ಷೋಗಳಲ್ಲಿ ಭಾಗವಹಿಸುವ ಸೆಲೆಬ್ರೆಟಿಗಳಿರಲಿ ಈ ಎಲ್ಲಾ ಸ್ವರೂಪಗಳ ಹಿಂದಿನಿಂದ ತಾಯ್ತನದ ಒಂದು ಮುಖ ಇಣುಕುತ್ತಿರುತ್ತದೆ. ತಾಯ್ತನ ಎಂಬ ಡಿ.ಎನ್.ಎ. ಹೆಣ್ಣಿನ ಅಸ್ತಿತ್ವದ ಅವಿನಾಶಿ ಅಂಶವಾಗಿದೆ, ತತ್ತ್ವವಾಗಿದೆ.

ಇಂತಹ ತಾಯ್ತನದ ಹಲವಾರು ಆಯಾಮಗಳು ಭೈರಪ್ಪನವರ ಸಣ್ಣಕತೆಯಿಂದ ಆರಂಭವಾಗಿ 'ಉತ್ತರ ಕಾಂಡ'ದ ತನಕವೂ ಹರಡಿ ನಿಂತಿವೆ. ಅಮ್ಮ, ಅತ್ತೆ, ಪತ್ನಿ, ಸೋದರಿಯರು, ಸೊಸೆ, ಪತಿವ್ರತೆ, ಚರಿತ್ರಹೀನೆ, ಕೊಲೆಗಾರ್ತಿ, ಸಮಾಜದ ನಿಂದನೆಗೊಳಗಾದ ವೇಶ್ಯೆ, ಎಲ್ಲಾ ಪಾತ್ರಗಳಲ್ಲಿ, ತಾಯ್ತನದ ಅಕ್ಕರೆ, ಸ್ವಾರ್ಥ, ಮತ್ಸರ ಸಂತಾನದ ಬಗೆಗೆ ಕಾಳಜಿ ಮನೆ ಮಾಡಿರುವುದನ್ನು ನಾವು ಕಾಣುತ್ತೇವೆ. ಆ ಗುಣಗಳ ಪರಿಚಯವೇ 'ತಾಯ್ತನದ ತೆರೆಗಳು'

ಭೈರಪ್ಪನವರು ಹದಿಹರೆಯದಲ್ಲಿ ಬರೆದ 'ಗತಜನ್ಮ' ನೀಳ್ಗತೆಯಲ್ಲಿ 'ಸತ್ತಿಲ್ಲ' ಮೊದಲಾದ ಸಣ್ಣ ಕತೆಗಳಲ್ಲಿ ಕೂಡ ತಾಯ್ತನದ ಒಲುಮೆ ಕಾಳಜಿಗಳ ನಡುವೆ, ಆ ತಾಯಿಯರ ಬವಣೆಯೂ ಪರಿಚಯವಾಗುತ್ತವೆ. ತಾಯ್ತನ ಎನ್ನುವುದು ಹಡೆದ ತಾಯಿಯರಲ್ಲಿ ಮಾತ್ರವೇ ಅಭಿವ್ಯಕ್ತವಾಗುವಂತಹುದಲ್ಲ. ತಂದೆಯರಲ್ಲಿಯೂ ತಾಯ್ತನದ ಅಂಶವಿರುತ್ತದೆ ಎನ್ನುವುದನ್ನು ಶಾಂತಕುಮಾರಿಯವರು 'ಪ್ರತಿಭಾನ' ಎಂಬ ತಮ್ಮ ಕೃತಿಯಲ್ಲಿ 'ಭೈರಪ್ಪನವರ ಕಾದಂಬರಿಗಳಲ್ಲಿ ತಂದೆಯ ಪಾತ್ರ'' ಎಂಬ ದೀರ್ಘ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. (ಗೃಹಭಂಗದ ಮಾದೇವಯ್ಯನವರನ್ನು ಉದಾಹರಿಸಬಹುದು).

'ಗೃಹಭಂಗ'ದ ನರಸಿ ಸಂಸಾರವನ್ನು ತೊರೆದು ಬಂದು ಹಲವು ಪುರುಷರ ಜೊತೆ ಸಂಪರ್ಕವಿರಿಸಿಕೊಂಡಿದ್ದು ಹೆಣ್ಣೆ ಮಕ್ಕಳಿರದಿದ್ದರೂ, ಅವಳಲ್ಲಿ ತಾಯ್ತನದ ಪ್ರೀತಿ ವಿಶ್ವನ ಬಗೆಗೆ ಹೊನಲಾಗಿ ಹರಿಯುತ್ತದೆ. ಭೈರಪ್ಪನವರ ನಿಜ ಜೀವನದ ತಾಯಿ ಗೌರಮ್ಮನವರು ತಮ್ಮ ಮಗನನ್ನು ಬಾಲ್ಯದಿಂದಲೇ ಪ್ರಭಾವಿಸಿ, ಅವನ ಎಳೆತನದಲ್ಲಿಯೇ ಆಕೆ ಮರಣ ಹೊಂದಿದ್ದರೂ, ತಮ್ಮ ಸಾವಿನ ನಂತರವೂ ಮಗ ಸತ್ಯಪಥದಲ್ಲಿ ನಡೆಯುವಂತೆ ಪ್ರಭಾವಿಸಿದರು. ಈ ಚಿತ್ರಣವನ್ನು ಗೃಹಭಂಗದ ನಂಜಮ್ಮನ ಪಾತ್ರದಲ್ಲಿ ಕಾಣುತ್ತೇವೆ. ಆ ಪಾತ್ರದಲ್ಲಿ ತಾಯ್ತನ ತನ್ನ ಎಲ್ಲಾ ಇತ್ಯಾತ್ಮಕ ಆಯಾಮಗಳನ್ನು ಅಭಿವ್ಯಕ್ತಿಸುತ್ತದೆ. ಹಾಗೆಯೇ ಬಾಯ್ತೆರೆದರೆ ಬೈಗುಳ ಪ್ರವಾಹವನ್ನೇ ಹರಿಸುವ ಗಯ್ಯಾಳಿ ಗಂಗಮ್ಮನಲ್ಲಿಯೂ ಮಾತೃತ್ವದ ಸೆಲೆಯೊಡೆದಿರುವುದನ್ನು ಶಾಂತಕುಮಾರಿ ಗುರುತಿಸುತ್ತಾರೆ. ತಮ್ಮ ಸೊಸೆ ನಂಜಮ್ಮ, ಪ್ಲೇಗಿನಲ್ಲಿ ಮಕ್ಕಳನ್ನು ಕಳೆದುಕೊಂಡು, ತಾನೂ ಪ್ಲೇಗ್ ಮಾರಿ ಬಡಿದು ಮಲಗಿರುವಾಗಿ ಅತ್ತೆ ಗಂಗಮ್ಮ ಬಂದು ಸೊಸೆಯ ಆರೈಕೆ ಮಾಡುವ ತಾಯ್ತನದ ಚಿತ್ರಣ ಮರೆಯುವಂತಹುದಲ್ಲ. 'ವಂಶವೃಕ್ಷ'ದ ನಾಗಲಕ್ಷ್ಮೀ ಮಗ ಪೃಥ್ವಿಯನ್ನು ತಾಯಿಯು ಪ್ರೀತಿ ಮಮತೆಯಿಂದ ಕಂಡಿದ್ದಲ್ಲದೆ, ತನ್ನ ಪತಿ ಸದಾಶಿವರಾಯರು ಬಗೆಗೂ ಮಾತೆಯ ಮಮತೆಯನ್ನು ಹರಿಸುತ್ತಾಳೆ. ಭಾಗೀರಥಮ್ಮ ತಮ್ಮ ಮಗನ ಅಕಾಲ ಮರಣಾನಂತರ, ಮೊಮ್ಮಗ ಚೀನಿಗೆ ಅಜ್ಜಿ ಮತ್ತು ತಾಯಿಯೂ ಅತ್ತೆ ಮತ್ತು ತಾಯಿಯೂ ಆಗಿ, ತಾಯ್ತನ ತನ್ನ ಬಹು ಆಯಾಮಗಳನ್ನು ಇಲ್ಲಿ ತೆರೆದಿಡುತ್ತದೆ. ಅಚ್ಚಮ್ಮನಾದರೋ (ಶ್ರೀನಿವಾಸ ಶ್ರೋತ್ರಿಗಳ ತಾಯಿ) ತಾಯಿಯಾಗಬೇಕೆಂಬ ತೀವ್ರ ಹಂಬಲದಿಂದ, ಮತ್ತು ತಮ್ಮ ಆಸ್ತಿ ಓರಗಿತ್ತಿಯ ಮಕ್ಕಳ ಪಾಲಾಗಬಾರದೆಂದು ಅಸೂಯೆ ಲೋಭಗಳಿಂದ, ತನ್ನ ಗಂಡನೇ ಹೇಳಿದುದರಿಂದಲೂ ಬೇರೆ ಗಂಡಿನ ಸಂಬಂಧದಿಂದ ಮಗನನ್ನು ಹಡೆಯುತ್ತಾಳೆ. ಇಲ್ಲಿ ತಾಯ್ತನದ, ಬಯಕೆಯ ನೇತ್ಯಾತ್ಮಕ ಆಯಾಮ ತೆರೆದುಕೊಳ್ಳುತ್ತದೆ. ಕರುಣಾರತ್ನೆ ಸದಾಶಿವರಾಯರ ಸಂಶೋಧನೆಗೆ ಸಹಾಯಕಿಯಾಗಿ ಸಿಂಹಳದಿಂದ ಬಂದು, ತಾವು ರಚಿಸುವ ಗ್ರಂಥಗಳೇ ತಮ್ಮ ಮಕ್ಕಳು ಎಂದು ಭಾವಿಸಿದ್ದು, ಸದಾಶಿವರಾಯರನ್ನು, ಮಮತೆಯಿಂದ ನೋಡಿಕೊಂಡರೂ ಅವಳಲ್ಲಿ ಮನೆಮಾಡಿದ್ದ ತಾಯ್ತನ ತನ್ನದೇ ಕರುಳ ಕುಡಿಗಾಗಿ ಹಂಬಲಿಸುವ ಚಿತ್ರಣ ಮನನೀಯವಾಗಿ ಮೂಡಿಬಂದಿದೆ. ಕಾತ್ಯಾಯಿನಿಯ ಪಾತ್ರದಲ್ಲಿ ಪತ್ನಿ ಮತ್ತು ತಾಯಿಯ ಪಾತ್ರಗಳು ಬೆಸೆದುಕೊಂಡು ತಾಯ್ತನ ಅವಳಿಗೆ ನೋವನ್ನೇ ನೀಡುತ್ತದೆ. ಸ್ತ್ರೀ ಚೈತನ್ಯವೇ ಚಿಮ್ಮುತ್ತಿದ್ದಂತಿದ್ದ ಕಾತ್ಯಾಯಿನಿ, ಮೊದಲ ಗಂಡನ ಮರಣ, ಮಗು ಚೀನಿ, ಮತ್ತೆ ಎರಡನೇ ಮದುವೆ, ಉಪನ್ಯಾಸಕಿಯ ವೃತ್ತಿ, ಮೊದಲಮಗ ಚೀನಿಯ ಅಳಿಸಲಾಗದ ನೆನಪು, ಅವಳ ಮನದಲ್ಲಿ ಕಾಡಿ ಕಾಡಿ, ಎರಡನೇ ಮದುವೆಯಿಂದಾದ ಗರ್ಭ ನಿಲ್ಲದಷ್ಟು ಮನೋವೇದನೆಯ ದುರಂತದ ತಾಯ್ತನದ ಚಿತ್ರಣ ಭೈರಪ್ಪನವರ ಬೇರೆ ಯಾವ ಕಾದಂಬರಿಗಳಲ್ಲೂ ಕಂಡುಬರುವುದಿಲ್ಲ.



'ಮತದಾನ'ದ ಗಿರಿಯವ್ವನ ತಾಯ್ತನದಲ್ಲಿ ಲಾಭ, ಸ್ವಾರ್ಥ, ಸಂಚುಗಳು ಕಂಡುಬಂದು ಅದು ತಾಯ್ತನದ negative ಆಯಾಮವನ್ನು ಅಭಿವ್ಯಕ್ತಿಸಿದರೂ, ಇದಕ್ಕೂ ಕೂಡಾ ತನ್ನ ಮಕ್ಕಳ ಬಗೆಗಿನ ಪ್ರೀತಿಯೇ ಕಾರಣವಲ್ಲವೇ ಎಂದು ಅಚ್ಚರಿಯಾಗುತ್ತದೆ. 'ಜಲಪಾತ'ದ ಸುಧಾಬಾಯಿಯಲ್ಲಿ ತಾಯ್ತನ ಸಫಲತೆಯನ್ನು ಕಾಣದಿದ್ದಾಗ ಅವರು ಗಂಡ ನಾಡಗೌಡರ ಸಲಹೆಯಂತೆ ಆರೋಗ್ಯಶಾಲಿಯ ವೀರ್ಯದಿಂದ ಮಕ್ಕಳನ್ನು ಪಡೆಯಲು ಇಚ್ಛಿಸದೆ ಆತ್ಮಹತ್ಯೆಗೆ ಶರಣಾಗುತ್ತಾರೆ. ತಾಯ್ತನ ಅವರಿಗೆ ಪವಿತ್ರ ಮತ್ತು ಪರಿಶುದ್ಧತೆಯ ಫಲವಾಗಿರಬೇಕೆಂಬ ಆಶಯ. 'ನಾಯಿ–ನೆರಳು' ಕಾದಂಬರಿಯ ವೆಂಕಮ್ಮ, ಒಮ್ಮೆ ಪತ್ನಿಯಾಗಿ ಮಗನನ್ನು ಪಡೆದು ಆ ಪತಿಯ ಮರಣಾನಂತರ, ಹಲವಾರು ಘಟನೆಗಳಿಂದ ಸತ್ತ ಪತಿಯೇ ಮತ್ತೆ ಹುಟ್ಟಿ ಬಂದಿದ್ದಾನೆಂದು ನಂಬಿರುವ ಅತ್ತೆ ಮಾವನ ಆಣತಿಯಿಂದಾಗಿ, ತನ್ನ ಮಗನ ವಯಸ್ಸಿನ ಈಗಿನ ಪತಿಯೊಡನೆ ಮಗುವನ್ನು ಹಲವು ರೀತಿಯ ಕಷ್ಟಗಳಿಗೆ ಪಕ್ಕಾಗುವ ತಾಯಿ. ತಾಯ್ತನದ ಇಂತಹ ಆಯಾಮಗಳು ತೀರಾ ಅಪರೂಪ.

"ತಬ್ಬಲಿ ನೀನಾದೆ ಮಗನೆ" ಕೃತಿಯಲ್ಲಿ ಗೋಮಾತೆಯೇ ತಾಯ್ತನವನ್ನು ಪ್ರತಿಪಾದಿಸುವ ಮುಖ್ಯಪಾತ್ರವಾಗಿ ಮೂಡಿಬಂದಿದೆ. ಪುಣ್ಯಕೋಟಿ ಗೋಮಾತೆಯನ್ನು ಹೆತ್ತ ತಾಯಿಯನ್ನು ಸಮೀಕರಿಸಲಾಗಿದೆ. ಮೂಕಿಯಾದ ತಾಯವ್ವ ತನ್ನ ದೊಡ್ಡಿಯ ಹಸುಗಳು ಕಡಿಮೆಯಾಗಿರುವುದನ್ನು ಕಂಡು ಅವಳಲ್ಲಿ ತಾಯ್ತನದ ವಿಶ್ವರೂಪ ಜಾಗೃತವಾಗುತ್ತದೆ. ಕೆರಳಿದ ಸಿಂಹಿಣಿಯಂತೆ ತನ್ನ ಮಕ್ಕಳ ಸಮಾನವಾದ ರಾಸುಗಳನ್ನು ಕಾಪಾಡಲು ಧಾವಿಸುತ್ತಾಳೆ

ತಾಯ್ತನದ ತೀವ್ರ ಬಯಕೆ psendo pregnency ಆಗಿ ಪರಿಣಮಿಸುವ ಚಿತ್ರಣ ಗ್ರಹಣದ ಪ್ರಿನ್ಸಿಪಾಲರ ಪತ್ನಿಯಲ್ಲಿ ಮೂಡಿಬಂದಿದೆ. ಹೊಟ್ಟೆಯಲ್ಲಿಯೇ ಸತ್ತು ಹುಟ್ಟಿದರೂ ಚಿಂತೆಯಿಲ್ಲ, ತನ್ನಲ್ಲಿ ತಾಯ್ತನದ ಬೀಜ ಮೊಳೆಯುವ ಶಕ್ತಿ ಇದೆ ಎಂದು ತಿಳಿದರೆ ಸಾಕು ಎನ್ನುವ ಈ ವಿಫಲ ತಾಯ್ತನದ ಬಯಕೆ ಅಚ್ಚರಿ ಹಾಗೂ ವೇದನೆಯನ್ನುಂಟುಮಾಡುತ್ತದೆ.

'ನಿರಾಕರಣ' ತಾಯ್ತನದ ಮತ್ತೊಂದು ಆಯಾಮವನ್ನು ತೆರೆದಿಡುತ್ತದೆ. ಮಕ್ಕಳಿಲ್ಲದಾಗ ಬೇರೆ ಮಕ್ಕಳನ್ನು ದತ್ತು ತೆಗೆದುಕೊಂಡು ತಾಯ್ತನ ಮತ್ತು ತಂದೆತನಗಳನ್ನು ಪೂರ್ಣಗೊಳಿಸಿಕೊಳ್ಳುವ ದಂಪತಿಗಳಲ್ಲಿ ಹಲವಾರು ಕಡೇ ತನಕ ಆ ಮಕ್ಕಳನ್ನು ತಮ್ಮ ಮಕ್ಕಳಂತೆ ಪಾಲಿಸಿದರೇ ಕೆಲವರು ಅಸಡ್ಡೆ ಮಾಡುವುದು ಮತ್ತೆ ಕೆಲವರಲ್ಲಿ ಸ್ವಂತ ಮಕ್ಕಳಾದ ನಂತರ ದತ್ತು ಮಕ್ಕಳನ್ನು ಕೀಳಾಗಿ ಕಾಣುವುದು ಇಂತಹ ಚಿತ್ರಣಗಳನ್ನು ಕಾಣುತ್ತೇವೆ.


'ಪರ್ವ'ದಲ್ಲಿ ತಾಯ್ತನದ ಅನಂತ ಆಯಾಮಗಳು ಅಭಿವ್ಯಕ್ತಿಗೊಂಡಿವೆ. ಗಂಗೆ (ಕಾಲಿ) ಮತ್ತು ಶಂತನು ಇವರ ಸಂಬಂಧದಲ್ಲಿ ಗಂಗೆ ತಾನು ಹಡೆದ ಮಕ್ಕಳನ್ನು ತವರಿಗೆ ಬಿಟ್ಟುಬರುತ್ತಾಳೆ. ಭೀಷ್ಮ (ದೇವವ್ರತನನ್ನು) ಹಾಲೂಣಿಸುವ ಮಗುವಾಗಿದ್ದಾಗಲೇ ಬಿಟ್ಟು ಹೊರಟುಹೋಗುತ್ತಾಳೆ. ಬದ್ಧತೆಯಿಲ್ಲದ ತಾಯ್ತನವಿದು ಎನ್ನಿಸುತ್ತದೆ. ತಾನು ಕನ್ಯೆಯಾಗಿದ್ದಾಗಲೇ ಜನಿಸಿದ ಕರ್ಣನನ್ನು ನದಿಯಲ್ಲಿ ತೇಲಿಬಿಟ್ಟು ಆ ಮಗನ ನೆನಪು ಕಡೆವರೆಗೂ ಕುಂತಿಯ ಮನಸ್ಸಿನಲ್ಲಿ ಲಾಳಿಯಾಡುತ್ತದೆ. ದ್ರೌಪದಿ, ಸಾಲಕಟಿ, ಸುಭದ್ರೆ ಎಲ್ಲರೂ ತಮ್ಮ ಮಕ್ಕಳನ್ನು ಯುದ್ಧವೆಂಬ ಅಗ್ನಿಗೆ ಆಹುತಿ ನೀಡಿ ಹೆತ್ತೊಡಲನ್ನು ಬರಿದು ಮಾಡಿಕೊಂಡವರು. ತಾಯ್ತನಕ್ಕೆ ಇಲ್ಲಿ ಬರಿ ದುಃಖ. ಗಾಂಧಾರಿಯ ತಾಯ್ತನವೂ ಕಡೆಗೆ ಏನನ್ನೂ ಉಳಿಸಿಕೊಳ್ಳದಾಯಿತು.

'ಸಾಕ್ಷಿ'ಯ ಸಾವಿತ್ರಿ ತನ್ನ ಕೈಯ್ಯಾರ ತನ್ನ ಗಂಡನಿಂದಲೇ ಉಂಟಾದ ಗರ್ಭವನ್ನು ತೆಗೆಸಿಕೊಳ್ಳಬೇಕಾಗುತ್ತದೆ. ಕಾರಣ ಅದು ಮಂಜಯ್ಯನಂತಹ ವಿಷಸರ್ಪದಿಂದ ಒಂದು ರೀತಿ ಅತ್ಯಾಚಾರದಂತೆ ನಡೆದ ಸಂಬಂಧದಿಂದ ಮಾಡಿದ ಗರ್ಭ. ಅವಳ ತಾಯ್ತನ ಅನುಭವಿಸುವ ಅಳಲು ಮನಸ್ಸನ್ನು ಮುದುಡಿಸುತ್ತದೆ. ಲಕ್ಕುಳಂತಹ ಹೆಣ್ಣು, ತನ್ನನ್ನು ನಂಬಿಸಿ ಹಾಳು ಮಾಡಿದವನೇ ತನ್ನ ಮುಗ್ಧ ಮಗಳ ಬಾಳನ್ನು ಕೆಡಿಸಿ ಆ ಹುಡುಗಿ ಬಸಿರಾಗುವಂತೆ ಮಾಡಿರುವುದನ್ನು ತಿಳಿದು ಮಂಜಯ್ಯನಂತಹ ವಿಷಸರ್ಪದಿಂದ ಮತ್ತೆ ಯಾವ ಹೆಣ್ಣು ಮಗುವೂ ಹಾಳಾಗಬಾರದೆಂದು ಅವನನ್ನು ಕೊಲೆ ಮಾಡಿ ಕೊಲೆಗಾರ್ತಿಯಾಗುತ್ತಾಳೆ. ಇದು ತಾಯ್ತನದ ಸೇತು, ಪ್ರತೀಕಾರದ ಆಯಾಮ.

'ಮಂದ್ರ' ರಾಂಕುಮಾರಿಯ ಪರಿಶುದ್ಧ ಮಾತೃತ್ವ, ಚಂಪಾಬಾಯಿಯ ಸ್ವಾರ್ಥತುಂಬದ ತಾಯ್ತನ, ನರ್ತಕಿ ಮನೋಹರಿದಾಸ್, ನರ್ತನದಲ್ಲಿ ಪರಿಪೂರ್ಣತೆ ಸಾಧಿಸಲು, ಪ್ರಸಿದ್ಧಿ ಪಡೆಯಲು ತಾಯ್ತನದ ಮೂಲವಾದ ಗರ್ಭಕೋಶವನ್ನೇ ತೆಗೆಸಿಕೊಳ್ಳುವ, ತಾಯ್ತನವನ್ನು ನಿರಾಕರಿಸುತ್ತೇನೆನ್ನುವ ಭಾವ ಒಂದೊಂದು ಕಾದಂಬರಿಯಲ್ಲಿಯೂ ವಿವಿಧ ಆಯಾಮಗಳಲ್ಲಿ ತೆರೆದುಕೊಳ್ಳುತ್ತವೆ.

'ಆವರಣ'ದ ಶಾಮಲೆ ರಜಪೂತಳಾಗಿದ್ದು, ಯುದ್ಧದಲ್ಲಿ ಸೆರೆಸಿಕ್ಕಿ ಮತಾಂತರಕ್ಕೆ ಒಳಗಾಗುತ್ತಾಳೆ. ಅವಳ ಪತಿಯೂ ಸೆರೆಸಿಕ್ಕಿ, ಮತಾಂತರಗೊಳಿಸಲ್ಪಟ್ಟು ನಪುಂಸಕನಾಗಿ ಮಾಡಲ್ಪಡುತ್ತಾನೆ. ಸುಲ್ತಾನನ ಜನಾನಾದಲ್ಲಿ ಇಬ್ಬರೂ ಭೇಟಿಯಾಗುವ ಸಂದರ್ಭದಲ್ಲಿ ಶಾಮಲೆ ಈಗ ತಬಸ್ಸುಮ್ ತನ್ನ ಮೊದಲ ಪತಿಯಿಂದ ಜನಿಸಿದ ಮಗನನ್ನು ತೋರಿಸುತ್ತಾಳೆ– ಮೊದಲ ಗಂಡನಿಗೆ (ಈಗ ಬಂದಿದ್ದು). ಬಲಾತ್ಕಾರಕ್ಕೊಳಗಾಗಿ ಅವಳಿಗೆ ಇನ್ನೂ ಹಲವು ಮಕ್ಕಳಾಗಿರುತ್ತವೆ. ಅವಳು ಹೇಳುತ್ತಾಳೆ: "ಬಲಾತ್ಕಾರಕ್ಕೆ ಒಳಗಾಗಿ ಬಸುರಾಗಿ ಹೆತ್ತ ಮಗುವನ್ನು ಎತ್ತಿಕೊಳ್ಳುವಾಗಲೂ ಅಂಥದೇ ಅಕ್ಕರೆ ಹುಟ್ಟುತ್ತಿತ್ತು: ಗಂಡಿಗೆ ತನ್ನ ಬೀಜದ ಹೆಮ್ಮೆ ಇರುತ್ತದೆ. ಹೆಣ್ಣಿನ ಗರ್ಭ ಯಾವ ಬೀಜವನ್ನಾದರೂ ತನ್ನಲ್ಲಿ ಸ್ವೀಕರಿಸಿ, ಪೋಷಿಸಿ ಬೆಳೆಸುತ್ತಾರೆ. ಭೂತಾಯಿಯಷ್ಟೇ ಉದಾರ, ನಿಷ್ಪಕ್ಷಪಾತಭಾವ ಹೆಣ್ಣಿನ ಗರ್ಭಶಕ್ತಿಗೆ ಎಂಬ ಸತ್ಯ ಇಲ್ಲಿ ಅಭಿವ್ಯಕ್ತಿಗೊಂಡಿದೆ. 'ಕವಲು', 'ಯಾನ' ಕೂಡ ತಾಯ್ತನದ ಬೇರೆ ಬೇರೆ ಆಯಾಮಗಳನ್ನು ತೆರೆದಿಡುತ್ತವೆ. 'ಉತ್ತರ ಕಾಂಡ'ದ ಕೈಕೇಯಿಯ ಪಾತ್ರದಲ್ಲಿ ತಾಯ್ತನದ ಸ್ವಾರ್ಥದ ಪರಿಚಯವಾಗುತ್ತದೆ. ಆ ಸ್ವಾರ್ಥವೇ ರಾಮನನ್ನು ಕಾಡಿಗೆ ಕಳಿಸುತ್ತದೆ. ತಾಯಿ ಎಂಬ ಮಾಧ್ಯಮದ ಮೂಲಕ ನಾವು ಜಗತ್ತಿಗೆ ಬಂದಿರುವೆವು. ಎಲ್ಲ ಭಾವಗಳ ಅನುಭವವಾಗುವುದು. ಅಂತಹ ಅನುಭಾವವನ್ನು ನೀಡುವ ರಹಸ್ಯ, ಶಕ್ತಿ ತಾಯ್ತನಕ್ಕೆ ಶರಣು.

ಎಲ್.ವಿ.ಶಾಂತಕುಮಾರಿ ಅವರ "ತಾಯ್ತನದ ತೆರೆಗಳು" ಪುಸ್ತಕವನ್ನು ಡಾ.ಆರ್.ಗಣೇಶ್ ಬೆಂಗಳೂರಿನ ಗೋಕಲೆ ಸಭಾಂಗಣದಲ್ಲಿ ಇತ್ತೀಚೆಗೆ ಬಿಡುಗಡೆಗೊಳಿಸಿದ್ದು, ಕಾರ್ಯಕ್ರಮದಲ್ಲಿ ಡಾ. ಎಸ್.ಎಲ್. ಭೈರಪ್ಪ, ಡಾ.ಚಂದ್ರಶೇಖರ್ ಕಂಬಾರ ಮತ್ತು ಡಾ. ಎಸ್.ಆರ್. ರಾಮಸ್ವಾಮಿ ಉಪಸ್ಥಿತರಿದ್ದರು. ಸಾಹಿತ್ಯ ಭಂಡಾರವು ಹೊರತಂದಿರುವ ಈ ಪುಸ್ತಕವು 144 ಪುಟಗಳಿದ್ದು, ಇದರ ಬೆಲೆ 175ರೂ.



ವಿಮರ್ಶಾ ಕೃತಿ ಬಿಡುಗಡೆ ಸಮಾರಂಭದಲ್ಲಿ (ಎಡದಿಂದ) ಶಶಾಂಕ್ ಪರಾಶರ, ಡಾ.ಜಿ.ಎಲ್.ಶೇಖರ್, ಪ್ರೊ.ಎಲ್.ವಿ.ಶಾಂತಕುಮಾರಿ, ಡಾ.ಎಸ್.ಆರ್.ರಾಮಸ್ವಾಮಿ, ಡಾ.ಎಸ್.ಎಲ್.ಭೈರಪ್ಪ, ಶತಾವಧಾನಿ ಡಾ.ಆರ್.ಗಣೇಶ್, ಸಹನಾ ವಿಜಯಕುಮಾರ್ ಮತ್ತು ಶಶಿಕಿರಣ್.

ಬುಡಕಟ್ಟು ಸಮುದಾಯ ಸೆಳೆಯಲು 9 ಮಾದರಿ ಮತಗಟ್ಟೆ

ಮೈಸೂರು,ಏ.22(ಎಂಕೆ)– ಬುಡಕಟ್ಟು ಸಮುದಾಯದ ಮತದಾರರನ್ನು ಸೆಳೆಯಲು ಜಿಲ್ಲೆಯ ವಿವಿಧೆಡೆ 9 ಬುಡಕಟ್ಟು ಮಾದರಿ(Ethnic Based Polling booths) ಮತಗಟ್ಟೆಗಳ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ.



ಸಂಗ್ರಹ ಚಿತ್ರ

ಬುಡಕಟ್ಟು ಸಮುದಾಯದವರ ಸಂಖ್ಯೆ ಹೆಚ್ಚಾಗಿರುವ ಪಿರಿಯಾಪಟ್ಟಣದ ರಾಣಿಗೇಟ್(ಮತಗಟ್ಟೆ ಸಂಖ್ಯೆ–121), ಕೆ.ಆರ್.ನಗರದ ಸತಿಗ್ರಾಮ(ಮತಗಟ್ಟೆ ಸಂಖ್ಯೆ–229), ಹುಣಸೂರಿನ ನಾಗಾಪುರ ಆಶ್ರಮ ಶಾಲೆ(ಮತಗಟ್ಟೆ ಸಂಖ್ಯೆ–260), ಶೆಟ್ಟಿಹಳ್ಳಿ(ಮತಗಟ್ಟೆ ಸಂಖ್ಯೆ–251) ಮತ್ತು ನಲ್ಲೂರುಪಾಲ(ಮತಗಟ್ಟೆ ಸಂಖ್ಯೆ–210), ಹೆಚ್.ಡಿ.ಕೋಟೆಯ ಬೂದನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಮತಗಟ್ಟೆ ಸಂಖ್ಯೆ–56), ಬೀಮನಹಳ್ಳಿ ಆಶ್ರಮ ಶಾಲೆ(ಮತಗಟ್ಟೆ ಸಂಖ್ಯೆ–03), ಪೆಂಜಳ್ಳಿ ಕಾಲೋನಿ (ಮತಗಟ್ಟೆ ಸಂಖ್ಯೆ–136)ಹಾಗೂ ನಂಜನಗೂಡಿನ ತಾಂಡವಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಮತಗಟ್ಟೆ ಸಂಖ್ಯೆ–185) ಯಲ್ಲಿ ಅತ್ಯಾಕರ್ಷಕ ಬುಡಕಟ್ಟು ಮತಗಟ್ಟೆ ಕೇಂದ್ರ ನಿರ್ಮಾಣಕ್ಕೆ ಯೋಜಿಸಲಾಗಿದೆ.

ವಿನೂತನ ಚಿಂತನೆ: ಬುಡಕಟ್ಟು ಮಾದರಿ ಮತಗಟ್ಟೆಗಳ ವಿನ್ಯಾಸದ ಜೊತೆಗೆ ಚುನಾವಣಾ ಪ್ರಕ್ರಿಯೆಗೆ ವಿನೂತನ ಚಿಂತನೆ ನಡೆಸಲಾಗಿದೆ. ಇಡೀ ಮತಗಟ್ಟೆಯೂ ಸಂಪೂರ್ಣವಾಗಿ ಬುಡಕಟ್ಟು ಜನರ ಗುಡಿಸಲುಗಳಂತೆ ವಿನ್ಯಾಸಗೊಳ್ಳಲಿದ್ದು, ಮತಗಟ್ಟೆ ಬರುವವರ ಆಹ್ವಾನ ನೀಡುವುದು ಹಾಗೂ ಮತದಾನಕ್ಕೆ ಅನುಕೂಲ ಮಾಡಿಕೊಡುವ ಅಧಿಕಾರಿ ಮತ್ತು ಸಿಬ್ಬಂದಿ ಕೂಡ ಬುಡಕಟ್ಟು ಜನರ ವಸ್ತ್ರತೊಟ್ಟು ಕಾರ್ಯನಿರ್ವಹಿಸುವ ಕುರಿತು ಚಿಂತನೆ ನಡೆದಿದೆ. ಕುಡಿಯುವ ನೀರಿನ ವ್ಯವಸ್ಥೆ, ಪ್ರಥಮ ಚಿಕಿತ್ಸಾ ಕೊಠಡಿ ಹಾಗೂ ಸೂಕ್ತ ಭದ್ರತೆ ವ್ಯವಸ್ಥೆ ಇರಲಿದೆ.

10 ದಿನಗಳಿರುವಂತೆ ನಿರ್ಮಾಣ: ಮತದಾನಕ್ಕೆ 10 ದಿನಗಳ ಬಾಕಿ ಇರುವಂತೆ ಜಿಲ್ಲೆಯಲ್ಲಿರುವ 9 ಬುಡಕಟ್ಟು ಮತಗಟ್ಟೆಗಳನ್ನು ನಿರ್ಮಾಣ ಮಾಡಲಾಗುವುದು. ಪಾರದರ್ಶಕ ಮತದಾನಕ್ಕೆ ಅನುಕೂಲವಾಗುವಂತೆ ಮತಗಟ್ಟೆ ನಿರ್ಮಾಣವಾಗಲಿದ್ದು, ನೋಡುಗರಿಗೂ ಆಕರ್ಷಕವಾಗಿ ಕಾಣಲಿದೆ. ಸ್ಥಳೀಯ ಮತದಾರರನ್ನು ಸೆಳೆಯುವ ಮುಖ್ಯ ಉದ್ದೇಶದೊಂದಿಗೆ ಹಾಗೂ ಅಗತ್ಯ ಪ್ರಚಾರದೊಂದಿಗೆ ಮತಗಟ್ಟೆ ಕೇಂದ್ರಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಜಿಪಂ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಮಂತ್ರಾಲಯದ ರಾಯರ ಮಠದಲ್ಲಿ ರಂಜಾನ್ ಆಚರಿಸಿದ ಮುಸ್ಲಿಮರು

ರಾಯಚೂರು,ಏ.22–ರಂಜಾನ್ ಹಿನ್ನೆಲೆಯಲ್ಲಿ ಮಂತ್ರಾಲಯ ಗುರುರಾಘವೇಂದ್ರ ಸ್ವಾಮಿ ಮಠದಲ್ಲಿ ರಾಯರ ದರ್ಶನ ಪಡೆದು ಮುಸ್ಲಿಂ ಭಕ್ತರು ಮಠದಲ್ಲೇ ಹಬ್ಬವನ್ನು ಆಚರಿಸಿದರು. ಮಂತ್ರಾಲಯ ಸುತ್ತಮುತ್ತಲ ಗ್ರಾಮದ ಮುಸ್ಲಿಂ ಭಕ್ತರು ಶನಿವಾರ ವೃಂದಾವನ ದರ್ಶನ ಪಡೆದರು. ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿ ಆಶೀರ್ವಚನ ನೀಡಿದರು. ಅನುಗ್ರಹ ಸಂದೇಶ ನೀಡಿ ಸ್ವಾಮೀಜಿ ಮುಸ್ಲಿಂ ಭಕ್ತರಿಗೆ ಆಶೀರ್ವದಿಸಿದರು. ಮಠದ ಪ್ರಾಂಗಣದಲ್ಲಿ ಮಂತ್ರಾಕ್ಷತೆ, ಪರಿಮಳ ಪ್ರಸಾದ ನೀಡಿದರು. ಹಿಂದೂ, ಮುಸ್ಲಿಂ ಭಾವೈಕ್ಯತೆಯನ್ನು ಮಂತ್ರಾಲಯ ಮಠ ಮೆರೆದಿದೆ. ಮಂತ್ರಾಲಯ ಮಠಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಮುಸ್ಲಿಂ ಭಕ್ತರು ಇರುವುದರಿಂದ ಪವಿತ್ರ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂಧವರು ಮಠದಲ್ಲಿ ಆಚರಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಕ್ತಿಭಾವದ ಶ್ರೀ ಬಸವೇಶ್ವರ ಉತ್ಸವ



ಮೈಸೂರು,ಏ.22(ಎಸ್‌ಪಿಎನ್)–ಶ್ರೀ ಬಸವೇಶ್ವರ ಜಯಂತಿ ಅಂಗವಾಗಿ ಮೈಸೂರು ಹೊಸಮಠದ ಶ್ರೀ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಬಸವೇಶ್ವರ ಉತ್ಸವ ಮೂರ್ತಿ ಮೆರವಣಿಗೆಗೆ ಶ್ರೀ ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಮೈಸೂರು ಶ್ರೀ ನಟರಾಜ ಪ್ರತಿಷ್ಠಾನ, ಜಾಗತಿಕ ಲಿಂಗಾಯತ ಮಹಾಸಭಾ ಮೈಸೂರು ಘಟಕ, ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಜಯಂತ್ಯುತ್ಸವ ಆಚರಣಾ ಸಮಿತಿ ಸಹಯೋಗ ಆಯೋಜಿಸಿದ್ದ ಬಸವೇಶ್ವರ ಉತ್ಸವ ಮೂರ್ತಿ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಈ ಮೆರವಣಿಗೆಯು ಹೊಸಮಠದ ಆವರಣದಿಂದ ಹೊರಟು ರಾಮಾನುಜ ರಸ್ತೆ, ಬಸವೇಶ್ವರ ರಸ್ತೆ, ಅಗ್ರಹಾರ ವೃತ್ತ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಪುನಃ ಹೊಸಮಠದ ಆವರಣ ತಲುಪಿತು. ಇದಕ್ಕೂ ಮೊದಲು ವೀರಶೈವ ನಂದಿಧ್ವಜ ಸಂಘದ ನಂದಿಧ್ವಜ ಕಂಬಕ್ಕೆ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಲಾಯಿತು. ಈ ಮೆರವಣಿಗೆಯಲ್ಲಿ ಡೊಳ್ಳು, ನಗಾರಿ, ತಮಟೆ ಹಾಗೂ ವಿವಿಧ ಕಲಾತಂಡಗಳು ಮೆರವಣಿಗೆಯಲ್ಲಿ ಸಾರ್ವಜನಿಕರ ಗಮನ ಸೆಳೆದವು.

ಈ ವೇಳೆ ನಗರಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಕೆ.ಆರ್.ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್, ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾಸಂಘದ ಪ್ರಧಾನ ಕಾರ್ಯದರ್ಶಿ ಆಯರಹಳ್ಳಿ ಪಿ.ವಿರೂಪಾಕ್ಷ, ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಕಾರ್ಯದರ್ಶಿ ಮಹಾದೇವಪ್ಪ ಇತರರು ಹಾಜರಿದ್ದರು.



ಮೈಸೂರು ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಭೇಟಿ ನೀಡಿದ ಶಾಸಕ ಜಿ.ಟಿ.ದೇವೇಗೌಡ ವಕೀಲರಲ್ಲಿ ಮತಯಾಚಿಸಿದರು. ಇದೇ ವೇಳೆ ಮೈಸೂರು ವಕೀಲರ ಸಂಘದ ವತಿಯಿಂದ ಜಿಟಿಡಿ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಸಂಘದ ಪದಾಧಿಕಾರಿಗಳು, ಜೆಡಿಎಸ್ ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ಪಾಲಾಕ್ಷ, ವಕೀಲರಾದ ಕನಗನಹಳ್ಳಿ ನಾಗರಾಜ್, ರಘು, ಜ್ಞಾನೇಶ್, ಗೋಪಾಲಗೌಡ ಇದ್ದರು.

ಭಾರ್ಗವಿ ಶ್ರೀನಿವಾಸ್‌ಗೆ ಶೇ.94.33 ಅಂಕ



ಮೈಸೂರು, ಏ.22– ಮೈಸೂರು ಕೆ.ಜಿ.ಕೊಪ್ಪಲಿನ ಉಸ್ತಾದ್ ಯಾಲಕ್ಕಿಗೌಡರ ಮಗ ಯಜಮಾನ್ ವೆಂಕಟೇಶ್‌ಗೌಡರ ಕುಟುಂಬದ ಶ್ರೀನಿವಾಸ್ ಮತ್ತು ಶೋಭಾ ದಂಪತಿ ಪುತ್ರಿ ಭಾರ್ಗವಿ ಶ್ರೀನಿವಾಸ್, ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 566 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ವಿಜಯ ವಿಠಲ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾದ ಭಾರ್ಗವಿ ಇಂಗ್ಲಿಷ್‌ನಲ್ಲಿ 96, ಸಂಸ್ಕೃತ 94, ಭೌತಶಾಸ್ತ್ರ 96, ರಸಾಯನ ಶಾಸ್ತ್ರ 89, ಗಣಿತಶಾಸ್ತ್ರ 98 ಹಾಗೂ ಜೀವಶಾಸ್ತ್ರದಲ್ಲಿ 93 ಅಂಕ ಗಳಿಸಿದ್ದಾರೆ.



ಮೈಸೂರು ನಗರ ಬಿಜೆಪಿ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ ನರಸಿಂಹರಾಜ ಕ್ಷೇತ್ರದ ಬಿಜೆಪಿ ಮುಖಂಡ ಎಚ್.ಜಿ.ಗಿರಿಧರ್ ಅವರನ್ನು ಎಂ.ಜಿ. ರಸ್ತೆಯಲ್ಲಿರುವ ಮಾಧ್ಯಮ ಕೇಂದ್ರದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸನ್ಮಾನಿಸಿ, ಅಭಿನಂದಿಸಿದರು. ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ಗ್ರಾಮಾಂತರ ಸಹ ವಕ್ತಾರ ವಸಂತ್‌ಕುಮಾರ್, ನಗರ ಜಿಲ್ಲಾ ಸಹ ಸಂಚಾಲಕರಾದ ಪ್ರದೀಪ್‌ಕುಮಾರ್, ಪಾರ್ಥಸಾರಥಿ ಹಾಗೂ ಇನ್ನಿತರರು ಇದ್ದರು.

ಇಸ್ರೋ ಮೈಲಿಗಲ್ಲು: 2 ಉಪಗ್ರಹಗಳು ಕಕ್ಷೆಗೆ


ಚೆನ್ನೈ: ಇಸ್ರೋ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದು, ಸಿಂಗಪೂರ್‌ನ 2 ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಈ ಬಗ್ಗೆ ಸ್ವತಃ ಇಸ್ರೋ ಮಾಹಿತಿ ನೀಡಿದ್ದು, ಇಸ್ರೋದ ವಾಣಿಜ್ಯ ವಿಭಾಗವಾಗಿರುವ ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್‌ನ ಭಾಗವಾಗಿದ್ದ ಯೋಜನೆ ಇದಾಗಿದೆ. 22.5 ಗಂಟೆಗಳ ಕೌಂಟ್‌ಡೌನ್‌ನಲ್ಲಿ 44.4 ಮೀಟರ್ ಎತ್ತರದಲ್ಲಿ ರಾಕೆಟ್ ಮೊದಲ ಲಾಂಚ್ ಪ್ಯಾಡ್‌ನಲ್ಲಿ ಯಶಸ್ವಿಯಾಗಿ ಚಿಮ್ಮಿದ್ದು, ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಪಗ್ರಹವನ್ನು ಉಡಾವಣೆ ಮಾಡಲಾಗಿತ್ತು. ಪಿಎಸ್‌ಎಲ್‌ವಿ ನಿಗದಿತ ಕಕ್ಷೆಗೆ ಎರಡೂ ಉಪಗ್ರಹಗಳನ್ನು ಸೇರಿಸಲಾಗಿದೆ ಎಂದು ಇಸ್ರೋ ಮುಖ್ಯಸ್ಥ ಎಸ್.ಸೋಮನಾಥ್ ತಿಳಿಸಿದ್ದಾರೆ. ಇದು ಪಿಎಸ್‌ಎಲ್‌ವಿಯ 57ನೇ ಮಿಷನ್ ಆಗಿದ್ದು ಇದರಲ್ಲಿ ಯಶಸ್ಸು ಸಾಧಿಸುವ ಮೂಲಕ ತನ್ನ ಹೆಚ್ಚಿನ ವಿಶ್ವಾಸಾರ್ಹತೆ ಮತ್ತು ಅಂತಹ ವರ್ಗದ ವಾಣಿಜ್ಯ ಕಾರ್ಯಾಚರಣೆಗಳಿಗೆ ಅದರ ಸೂಕ್ತತೆ ಪ್ರದರ್ಶಿಸಿದೆ ಎಂದು ಸೋಮನಾಥ್ ಹೇಳಿದ್ದಾರೆ.

ಚುನಾವಣಾ ಕರ್ತವ್ಯದಿಂದ ನುಣುಚಿಕೊಳ್ಳಲು ಅಧಿಕಾರಿ, ಸಿಬ್ಬಂದಿಗಳ ಸಬೂಬು

ಟೆನ್ಷನ್ ಆದ್ರೆ ತಲೆ ಸುತ್ತು ಬರುತ್ತೆ... ನಿವೃತ್ತಿಗೆ ಮೂರು ತಿಂಗಳಿದೆ... ಸಣ್ಣ ಮಕ್ಕಳಿದ್ದಾರೆ... ಬಿಪಿ-ಷುಗರ್ ಇದೆ ..., ಗೃಹ ಪ್ರವೇಶ..., ಹೊರಗೆ ಹೋಗಬೇಕಿದೆ... ಮೈಸೂರು ಜಿಲ್ಲೆಯಲ್ಲಿ ನೂರಾರು ಅರ್ಜಿ

ಎಸ್.ಟಿ.ರವಿಕುಮಾರ್

ಮೈಸೂರು, ಏ.22–ಚುನಾವಣೆ ಎಂಬುದು ಪ್ರಜಾಪ್ರಭುತ್ವದ ಸೌಂದರ್ಯ (Election is beauty of democracy). ಅದನ್ನು ಸಂತೋಷದಿಂದ ಅನುಭವಿಸಬೇಕೆಂದು ಹಲವರು ಹೇಳುತ್ತಾರೆ. ಮತದಾನ ಪ್ರಕ್ರಿಯೆಯಲ್ಲಿ ಉತ್ಸಾಹದಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವ ಉತ್ಸವ ಆಚರಿಸಿ ಭಾರತದ ಸಂವಿಧಾನದ ಮಹತ್ವ ಸಾರಬೇಕಾಗಿರುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಹೌದು.



ಇದು ಕೇವಲ ಮತದಾರರಿಗೆ ಮಾತ್ರ ಅನ್ವಯಿಸುವುದಿಲ್ಲ. ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿಗಳೂ ಅರ್ಥ ಮಾಡಿಕೊಂಡು ಭವ್ಯ ಭಾರತದ ಬುನಾದಿಗೆ ನಾಂದಿ ಹಾಡುವ ಮತದಾನ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಅವರ ಜವಾಬ್ದಾರಿಗಳಲ್ಲಿ ಪ್ರಮುಖವಾದ ಒಂದು ಅಂಶ ಎಂಬುದಿಲ್ಲಿ ಗಮನಾರ್ಹ.

ಆದರೆ, ದುರದೃಷ್ಟವಶಾತ್ ಮೇ 10ರಂದು ಒಂದೇ ಹಂತದಲ್ಲಿ ನಡೆಯಲಿರುವ ಕರ್ನಾಟಕ ವಿಧಾನಸಭಾ ಚುನಾವಣೆ ಕರ್ತವ್ಯಕ್ಕೆ ನೇಮಿಸಲಾಗಿರುವ ಮತಗಟ್ಟೆ ಅಧ್ಯಕ್ಷೀಯ ಅಧಿಕಾರಿ (ಪ್ರಿಸೈಡಿಂಗ್ ಆಫೀಸರ್), ಸಹಾಯಕ ಅಧ್ಯಕ್ಷೀಯ ಅಧಿಕಾರಿ (ಅಸಿಸ್ಟೆಂಟ್ ಪ್ರಿಸೈಡಿಂಗ್ ಆಫೀಸರ್), ಮತಗಟ್ಟೆ ಅಧಿಕಾರಿ (ಪೋಲಿಂಗ್ ಆಫೀಸರ್), ಸಹಾಯಕ ಮತಗಟ್ಟೆ ಅಧಿಕಾರಿ (ಅಸಿಸ್ಟೆಂಟ್ ಪೋಲಿಂಗ್ ಆಫೀಸರ್) ಹಾಗೂ ಇನ್ನಿತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಚುನಾವಣಾ ಕರ್ತವ್ಯದಿಂದ ನುಣುಚಿಕೊಳ್ಳಲು ಹಲವಾರು ನೆಪವೊಡ್ಡಿ ಆಯಾ ಕ್ಷೇತ್ರಗಳ ಚುನಾವಣಾಧಿಕಾರಿಗಳಿಗೆ ಮೈಸೂರು ಜಿಲ್ಲೆಯಲ್ಲಿ ನೂರಾರು ಮನವಿಗಳನ್ನು ಸಲ್ಲಿಸಿದ್ದಾರೆ.

ಅರ್ಜಿ ಸಲ್ಲಿಸಿ ಅವರು ಸುಮ್ಮನೆ ಕುಳಿತಿಲ್ಲ. ತಾವು ಮಾಡುತ್ತಿರುವ ಕೆಲಸ ಬಿಟ್ಟು ಚುನಾವಣಾಧಿಕಾರಿಗಳ ಬಳಿ ನಿತ್ಯ ಅಲೆದಾಡುತ್ತಿದ್ದು, ಕಾರಣಕ್ಕೆ ಪೂರಕವಾಗಿ ವೈದ್ಯಕೀಯ ದೃಢೀಕರಣ ಪತ್ರ, ಮದುವೆ, ನಾಮಕರಣ, ಗೃಹ ಪ್ರವೇಶ ಆಹ್ವಾನ ಪತ್ರಿಕೆ, ಪ್ರವಾಸದ ರಿಸರ್ವೇಷನ್ ಟಿಕೆಟ್, ಮಕ್ಕಳ ಅಡ್ಮಿಷನ್ ಮುಂತಾದ ದಾಖಲೆಗಳನ್ನು ತೋರಿಸಿ ತಮ್ಮನ್ನು ಎಲೆಕ್ಷನ್ ಡ್ಯೂಟಿ, ಟ್ರೇನಿಂಗ್ ಪ್ರೋಗ್ರಾಂನಿಂದ ಕೈಬಿಡುವಂತೆ ಪರಿಪರಿಯಾಗಿ ಬೇಡಿ ದುಂಬಾಲು ಬೀಳುತ್ತಿದ್ದಾರೆ.

> ‘ನನಗೆ ಕೆಲಸದ ಒತ್ತಡವೆಂದರೆ ಆಗುವುದಿಲ್ಲ, ಟೆನ್ಷನ್ ಆದರೆ ತಲೆ ಸುತ್ತು ಬಂದು ಬಿದ್ದೋಗ್ತೀನಿ, ಪ್ರಜ್ಞೆ ತಪ್ಪುತ್ತೆ’ ಎಂದು ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ನೇಮಕಗೊಂಡಿರುವ ಪಿಆರ್‌ಓವೊಬ್ಬರು ಕಾರಣ ಹೇಳಿದರೆ, ‘ನನಗೆ ನಿವೃತ್ತಿಯಾಗಲು ಮೂರೇ ತಿಂಗಳಿದೆ, ನಾನು ನೆಮ್ಮದಿಯಾಗಿರಬೇಕೆಂದಿರುವೆ. ನನ್ನನ್ನು ಚುನಾವಣಾ ಕರ್ತವ್ಯದಿಂದ ಬಿಡುಗಡೆ ಮಾಡಿಕೊಡಿ’ ಎಂದು ಮತ್ತೋರ್ವರು ಅರ್ಜಿ ಸಲ್ಲಿಸಿದ್ದಾರೆ.

ಕೆಲವರಂತೂ ಪ್ರಮುಖ ರಾಜಕಾರಣಿಗಳು, ಸಂಸದರು, ಶಾಸಕರು, ಸಚಿವರು, ಹಿರಿಯ ಅಧಿಕಾರಿಗಳ ಮೂಲಕ ಫೋನ್ ಮಾಡಿಸಿ ಒತ್ತಡ ಹೇರುತ್ತಿರುವುದಲ್ಲದೇ, ಹಲವರು ಕೈ, ಕಾಲುಗಳಿಗೆ ಬ್ಯಾಂಡೇಜ್ ಹಾಕಿಕೊಂಡೇ ಜಿಲ್ಲಾ ಚುನಾವಣಾಧಿಕಾರಿಗಳ ಮುಂದೆ ಪರೇಡ್ ಮಾಡುತ್ತಿರುವುದೂ ಕಂಡುಬಂದಿದೆ.

ಮಕ್ಕಳಿಗೆ ಪರೀಕ್ಷೆ ಮುಗಿದಿರುವುದರಿಂದ ಕುಟುಂಬ ಸಮೇತ ಪ್ರವಾಸ ಕೈಗೊಂಡಿದ್ದೇವೆ. ಬೇರೆ ಮುಖ್ಯವಾದ ಕೆಲಸದ ನಿಮಿತ್ತ ಹೊರಗೆ ಹೋಗುತ್ತಿದ್ದೇವೆ ಎಂದು ರೈಲ್ವೇ, ಬಸ್ ರಿಸರ್ವೇಷನ್ ಟಿಕೆಟ್ ಜೊತೆ ಕೆಲವರು ಅರ್ಜಿ ಕೊಟ್ಟಿದ್ದರೆ, ಮದುವೆ, ಗೃಹ ಪ್ರವೇಶ, ನಾಮಕರಣ ಆಹ್ವಾನ ಪತ್ರಗಳ ಸಮೇತ ಮತ್ತೆ ಕೆಲವರು ಚುನಾವಣಾ ಕೆಲಸದಿಂದ ವಿಮುಕ್ತಿಗೊಳಿಸುವಂತೆ ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದಾರೆ.

ಚಿಕ್ಕ ಮಕ್ಕಳಿಗೆ ಹಾಲುಣಿಸಬೇಕು, ವಯಸ್ಸಾದ ತಂದೆ–ತಾಯಿಯರು ಹಾಸಿಗೆ ಹಿಡಿದಿದ್ದಾರೆ. ಕಾಲು–ಕೈ ಮೂಳೆ ಮುರಿದಿದೆ, ಬಿಪಿ–ಷುಗರ್ ಪೇಷಂಟ್, ಕಿಡ್ನಿ ಸಮಸ್ಯೆ, ಹೃದ್ರೋಗಿ, ಆಗಿಂದಾಗ್ಗೆ ಮೂತ್ರ ವಿಸರ್ಜನೆ ಮಾಡಬೇಕು, ನನಗೆ ನಮ್ಮ ಮನೆ ಬಿಟ್ಟರೆ ಬೇರೆಡೆ ಊಟ–ತಿಂಡಿ ಅಡ್ಜೆಸ್ಟ್ ಆಗಲ್ಲ, ನಿದ್ರೆಯೂ ಬರೋಲ್ಲ. ನಮ್ಮ ಮನೆಯವರು, ಮಕ್ಕಳು ಒಂದು ದಿನವೂ ನನ್ನನ್ನು ಬಿಟ್ಟು ಇರುವುದಿಲ್ಲ. ಹೀಗೆ ಹಲವು ಕಾರಣಗಳನ್ನು ಹೇಳಿ ಚುನಾವಣಾ ಕರ್ತವ್ಯದಿಂದ ಬಿಡುಗಡೆ ಮಾಡಿ ಎಂದು ಕೇಳಿ ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳಿಂದ 500ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಯಾವ ಸಮಸ್ಯೆಗಳಿದ್ದರೂ, ನಿತ್ಯ ತಮ್ಮ ಸರ್ಕಾರಿ ಕೆಲಸಕ್ಕೆ ಹಾಜರಾಗುವವರು ಚುನಾವಣಾ ಕೆಲಸ ಬಂದಾಗ ಮಾತ್ರ ಒಂದೆರಡು ದಿನ ಜವಾಬ್ದಾರಿ ನಿರ್ವಹಿಸಲು ಮೂಗು ಮುರಿಯುತ್ತಿರುವ ಅಧಿಕಾರಿಗಳು, ನೌಕರರು, ಹಲವು ಕಾರಣ ಸೃಷ್ಟಿಸಿ ನೆಪ ಹೇಳಿ ನುಣುಚಿಕೊಳ್ಳಲೆತ್ನಿಸುತ್ತಿರುವುದು ಜಿಲ್ಲಾ ಚುನಾವಣಾಧಿಕಾರಿಗಳಿಗೂ ತಲೆನೋವಾಗಿ ಪರಿಣಮಿಸಿದೆ.

> ಚುನಾವಣಾ ಕರ್ತವ್ಯ ಒಂದು ಪವಿತ್ರ ಸೇವೆ. ಅದು ಒದಗಿ ಬಂದಿರುವುದು ಒಳ್ಳೆಯ ಅವಕಾಶ ಎಂದು ಭಾವಿಸಿ ಪ್ರೀತಿಯಿಂದ ಪಾಲ್ಗೊಂಡು ಅದರ ಅನುಭವ ಪಡೆಯಬೇಕೇ ಹೊರತು, ನೆಪ ಹೇಳಿ ಜಾರಿಕೊಳ್ಳಲೆತ್ನಿಸಿದರೆ, ನಮಗೆ ನಾವೇ ವಂಚನೆ ಮಾಡಿಕೊಂಡಂತೆ. ಒಂದು ವೇಳೆ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವೇ ಇಲ್ಲ ಎಂಬುದು ಕಂಡುಬಂದಲ್ಲಿ ಅಂತಹವರನ್ನು ಒತ್ತಾಯಿಸುವುದಿಲ್ಲ. ಆದರೆ, ಸರ್ಕಾರಿ ಸೇವೆಯಲ್ಲಿರುವವರು ಎಂದೂ ಚುನಾವಣಾ ಕರ್ತವ್ಯಕ್ಕೆ ಹಿಂದೇಟು ಹಾಕಬಾರದು. **–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ**



ಮತಗಟ್ಟೆಗಳಿಗೆ ಹೋಗಲು ಬಸ್ ವ್ಯವಸ್ಥೆ ಇದೆ. ಪೋಲಿಂಗ್ ಸ್ಟೇಷನ್‌ಗಳಲ್ಲಿ ಊಟ, ವಸತಿ, ಕುಡಿಯುವ ನೀರು, ಶೌಚಾಲಯ, ಭದ್ರತೆ ಮಾಡಲಾಗಿದೆ. ತಮ್ಮ ಸಂಬಳದ ಜೊತೆಗೆ ಚುನಾವಣಾ ಕರ್ತವ್ಯಕ್ಕೆ ಪ್ರತ್ಯೇಕ ಗೌರವ ಸಂಭಾವನೆ ನೀಡಲಾಗುತ್ತದೆ. ಇಷ್ಟೆಲ್ಲಾ ಸೌಲಭ್ಯ ಒದಗಿಸಿದ ಮೇಲೂ ನೆಪ ಹೇಳಿ ನುಣುಚಿಕೊಳ್ಳಲೆತ್ನಿಸುವುದು ಆತ್ಮವಂಚನೆ ಮಾಡಿಕೊಂಡಂತೆ. –ಡಾ.ರಾಜೇಂದ್ರ, ಡಿಸಿ.

ಆರು ತಿಂಗಳಿಗಿಂತ ಕಡಿಮೆ ವಯಸ್ಸಿನ ಮಗು ಇದ್ದರೆ, ಗರ್ಭಿಣಿಯರಿಗೆ, ಗಂಭೀರ ಆರೋಗ್ಯ ಸಮಸ್ಯೆ ಇದ್ದು, ಹಾಸಿಗೆ ಹಿಡಿದಿದ್ದರೆ, ಮತದಾನದ ದಿನವೇ ಮದುವೆ, ಗೃಹ ಪ್ರವೇಶದಂತಹ ಕಾರ್ಯಕ್ರಮ ನಿಗದಿಯಾಗಿದ್ದರೆ, ಹಾಸಿಗೆ ಹಿಡಿದಿರುವ ತಂದೆ–ತಾಯಿಯರಿದ್ದು, ಅವರನ್ನು ನೋಡಿಕೊಳ್ಳಲು ಬೇರೆ ಯಾರೂ ಇಲ್ಲದಿದ್ದಲ್ಲಿ ಹಾಗೂ ಇನ್ನಿತರ ನೈಜ ಕಾರಣಗಳಿದ್ದಲ್ಲಿ ಮಾತ್ರ ಮೆಡಿಕಲ್ ಗ್ರೌಂಡ್ ಮತ್ತು ಮಾನವೀಯತೆ ಆಧಾರದಲ್ಲಿ ಅವರ ಮನವಿಯನ್ನು ಪರಿಗಣಿಸಿ ಸಹಾಯ ಮಾಡಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ ಪರ ಮತಯಾಚನೆ



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ, ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ಬೆಂಬಲಿಗರು ನಾಗವಾಲ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಮತಯಾಚನೆ ಸಂದರ್ಭದಲ್ಲಿ ಮುಖಂಡರು ಸನ್ಮಾನಿಸಿದರು.



ಮೈಸೂರು ತಾಲೂಕು ಜೆಡಿಎಸ್ ಉಪಾಧ್ಯಕ್ಷ ಮಂಡಕಳ್ಳಿ ನಂಜುಂಡಸ್ವಾಮಿ ಜೆಡಿಎಸ್ ತೊರೆದು ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಹಾಗೂ ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಮೈಸೂರು: ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ ಮತ್ತು ತಂಡ ಕ್ಷೇತ್ರದಾದ್ಯಂತ ಸಂಚರಿಸುತ್ತಾ ಮತಯಾಚಿಸುತ್ತಿದ್ದಾರೆ. ಕ್ಷೇತ್ರ ವ್ಯಾಪ್ತಿಯ ಗೆಜ್ಜಗಹಳ್ಳಿ, ಮಂಡಕಳ್ಳಿ, ಕೆ.ಎನ್.ಹುಂಡಿ, ಕಡಕೊಳ, ಬೀರೇಗೌಡನಹುಂಡಿ, ಬ್ಯಾತಹಳ್ಳಿ, ಸಿಂಧುವಳ್ಳಿ, ದೊಡ್ಡ ಕಾನ್ಯ, ಚಿಕ್ಕಕಾನ್ಯ, ದಡದಹಳ್ಳಿ, ಕೋಟೆಹುಂಡಿ, ಕೆಂಚಲಗೂಡು, ನಾಗವಾಲ ಗ್ರಾಮಗಳಲ್ಲಿ ಮತಯಾಚಿಸಿದರು.

ನಾಗವಾಲ ಗ್ರಾಮದಲ್ಲಿ ಮಾತನಾಡಿದ ಅಭ್ಯರ್ಥಿ ಸಿದ್ದೇಗೌಡ, ಜೆಡಿಎಸ್ ಮತ್ತು ಬಿಜೆಪಿ ಪಕ್ಷವನ್ನು ಎದುರಿಸಬೇಕಾದರೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ಚಾಮುಂಡೇಶ್ವರಿಯಲ್ಲಿ ಕಾಂಗ್ರೆಸ್ ಗೆಲ್ಲಿಸಿ, ಸಿದ್ದರಾಮಯ್ಯನವರ ಮತ್ತು ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಕೈ ಬಲಪಡಿಸಬೇಕಾಗಿದೆ. ಕಾಂಗ್ರೆಸ್ ಸರ್ಕಾರ ನೀಡಿದ ಹಲವಾರು ಜನಪರ ಯೋಜನೆಗಳು ಬಡವರಿಗೆ ತಲುಪಿವೆ. ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಸಿದ್ದರಾಮಯ್ಯನವರು ಗ್ಯಾರಂಟಿ ಕಾರ್ಡ್‌ನಲ್ಲಿ ಇರುವ ಯೋಜನೆಗಳನ್ನು ಜಾರಿಗೆ ತರಲಿದ್ದಾರೆ. ಈ ಬಾರಿ ಕಾಂಗ್ರೆಸ್ ಗೆಲ್ಲಿಸುವಂತೆ ಮತದಾರರಲ್ಲಿ ಮನವಿ ಮಾಡಿಕೊಂಡರು. ಕಡಕೊಳ ಗ್ರಾಮದಲ್ಲಿ ರೋಡ್ ಶೋ ನಡೆಸಿದರು.

ಕಾಂಗ್ರೆಸ್ ಮುಖಂಡರಾದ ಕೆ.ಮರೀಗೌಡ, ಎಪಿಎಂಸಿ ಬಸವರಾಜು, ಕೂರ್ಗಳ್ಳಿ ಮಹದೇವು, ಹಿನಕಲ್ ಕೆಂಪನಾಯಕ, ಉದ್ಬೂರು ಕೃಷ್ಣ, ನರೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸ್ವಾಮಿ, ಮಾವಿನಹಳ್ಳಿ ರವಿ, ಮಂಡಕಳ್ಳಿ ನಂಜುಂಡಸ್ವಾಮಿ, ಕಡಕೊಳ ನಾಗರಾಜು, ಕೃಷ್ಣಕುಮಾರ್ ಸಾಗರ್, ಪುಟ್ಟರಾಜು, ಬೀರಿಹುಂಡಿ ಬಸವಣ್ಣ, ಅಕ್ಕಿ ಸಿದ್ದರಾಮೇಗೌಡ, ಮಾಕಿ ಮಹದೇವು ಕೈ ಅಭ್ಯರ್ಥಿ ಪರವಾಗಿ ಮತಯಾಚಿಸಿದರು.

ಕೆಆರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ವಿವಿಧೆಡೆ ಮತಯಾಚನೆ

ಮೈಸೂರು, ಏ.22(ಎಂಕೆ)– ಕೆ.ಆರ್.ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ನಗರದ ವಿವಿಧೆಡೆ ಶನಿವಾರ ಮತಯಾಚಿಸಿದರು. ನಗರದ ಆಲನಹಳ್ಳಿ ಬಡಾವಣೆಯಲ್ಲಿರುವ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮತಯಾಚನೆ ಆರಂಭಿಸಿದ ಅವರು, 53ನೇ ವ್ಯಾಪ್ತಿಯ ಆಲನಹಳ್ಳಿ, ಆಲನಹಳ್ಳಿ ಬಡಾವಣೆ, ಸಿದ್ದಾರ್ಥ ಬಡಾವಣೆ, ಕುರುಬಾರಹಳ್ಳಿ, ಕೆ.ಸಿ.ನಗರ ಸೇರಿದಂತೆ ವಿವಿಧೆಡೆ ತಮ್ಮ ಬೆಂಬಲಿಗರೊಡನೆ ಮನೆ ಮನೆಗೆ ತೆರಳಿ ಮತಯಾಚಿಸಿದರು. ಕೆ.ಆರ್.ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಮತ ನೀಡುವಂತೆ ಮನವಿ ಮಾಡಿದರು. ಉಪ ಮೇಯರ್ ಡಾ.ಜಿ.ರೂಪ, ಬಿಜೆಪಿ ಮುಖಂಡರಾದ ಬಿ.ಪಿ.ಮಂಜುನಾಥ್, ಯೋಗೇಶ್ ಬಾಬು, ಕೆ.ಜೆ.ರಮೇಶ್, ವಿನಯ್ ಪಾಂಚಜನ್ಯ, ಅಶೋಕ್, ಸೋಮಶೇಖರ್ ಯೋಗಿಶ್, ಅರ್ಜುನ್, ಪ್ರಸನ್ನ, ಭಾರತಿ, ಮಂಜುಳ, ಗಿರಿಜಾ, ಶಶಾಂಕ್, ಮಹೇಶ್, ಅಂಗಡಿ ಮಹದೇವಣ್ಣ, ಜೀವನ್, ಹರೀಶ್ ಮತ್ತಿತರರಿದ್ದರು.



ಕೆ.ಆರ್. ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ನಗರದ ವಿವಿಧೆಡೆ ಶನಿವಾರ ಮತಯಾಚಿಸಿದರು.

ನಾಳೆ ‘ಗ್ರಾಮ ಸುರಾಜ್ಯ’ ಬಿಡುಗಡೆ

ಮೈಸೂರು,ಏ.22–ಮೈಸೂರಿನ ವಿಸ್ಮಯ ಬುಕ್‌ಹೌಸ್ ಪ್ರಕಾಶನದ ‘ಗ್ರಾಮ ಸುರಾಜ್ಯ’ ಪುಸ್ತಕ ರಾಷ್ಟ್ರೀಯ ಪಂಚಾಯತ್ ರಾಜ್ ದಿನ(ಏ.24)ದಂದು ಬಿಡುಗಡೆಗೊಳ್ಳಲಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಿವೃತ್ತ ನಿರ್ದೇಶಕ ಎಂ.ಕೆ.ಕೆಂಪೇಗೌಡ ರಚಿಸಿರುವ ಈ ಪುಸ್ತಕವನ್ನು, ಬೆಂಗಳೂರಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಭಾಂಗಣದಲ್ಲಿ ಏ.24ರ ಸಂಜೆ 4.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಪುಸ್ತಕ ಬಿಡುಗಡೆ ಮಾಡಲಿದ್ದಾರೆ.

ಪಂಚಾಯತ್ ರಾಜ್ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಅಧ್ಯಕ್ಷತೆ ವಹಿಸಲಿದ್ದು, ಇಲಾಖೆ ನಿವೃತ್ತ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಎಸ್.ಮೀನಾಕ್ಷಿ ಸುಂದರಂ ಪುಸ್ತಕ ಕುರಿತು ಮಾತನಾಡಲಿದ್ದಾರೆ. ಪಂಚಾಯತ್‌ರಾಜ್ ಆಯುಕ್ತಾಲಯದ ಆಯುಕ್ತೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಗ್ರಾಮೀಣಾಭಿವೃದ್ಧಿ ಆಯುಕ್ತೆ ಶಿಲ್ಪಾನಾಗ್, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ನಿರ್ದೇಶಕಿ ನಳಿನಿ ಅತುಲ್, ಇ–ಆಡಳಿತದ ನಿರ್ದೇಶಕಿ ಶುಭ ಕಲ್ಯಾಣ್, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ನಿರ್ದೇಶಕಿ ಕೆ.ಲಕ್ಷ್ಮೀಪ್ರಿಯಾ ಭಾಗವಹಿಸಲಿದ್ದಾರೆ.

ವೈಭವ್‌ಗೌಡಗೆ ಅತ್ಯುನ್ನತ ಶ್ರೇಣಿ



ಬೆಂಗಳೂರು: ಇಲ್ಲಿನ ನಾರಾಯಣ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ವೈಭವ್ ಗೌಡ 516(ಶೇ.86) ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾನೆ. ಈತ ಮಂಡ್ಯದ ಕಲ್ಲಳ್ಳಿ ನಿವಾಸಿ ಶಿವನಂಜಯ್ಯ ಮತ್ತು ಮಂಜುಳಾ ದಂಪತಿ ಪುತ್ರನಾಗಿದ್ದಾನೆ.

ಗುಂಡಿಕ್ಕಿ ಅಡಿಕೆ ವ್ಯಾಪಾರಿ ಹತ್ಯೆಗೆ ಯತ್ನ: ನಿವೃತ್ತ ಎಸ್ಪಿ ಪುತ್ರನ ಬಂಧನ

ಕೂದಲೆಳೆ ಅಂತರದಲ್ಲಿ ವ್ಯಾಪಾರಿ ಪಾರು, ಆರೋಪಿ ಸೆರೆ

- ಅಂಗಡಿ ಮಳಿಗೆ ಖಾಲಿ ಮಾಡುವ ವಿಚಾರಕ್ಕೆ ಜಗಳ; ವಿರಾಜಪೇಟೆ ಬಳಿ ಘಟನೆ



ವಿರಾಜಪೇಟೆ,ಏ.22–ಗುಂಡಿಕ್ಕಿ, ಅಡಿಕೆ ವ್ಯಾಪಾರಿ ಹತ್ಯೆಗೆ ನಿವೃತ್ತ ಎಸ್ಪಿ ಪುತ್ರ ಯತ್ನಿಸಿರುವ ಘಟನೆ ಅಮ್ಮತ್ತಿಯಲ್ಲಿ ನಡೆದಿದೆ. ವರ್ತಕ ಕೆ.ಬೋಪಣ್ಣ ಗುಂಡಿನ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಗುಂಡು ಹಾರಿಸಿದ ನಿವೃತ್ತ ಎಸ್ಪಿ ಪುತ್ರ ಎನ್.ರಂಜನ್ ಚಿಣ್ಣಪ್ಪ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಹಿನ್ನೆಲೆ: ವಿರಾಜಪೇಟೆ ತಾಲೂಕು ಅಮ್ಮತ್ತಿಯ ಸಿದ್ದಾಪುರ ರಸ್ತೆಯಲ್ಲಿರುವ ಎನ್.ರಂಜನ್ ಚಿಣ್ಣಪ್ಪ ಎಂಬುವರ ಕಟ್ಟಡದ ಮಳಿಗೆ ಒಂದರಲ್ಲಿ ಕೆ.ಬೋಪಣ್ಣ, ಕಳೆದ 8 ವರ್ಷಗಳಿಂದ ಅಡಿಕೆ ಖರೀದಿ ವ್ಯಾಪಾರ ಮಾಡಿಕೊಂಡಿದ್ದರು. ಕೆಲ ದಿನಗಳ ಹಿಂದೆ ಅಂಗಡಿ ಮಾಲೀಕ ಆರೋಪಿ ಎನ್.ರಂಜನ್ ಚಿಣ್ಣಪ್ಪ, ಅಂಗಡಿ ತೆರವು ಮಾಡುವಂತೆ ಬೋಪಣ್ಣ ಅವರಿಗೆ ಸೂಚಿಸಿದ್ದರು ಎನ್ನಲಾಗಿದೆ. ಅದರಂತೆ ಬೋಪಣ್ಣ ಏಪ್ರಿಲ್ ತಿಂಗಳ ಕೊನೆಯಲ್ಲಿ ಅಂಗಡಿ ತೆರವು ಮಾಡುವುದಾಗಿ ತಿಳಿಸಿದ್ದರು. ಮಾತ್ರವಲ್ಲದೇ, ಅಂಗಡಿ ಬಾಡಿಗೆ ಪಡೆಯುವ ಸಮಯದಲ್ಲಿ ನೀಡಲಾಗಿದ್ದ 25 ಸಾವಿರ ರೂ. ಮುಂಗಡ ಹಣದಲ್ಲಿ ಏಪ್ರಿಲ್ ತಿಂಗಳ ಬಾಡಿಗೆ ಹಿಡಿದುಕೊಂಡು ಉಳಿಕೆ 16 ಸಾವಿರ ರೂ. ಗಳನ್ನು ನೀಡುವಂತೆಯೂ ಹೇಳಿದ್ದರು. ಇಂದು ಬೆಳಗ್ಗೆ ಅಂಗಡಿಗೆ ಬಂದ ಎನ್.ರಂಜನ್ ಚಿಣ್ಣಪ್ಪ, ಅಂಗಡಿ ತೆರವು ವಿಚಾರವಾಗಿ ಕ್ಯಾತೆ ತೆಗೆದಿದ್ದಾನೆ. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಈ ಸಂದರ್ಭ ರಂಜನ್ ಚಿಣ್ಣಪ್ಪ ತನ್ನ ಬಳಿ ಇದ್ದ ರಿವಾಲ್ವರ್ ಹೊರ ತೆಗೆದು ಬೋಪಣ್ಣರ ಮೇಲೆ ಗುಂಡು ಹಾರಿಸಲು ಮುಂದಾದಾಗ ಬೋಪಣ್ಣ, ರಂಜನ್ ಕೈ ಹಿಡಿದು ಅಲುಗಾಡಿಸಿದಾಗ ರಿವಾಲ್ವರ್‌ನಿಂದ ಸಿಡಿದ ಗುಂಡುಗಳು ಪಕ್ಕದಲ್ಲಿ ಹಾದು ಹೋಗಿದ್ದು, ಬೋಪಣ್ಣ, ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಒಟ್ಟು 3 ಗುಂಡುಗಳು ಸಿಡಿದಿದ್ದು, ಆ ಪೈಕಿ 2 ಗುಂಡುಗಳು ಅಂಗಡಿಯ ಶೆಟರ್‌ಗೆ ತಗುಲಿದ್ದು, ಒಂದು ಗುಂಡು ಗಾಳಿಯಲ್ಲಿ ಹಾರಿದೆ. ಬಳಿಕ ಇಬ್ಬರ ನಡುವೆ ನೂಕಾಟ–ತಳ್ಳಾಟ ನಡೆದಿದ್ದು, ಈ ವೇಳೆ ಆರೋಪಿ ರಂಜನ್ ಚಿಣ್ಣಪ್ಪ ಗಾಯಗೊಂಡಿದ್ದಾನೆ. ಪೊಲೀಸರು ಸ್ಥಳಕ್ಕೆ ಧಾವಿಸಿ, ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಸ್ಥಳದಲ್ಲೇ ಬಿದ್ದಿದ್ದ ರಿವಾಲ್ವರ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆಸಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ವಿರಾಜಪೇಟೆ ಡಿವೈಎಸ್‌ಪಿ, ವೃತ್ತ ನಿರೀಕ್ಷಕರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮಹಿಳೆಯರು ಉದ್ಯಮ ಆರಂಭಿಸಿ

ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಸಲಹೆ

ಮೈಸೂರು, ಏ.22 (ಎಸ್‌ಬಿಡಿ)– ಮಹಿಳೆಯರು ಸಣ್ಣ ಪ್ರಮಾಣದ ಉದ್ಯಮ ಆರಂಭಿಸುವಂತೆ ಮೈಸೂರು ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಒಡೆಯರ್ ಸಲಹೆ ನೀಡಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಮಹಿಳಾ ವಿಭಾಗ ‘ವಿಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸಸ್(ವೈಸ್)’ ವತಿಯಿಂದ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಆಯೋಜಿಸಿದ್ದ 2 ದಿನಗಳ ವೈಸ್ ಎಕ್ಸ್‌ಪೋ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಸಣ್ಣ ಪ್ರಮಾಣದ ವ್ಯಾಪಾರ ಆರಂಭಿಸಿದರೆ ಅದು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟಕ್ಕೆ ಬೆಳೆಯಬಹುದು. ಈ ನಿಟ್ಟಿನಲ್ಲಿ ಸಣ್ಣ ಉದ್ಯಮ ಸ್ಥಾಪನೆಗೆ ಸಾಕಷ್ಟು ಅವಕಾಶ ಹಾಗೂ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ವೈಸ್ ಅಧ್ಯಕ್ಷೆ ಟಿ.ಎ.ವಸಂತಕುಮಾರಿ ಮಾತನಾಡಿ, ಪ್ರತಿ ಮಹಿಳೆಗೂ ಸ್ವಂತ ಉದ್ಯಮ ಸ್ಥಾಪಿಸಿ, ಸಮರ್ಥವಾಗಿ ಮುನ್ನಡೆಸಬಲ್ಲ ಸಾಮರ್ಥ್ಯವಿರುತ್ತದೆ. ಹಾಗಾಗಿ ನಾಲ್ಕು ಗೋಡೆಗಳ ಮಧ್ಯೆ ಸಿಲುಕಿಕೊಳ್ಳದೆ ಹೊರಬಂದು ಸಮಾಜದಲ್ಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಹೀಗೆ ಸ್ವಂತ ಉದ್ಯಮದತ್ತ ಹೆಜ್ಜೆ ಇಡುವ ಮಹಿಳೆಯರಿಗೆ ನೆರವಾಗುವುದು ನಮ್ಮ ಸಂಸ್ಥೆಯ ಆಶಯವಾಗಿದೆ. ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದರು.



ಎಕ್ಸ್‌ಪೋ ಯಶಸ್ವಿ: ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಆಯೋಜಿಸಲಾಗಿದ್ದ ‘ವೈಸ್ ಎಕ್ಸ್‌ಪೋ’ ಕಾರ್ಯಕ್ರಮ ಯಶಸ್ವಿಯಾಯಿತು. ಗ್ರಾಮೀಣ ಮಹಿಳೆಯರಿಗೆ ನೀಡಲಾಗಿದ್ದ ಐದು ಸೇರಿ ಒಟ್ಟು 40 ಮಳಿಗೆಗಳಲ್ಲಿ ವಿವಿಧ ಬಣ್ಣ ಹಾಗೂ ಶೈಲಿಯ ಉಡುಪುಗಳು, ಫ್ಯಾನ್ಸಿ ಡ್ರೆಸ್, ಬ್ಯೂಟಿ ಪರಿಕರಗಳು, ಮನೆಯ ಅಲಂಕಾರಿಕ ವಸ್ತುಗಳು, ಹೋಮ್ ಮೇಡ್ ಜ್ಯೂಸ್, ಹ್ಯಾಂಡ್ ಮೇಡ್ ಮ್ಯಾಟ್, ಸಿದ್ಧ ಕುರುಕುರು ಆಹಾರ ಪದಾರ್ಥ, ಹಪ್ಪಳ, ಸಂಡಿಗೆ, ಚಕ್ಕುಲಿ ಮೊದಲಾದ ವಸ್ತುಗಳ ಮಾರಾಟ ನಡೆಸಲಾಯಿತು.

ಇದೇ ವೇಳೆ ತಾಲೂಕಿನ ನಾಗವಾಲ ಗ್ರಾಪಂ ಪಿಡಿಓ ಡಾ.ಶೋಭಾರಾಣಿ, ಉದ್ಯಮಿಗಳಾದ ಪದ್ಮಾವತಿ ಭಟ್, ಡಾ.ಸಿ.ಕೆ.ಮೀನಾ ಅವರನ್ನು ಸನ್ಮಾನಿಸಲಾಯಿತು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಲ್ಯಾಣ ಮಂಟಪದ ಮಾಲೀಕರಾದ ವಿದ್ಯಾ ಅರುಣ್, ವೀಣಾ ಅಶೋಕ್ ಮತ್ತಿತರರಿದ್ದರು.

ಬಿಜೆಪಿ ಪರ ಅಲೆಯಲ್ಲ, ಸುನಾಮಿ ಎದ್ದಿದೆ: ವಿಜಯೇಂದ್ರ



ಮಳವಳ್ಳಿ, ಏ.22– ಜೆಡಿಎಸ್ ಭದ್ರಕೋಟೆಯಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಆ ಪಕ್ಷ ಛಿದ್ರವಾಗಿದ್ದು, ಜಿಲ್ಲೆಯಲ್ಲಿ ಬಿಜೆಪಿ ಪರ ಬರೀ ಅಲೆಯಲ್ಲ ಸುನಾಮಿಯೇ ಎದ್ದಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಪಟ್ಟಣದ ತಾಪಂ ಬಳಿ ಬಿಜೆಪಿ ಅಭ್ಯರ್ಥಿ ಜಿ.ಮುನಿರಾಜು ಪರ ರೋಡ್ ಶೋ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಮೊದಲ ಬಾರಿಗೆ ಕೆ.ಆರ್.ಪೇಟೆಯಲ್ಲಿ ಕೆ.ಸಿ.ನಾರಾಯಣಗೌಡರ ಗೆಲುವು ಸಾಧಿಸುವ ಮೂಲಕ ಕಮಲ ಅರಳಿಸಿದ್ದರು. ಆಗ ಅಲ್ಲಿ ಗೆಲ್ಲುತ್ತೇವೆ ಎಂದು ಅಂದುಕೊಂಡಿರಲಿಲ್ಲ. ಗೆಲುವು ಸಾಧಿಸುವ ಮೂಲಕ ಜೆಡಿಎಸ್‌ನ ಭದ್ರಕೋಟೆ ಛಿದ್ರ ಮಾಡಿದ್ದೇವೆ. ಈ ಬಾರಿ ಮಳವಳ್ಳಿಯಲ್ಲಿ ಕಾರ್ಯಕರ್ತರ ಉತ್ಸಾಹ ಗಮನಿಸಿದರೆ ನಮ್ಮ ಅಭ್ಯರ್ಥಿ ಜಿ.ಮುನಿರಾಜು ಗೆಲುವು ಸಾಧಿಸುವುದರಲ್ಲಿ ಯಾವುದೇ ಅನುಮಾನ ಬೇಡ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 80ರ ವಯಸ್ಸಿನಲ್ಲೂ ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರವಾಸ ಮಾಡುತ್ತಿದ್ದಾರೆ. ಇಲ್ಲಿ ಗೆದ್ದು ಹೊಸ ಇತಿಹಾಸ ನಿರ್ಮಿಸುತ್ತೇವೆ. ಜಿ.ಮುನಿರಾಜು ಗೆದ್ದರೆ ನಿಮ್ಮ ವಿಜಯೇಂದ್ರ ಹಾಗೂ ಬಿ.ಎಸ್.ಯಡಿಯೂರಪ್ಪ ಗೆದ್ದಂತೆ. ಮೇ 13ರಂದು ಮಳವಳ್ಳಿಗೆ ಬರುತ್ತೇನೆ. ಎಲ್ಲರೂ ಸೇರಿ ಪಟಾಕಿ ಹೊಡೆಯೋಣ ಎಂದು ಹೇಳಿದರು.

ಕಾಂಗ್ರೆಸ್, ಜೆಡಿಎಸ್‌ನವರು ಖಾಲಿ ಭಾಷಣ ಮಾಡಲು ಬರುತ್ತಾರೆ. ಆದರೆ ನಾವು ಹಾಗೆ ಮಾಡುವುದಿಲ್ಲ. ನಮ್ಮ ಅಭ್ಯರ್ಥಿ ಗೆದ್ದರೆ ವಿರೋಧ ಪಕ್ಷದಲ್ಲಿ ಕೂರುವುದಿಲ್ಲ. ಆಡಳಿತ ಪಕ್ಷದ ಜೊತೆ ಇರುತ್ತಾರೆ ಎನ್ನುವ ಮೂಲಕ ಪರೋಕ್ಷವಾಗಿ ಮುಂದೆಯೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಕಿರುಗಾವಲಿಗೆ ಆಗಮಿಸಿದ ಬಿ.ವೈ.ವಿಜಯೇಂದ್ರ ಅವರಿಗೆ ಕಾರ್ಯಕರ್ತರು ಪುಷ್ಪಾರ್ಚನೆ ಮಾಡಿ, ಪಟಾಕಿ ಸಿಡಿಸಿ ಅದ್ದೂರಿಯಾಗಿ ಸ್ವಾಗತಿಸಿದರು. ಪಟ್ಟಣದಲ್ಲಿ ಬೃಹತ್ ಹೂವಿನ ಹಾರ ಹಾಕಿ ಜೈಕಾರ ಹಾಕಿದರು. ಈ ವೇಳೆ ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಎಂ.ಎನ್.ಕೃಷ್ಣ, ಬಿಜೆಪಿ ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ಯಮದೂರು ಸಿದ್ದರಾಜು, ತಾಲೂಕು ಯುವ ಮೋರ್ಚಾ ಅಧ್ಯಕ್ಷ ಹೊನ್ನಾಪ್, ಮುಖಂಡರಾದ ಕುಮಾರಸ್ವಾಮಿ, ಮಧು ಗಂಗಾಧರ್ ಇದ್ದರು.

ಮನವೊಲಿಕೆ: ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿ ಅಸಮಾಧಾನಗೊಂಡಿದ್ದ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷ ಯಮದೂರು ಸಿದ್ದರಾಜು ಅವರನ್ನು ಮನವೊಲಿಸುವಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಯಶಸ್ವಿಯಾದರು.

ಪಟ್ಟಣದ ಯಮದೂರು ಸಿದ್ದರಾಜು ನಿವಾಸದಲ್ಲಿ ಅವರನ್ನು ಭೇಟಿ ಮಾಡಿ ಮುಂದಿನ ದಿನಗಳಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಆಗ ನಿಮಗೆ ಸೂಕ್ತ ಸ್ಥಾನಮಾನ ಕೊಡಲಾಗುವುದು. ನೀವು ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಸೂಚನೆ ನೀಡಿದರು.

ಬಿಎಸ್‌ವೈ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ

ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿಯಲ್ಲಿ ಮುಗಿಸಲು ಪ್ಲಾನ್ ನಡೆದಿದೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಬಿಜೆಪಿಯನ್ನು ಅಧಿಕಾರಕ್ಕೆ ತರಲು ಓಡಾಡುತ್ತಿರುವ ಬಿ.ಎಸ್.ಯಡಿಯೂರಪ್ಪ ಅವರನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಅಂಥ ಕುತಂತ್ರ ಬಿಜೆಪಿಯಲ್ಲಿ ನಡೆಯುತ್ತಿಲ್ಲ. ಎಲ್ಲರೂ ಒಗ್ಗಟ್ಟಾಗಿ ಪಕ್ಷದ ಪರ ಶ್ರಮಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಇಷ್ಟು ವರ್ಷ ಮೀಸಲಾತಿ ಬಗ್ಗೆ ಕಣ್ಣೊರೆಸುವ ತಂತ್ರ ಅನುಸರಿಸುತ್ತಿತ್ತು. ಆದರೆ ಬಿಜೆಪಿ ಪ್ರಾಮಾಣಿಕವಾಗಿ ಗಟ್ಟಿ ನಿರ್ಧಾರ ಮಾಡಿದೆ ಎಂದು ಹೇಳಿದರು.

ಇದಕ್ಕೆ ಸಮ್ಮತಿ ಸೂಚಿಸಿದ ಯಮದೂರು ಸಿದ್ದರಾಜು ಜಿ.ಮುನಿರಾಜು ಅವರ ಜೊತೆ ನಿಲ್ಲುವುದಾಗಿ ಹೇಳಿದರು. ಬಿ.ವೈ.ವಿಜಯೇಂದ್ರ ಮಾತನಾಡಿ, ಅಧಿಕಾರ ನೀಡಲಿದ್ದೇವೆ ಯಮದೂರು ಸಿದ್ದರಾಜು ಹಾಗೂ ಕುಮಾರಸ್ವಾಮಿ ಅವರು ಪಕ್ಷ ಸಂಘಟನೆಗೆ ದುಡಿದಿದ್ದಾರೆ. ಟಿಕೆಟ್ ಸಿಗಲಿಲ್ಲವೆಂದು ಅಸಮಾಧಾನ ಮಾಡಿಕೊಂಡಿದ್ದರು. ಮಾತುಕತೆ ನಡೆಸಿದ ಬಳಿಕ ಮುನಿರಾಜು ಅವರ ಗೆಲುವಿಗೆ ಶ್ರಮಿಸುವುದಾಗಿ ಭರವಸೆ ನೀಡಿದ್ದಾರೆಂದು ಹೇಳಿದರು.

ಸಿ.ಎಸ್.ಪುಟ್ಟರಾಜು ಪರ ಪುತ್ರ ಶಿವರಾಜು, ಸೊಸೆ ತನುಶ್ರೀ ಪ್ರಚಾರ

ಕ್ಯಾತನಹಳ್ಳಿಯಲ್ಲಿ ಸುನೀತ ಪುಟ್ಟಣ್ಣಯ್ಯ ಆಶೀರ್ವಾದ ಪಡೆದ ಸಿಎಸ್‌ಪಿ ಪುತ್ರ, ಸೊಸೆ : ತಂದೆಗೆ ಮತ ನೀಡುವಂತೆ ಮನವಿ



ಪಾಂಡವಪುರ, ಏ.22– ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಪರ ಅವರ ಪುತ್ರ ಸಿ.ಪಿ.ಶಿವರಾಜು, ಸೊಸೆ ತನುಶ್ರೀ ಶಿವರಾಜು ತಾಲೂಕಿನ ಕ್ಯಾತನಹಳ್ಳಿಯಲ್ಲಿ ಬಿರುಸಿನ ಪ್ರಚಾರ ನಡೆಸಿ ಎದುರಾಳಿ ರೈತ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಮನೆಗೆ ತೆರಳಿ ಮತಯಾಚಿಸುವ ಮೂಲಕ ಎಲ್ಲರ ಗಮನ ಸೆಳೆದರು.

ಕ್ಯಾತನಹಳ್ಳಿ ಗ್ರಾಮದಲ್ಲಿರುವ ದರ್ಶನ್ ಪುಟ್ಟಣ್ಣಯ್ಯ ಅವರ ಮನೆಗೆ ತೆರಳಿದ ಸಿ.ಪಿ.ಶಿವರಾಜು, ಪತ್ನಿ ತನುಶ್ರೀ ಅವರು ದರ್ಶನ್ ಪುಟ್ಟಣ್ಣಯ್ಯ ಅವರ ತಾಯಿ ಸುನೀತ ಪುಟ್ಟಣ್ಣಯ್ಯ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು. ಬಳಿಕ ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಅವರಿಗೆ ಮತ ನೀಡುವಂತೆ ಮನವಿ ಮಾಡಿದರು. ನಂತರ ಕ್ಯಾತನಹಳ್ಳಿ ಗ್ರಾಮದ ಬೀದಿ ಬೀದಿಗಳಲ್ಲೂ ಸಂಚರಿಸಿ ಜೆಡಿಎಸ್ ಅಭ್ಯರ್ಥಿ ಪುಟ್ಟರಾಜು ಪರ ಮತಯಾಚಿಸಿದರು. ಈ ವೇಳೆ ಗ್ರಾಮದ ಮಹಿಳೆಯರು ಸಿ.ಪಿ.ಶಿವರಾಜು, ಪತ್ನಿ ತನುಶ್ರೀಗೆ ಆರತಿ ಎತ್ತಿ ಸ್ವಾಗತಿಸುವ ಮೂಲಕ ಬೆಂಬಲ ನೀಡುವುದಾಗಿ ಭರವಸೆ ನೀಡಿದರು. ಬಳಿಕ ಮಾತನಾಡಿದ ಸಿ.ಪಿ.ಶಿವರಾಜು ಅವರು, ಸಿ.ಎಸ್.ಪುಟ್ಟರಾಜು ಅವರ ಅಭಿವೃದ್ಧಿ ಕಾರ್ಯ ಮುಂದಿಟ್ಟು ಕ್ಷೇತ್ರದಲ್ಲಿ ಚುನಾವಣೆ ಪ್ರಚಾರ ನಡೆಸುತ್ತಿದ್ದೇವೆ. ಎಲ್ಲಾ ಕಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಈ ಬಾರಿ ಚುನಾವಣೆಯಲ್ಲಿ ಸಿ.ಎಸ್.ಪುಟ್ಟರಾಜು ಅವರು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಗವೀಗೌಡ, ಪ್ರವೀಣ್ ಸೇರಿದಂತೆ ಹಲವರು ಮುಖಂಡರು ಭಾಗವಹಿಸಿದ್ದರು.

ಕಾಡಾನೆ ದಾಳಿ: 40 ತೆಂಗಿನ ಸಸಿ ನಾಶ

ಹಲಗೂರು, ಏ.22– ಕಾಡಾನೆ ದಾಳಿಗೆ 40 ತೆಂಗಿನ ಸಸಿ ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಡಿ.ಎಲ್.ಪುಟ್ಟೇಗೌಡರ ಜಮೀನಿನಲ್ಲಿ ಬೆಳೆದಿದ್ದ ತೆಂಗಿನ ಸಸಿಗಳು ನಾಶವಾಗಿರುವುದು. ಶುಕ್ರವಾರ ರಾತ್ರಿ ಬಸವನಬೆಟ್ಟ ಅರಣ್ಯ ಪ್ರದೇಶದಿಂದ ಬಂದ ಕಾಡಾನೆಗಳು ಜಮೀನಿನಲ್ಲಿದ್ದ 40 ತೆಂಗಿನ ಸಸಿ ಹಾಗೂ ನೀರಾವರಿ ಪೈಪುಗಳು ಸೇರಿದಂತೆ ಬಾಗೆ ಮರಗಳನ್ನು ಮುರಿದು ಹಾಕಿದೆ.

ಜಮೀನು ಮಾಲೀಕ ಡಿ.ಎಲ್.ಪುಟ್ಟೇಗೌಡ ಮಾತನಾಡಿ, ನಮಗೆ ವ್ಯವಸಾಯ ಬಿಟ್ಟು ವ್ಯಾಪಾರ ಮಾಡಲು ಬರಲ್ಲ. ವ್ಯವಸಾಯವೇ ನಮ್ಮ ಜೀವನಾಧಾರ. ವ್ಯವಸಾಯ ಮಾಡಿಕೊಂಡು ನಾವು ಜೀವನ ನಡೆಸಬೇಕಾಗಿದೆ. ನಮ್ಮ ಜಮೀನಿನಲ್ಲಿ 4 ವರ್ಷಗಳ ಹಿಂದೆ 150 ತೆಂಗಿನ ಸಸಿಗಳನ್ನು ಹಾಕಿದ್ದು, ಈ ಪೈಕಿ ಕಾಡಾನೆಗಳು 40 ತೆಂಗಿನ ಸಸಿ ತುಳಿದು ನಾಶಪಡಿಸಿದೆ. ಒಂದೊಂದು ತೆಂಗಿನ ಸಸಿಗೂ 5 ಸಾವಿರ ರೂ. ಖರ್ಚಾಗಿದ್ದು, ಅವುಗಳು ಇನ್ನು 2 ವರ್ಷದಲ್ಲಿ ಫಸಲು ಬಿಡಬೇಕಾಗಿತ್ತು. ಆದರೆ ಕಾಡಾನೆಗಳು ತೆಂಗಿನ ಸಸಿ, ವ್ಯವಸಾಯಕ್ಕಾಗಿ ಅಳವಡಿಸಿದ ಹನಿ ನೀರಾವರಿ ಪೈಪುಗಳು ಹಾಗೂ ಪಂಪ್ ಸೆಟ್ ಸಾಮಗ್ರಿಗಳನ್ನು ನಾಶಪಡಿಸಿದೆ. ಇದರಿಂದಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡುವಂತೆ ಮನವಿ ಮಾಡಿದ ಅವರು, ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡು ಕಾಡಾನೆ ಹಾವಳಿ ತಪ್ಪಿಸುವಂತೆ ಮನವಿ ಮಾಡಿದರು.

ಜೆಡಿಎಸ್ ಪ್ರಭಾವಿ ಮುಖಂಡ ಬಸ್ ಸಂತೋಷ್ ಬಿಜೆಪಿ ಸೇರ್ಪಡೆ



ಕೆ.ಆರ್.ಪೇಟೆ, ಏ.22– ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಪುರಸಭಾ ಸದಸ್ಯ ಬಸ್ ಸಂತೋಷ್ ಕುಮಾರ್ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡರ ನೇತೃತ್ವದಲ್ಲಿ ನೂರಾರು ಬೆಂಬಲಿಗರೊಂದಿಗೆ ಬಿಜೆಪಿಗೆ ಸೇರ್ಪಡೆಗೊಂಡರು.

ಸಚಿವ ಡಾ.ನಾರಾಯಣಗೌಡರ ಜನಪರ ಕಾರ್ಯ ಮೆಚ್ಚಿ ಯಾವುದೇ ಷರತ್ತುಗಳಿಲ್ಲದೇ ಬಿಜೆಪಿ ಸೇರುತ್ತಿದ್ದೇನೆ ಎಂದು ತಿಳಿಸಿದ ಸಂತೋಷ್, ಕೆ.ಆರ್.ಪೇಟೆ ಇತಿಹಾಸದಲ್ಲೇ ಯಾವುದೇ ನಾಯಕರು ಕ್ಷೇತ್ರದ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಅನುದಾನ ತಂದಿಲ್ಲ. ಆದರೆ ಸಚಿವ ನಾರಾಯಣಗೌಡರು ಬಿಜೆಪಿಯಿಂದ ಗೆದ್ದು ಸಚಿವರಾಗಿ 1800 ಕೋಟಿ ರೂ. ಅನುದಾನ ತಂದು 500 ಕೋಟಿ ರೂ. ವೆಚ್ಚದಲ್ಲಿ ಸಂತೇಬಾಚಹಳ್ಳಿ, ಕಟ್ಟಹಳ್ಳಿ ಹಾಗೂ ರಂಗೇನಹಳ್ಳಿ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಕೆರೆ ಕಟ್ಟೆಗಳನ್ನು ತುಂಬಿಸಲು ಶಾಶ್ವತವಾದ ಕೆಲಸ ಮಾಡಿ ಬರಡು ಭೂಮಿಗೆ ಗಂಗೆ ತಂದ ಅಭಿನವ ಭಗೀರಥನಂತೆ ಹೊರಹೊಮ್ಮಿದ್ದಾರೆ. ವಿರೋಧ ಪಕ್ಷಗಳ ಟೀಕೆ ಟಿಪ್ಪಣಿಗಳಿಗೆ ಸಮರ್ಥವಾಗಿ ಉತ್ತರ ನೀಡುವಂತೆ ಅಭಿವೃದ್ಧಿ ಕೆಲಸ ಕಾರ್ಯಗಳು ಎದ್ದು ಕಾಣುತ್ತಿದ್ದರೂ, ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ಸಚಿವರ ವಿರುದ್ಧ ಇಲ್ಲಸಲ್ಲದ ಟೀಕೆ ಮಾಡುತ್ತಾ ಅಪಪ್ರಚಾರ ನಡೆಸುತ್ತಿದ್ದಾರೆ ಎಂದರು.

ಈ ವೇಳೆ ಬಿಜೆಪಿಗೆ ಸೇರ್ಪಡೆಯಾದ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಶೋಕ್ ಕುಮಾರ್, ತಾಪಂ ಮಾಜಿ ಸದಸ್ಯ ರಾಜಾಹುಲಿ ದಿನೇಶ್, ಎಪಿಎಂಸಿ ಮಾಜಿ ಅಧ್ಯಕ್ಷೆ ಮಂಜಮ್ಮ, ಯುವ ಮುಖಂಡ ಗದ್ದೆಹೊಸೂರು ದರ್ಶನ್, ಬಂಡಿಹೊಳೆ ಗ್ರಾಪಂ ಅಧ್ಯಕ್ಷ ದರ್ಶನ್ ಅವರನ್ನು ಸಚಿವ ಡಾ.ಅಶ್ವತ್ಥನಾರಾಯಣ್ ಬಿಜೆಪಿ ಪಕ್ಷಕ್ಕೆ ಸ್ವಾಗತಿಸಿದರು.

ಸಚಿವ ಅಶ್ವತ್ಥ್ ನಾರಾಯಣ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಸರ್ಕಾರ 130ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಮತ್ತೊಮ್ಮೆ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಹಗಲುಗನಸು ಕಾಣುತ್ತಿದೆ. ಅದು ನಡೆಯುವುದಿಲ್ಲ. ಹಾಗೆಯೇ ಸಚಿವ ನಾರಾಯಣಗೌಡರು ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ಇತಿಹಾಸ ನಿರ್ಮಿಸುತ್ತಾರೆ. ಕಾಂಗ್ರೆಸ್ ಗ್ಯಾರಂಟಿ ಕಾರ್ಡ್‌ಗೆ ಬೆಲೆಯಿಲ್ಲ. ಸರ್ವ ಜನಾಂಗದ ಶಾಂತಿಯ ತೋಟವನ್ನು ನಿರ್ಮಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ಮತ್ತೆ ಅಧಿಕಾರದ ಗದ್ದುಗೆ ಹಿಡಿಯುವ ಸಂದರ್ಭದಲ್ಲಿ ನಾರಾಯಣಗೌಡರು ಶಾಸಕರಾಗಿ ಮತ್ತೊಮ್ಮೆ ಸಚಿವರಾಗಲಿದ್ದಾರೆ. ಆದ್ದರಿಂದ ನಿಮ್ಮ ಬೆಂಬಲವು ನಾರಾಯಣಗೌಡರ ಮೇಲಿರಲಿ ಎಂದು ಮನವಿ ಮಾಡಿದರು.

ಈ ವೇಳೆ ಸಚಿವ ಡಾ.ನಾರಾಯಣಗೌಡ, ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಪ್ರಭಾಕರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಶ್ರೀಧರ್, ಡಿ.ಪಿ.ಪರಮೇಶ್, ಲೋಕೇಶ್, ಕುಮಾರ್, ಭರತ್, ಸಚಿವರ ಆಪ್ತ ಸಹಾಯಕ ದಯಾನಂದ್, ಯುವ ಮುಖಂಡ ಬಿಗ್‌ಬಾಸ್ ಮೋಹನ್, ಚಂದ್ರಕಲಾ ರಮೇಶ್, ಪುರಸಭಾ ಸದಸ್ಯರಾದ ಹೆಚ್.ಆರ್.ಲೋಕೇಶ್, ಶೋಭಾ ದಿನೇಶ್, ಶುಭಾಗಿರೀಶ್, ಜಯಮ್ಮ ಸೇರಿದಂತೆ ನೂರಾರು ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಮಂಡ್ಯ ಜೆಡಿಎಸ್ ಟಿಕೆಟ್ ಮಾರಾಟವಾಗಿಲ್ಲ

ಮಂಡ್ಯ, ಏ.22– ಮಂಡ್ಯ ಕ್ಷೇತ್ರದ ಜೆಡಿಎಸ್ ಟಿಕೆಟ್ ಮಾರಾಟವಾಗಿಲ್ಲ. ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಲಾಗಿದೆ. ಎಲ್ಲರೂ ಒಟ್ಟಾಗಿ ಪಕ್ಷದ ಅಭ್ಯರ್ಥಿ ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್ ವಿಶ್ವಾಸ ವ್ಯಕ್ತಪಡಿಸಿದರು.

ರಂಜಾನ್ ಅಂಗವಾಗಿ ನಗರದ ಶಂಕರಮಠದ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪಕ್ಷದ ವಿರುದ್ಧ ಕೆಲವರು ಈ ರೀತಿ ಅಪಪ್ರಚಾರ ನಡೆಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ಮಂಡ್ಯ ಟಿಕೆಟ್ ಮಾರಾಟವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಜೆಡಿಎಸ್‌ನಲ್ಲಿ ಯಾವುದೇ ಬಂಡಾಯವಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ವರಿಷ್ಠರು ಮನವೊಲಿಸಿ ಬಂಡಾಯವೆದ್ದಿರುವ ಅಭ್ಯರ್ಥಿಗಳ ನಾಮಪತ್ರ ವಾಪಸ್ ತೆಗೆಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮನೆ ಅಂದ ಮೇಲೆ ಅಣ್ಣ–ತಮ್ಮಂದಿರಲ್ಲಿ ಸಣ್ಣಪುಟ್ಟ ಮನಸ್ತಾಪಗಳು ಬರುವುದು ಸಾಮಾನ್ಯ. ಅದೇ ರೀತಿ ಟಿಕೆಟ್ ವಂಚಿತ ಅಭ್ಯರ್ಥಿಗಳು ಬೇಸರಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಜೆಡಿಎಸ್ ವರಿಷ್ಠರು ಎಲ್ಲವನ್ನೂ ಶಮನ ಮಾಡಲಿದ್ದಾರೆ ಕಾದು ನೋಡಿ ಎಂದರು.

ಶಾಸಕ ಎಂ.ಶ್ರೀನಿವಾಸ್ ನನಗೆ ತುಂಬಾ ಆತ್ಮೀಯರು. ನಾನೂ ಸಹ ಅವರನ್ನು ಭೇಟಿ ಮಾಡಿ ಮನವೊಲಿಸುವ ಪ್ರಯತ್ನ ಮಾಡುತ್ತೇನೆ. ಇನ್ನು ಸಮಯಾವಕಾಶ ಇರುವುದರಿಂದ ವರಿಷ್ಠರು ಎಲ್ಲವನ್ನೂ ಸರಿಪಡಿಸಲಿದ್ದಾರೆ. ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತೇವೆ. ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಗೆಲುವು ಖಚಿತ. ಇದರಲ್ಲಿ ಯಾರಿಗೂ ಅನುಮಾನ ಬೇಡ ಎಂದರು.

ಇಂದು ಮೈಸೂರಿಗೆ ಅಮಿತ್ ಶಾ



ಮೈಸೂರು, ಏ.22–ಕೇಂದ್ರ ಗೃಹ ಸಚಿವ ಅಮಿತ್ ಶಾ, ಮೈಸೂರು–ಚಾಮರಾಜನಗರ ಪ್ರವಾಸ ಕೈಗೊಂಡಿದ್ದಾರೆ. ಹೈದರಾಬಾದ್‌ನಿಂದ ವಿಶೇಷ ವಿಮಾನದ ಮೂಲಕ ಭಾನುವಾರ ರಾತ್ರಿ 9.30ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿಳಿಯಲಿರುವ ಅವರು, ಅಲ್ಲಿಂದ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ಗೆ ತೆರಳಿ ವಾಸ್ತವ್ಯ ಹೂಡಲಿದ್ದಾರೆ. ಸೋಮವಾರ ಬೆಳಗ್ಗೆ 10ಕ್ಕೆ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, 10.45ಕ್ಕೆ ಹೆಲಿಕಾಪ್ಟರ್ ಮೂಲಕ ಗುಂಡ್ಲುಪೇಟೆಗೆ ಪ್ರಯಾಣ ಬೆಳೆಸಲಿದ್ದಾರೆ. ಅಲ್ಲಿ 11.30ಕ್ಕೆ ಸುಮಾರು 3 ಕಿ.ಮೀ. ರೋಡ್ ಶೋನಲ್ಲಿ ಪಾಲ್ಗೊಂಡು, ಅಲ್ಲಿಂದ ಮಧ್ಯಾಹ್ನ 12.40ಕ್ಕೆ ಹೆಲಿಕಾಪ್ಟರ್‌ನಲ್ಲಿ ಸಕಲೇಶಪುರಕ್ಕೆ ಪ್ರಯಾಣಿಸಲಿದ್ದಾರೆ ಎಂದು ತಿಳಿದು ಬಂದಿದ್ದು, ಆದರೆ ಅಧಿಕೃತ ಪ್ರವಾಸ ಪಟ್ಟಿ ಲಭ್ಯವಾಗಿಲ್ಲ.

ಒಂದನೇ ಪುಟದಿಂದ

ನನಗೆ ಮತ್ತೆ ಅಧಿಕಾರ ಸಿಗುತ್ತೆ...!

ಹಾಡ್ಯ, ತಗಡೂರು, ದಾಸನೂರು ಗ್ರಾಮಗಳಲ್ಲಿ ಶನಿವಾರ ತೆರೆದ ವಾಹನದಲ್ಲಿ ತೆರಳಿ, ಮತಯಾಚಿಸಿ ಮಾತನಾಡಿದ ಅವರು, ಜೆಡಿಎಸ್, ಬಿಜೆಪಿ ಪಕ್ಷಗಳು ಕ್ಷೇತ್ರಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಸೋಮಣ್ಣ ಉಸ್ತುವಾರಿ ಸಚಿವನಾಗಿದ್ದಾಗ ನಮ್ಮ ತಾಲೂಕಿಗೆ ಭೇಟಿ ನೀಡಿಲ್ಲ. ಅಲ್ಲದೇ ಅವರಿಗೂ ನಮ್ಮ ಕ್ಷೇತ್ರಕ್ಕೂ ಯಾವುದೇ ಸಂಬಂಧ ಇಲ್ಲ. ಮುಂಬರುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ನಾವು ಬಡವರ ಪರ ಇನ್ನೂ ಹೆಚ್ಚಿನ ಕೆಲಸ ಮಾಡುತ್ತೇವೆ. ಗೃಹಿಣಿಯರಿಗೆ ಮಾಸಿಕ 2 ಸಾವಿರ ರೂ. ಸಹಾಯ ಧನ, ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್, 10 ಕೆಜಿ ಉಚಿತ ಅಕ್ಕಿ, ಪದವೀಧರ ನಿರುದ್ಯೋಗಿ ಯುವಕರಿಗೆ ಸಹಾಯ ಧನ ಸೇರಿದಂತೆ 4 ಗ್ಯಾರಂಟಿಗಳನ್ನು ಪಕ್ಷ ನೀಡಿದೆ. ನಾವು ನುಡಿದಂತೆ ನಡೆಯುತ್ತೇವೆ ಎಂದರು. ನಾನು ಇಂದು ಕ್ಷೇತ್ರದಲ್ಲಿ ಪ್ರವಾಸ ಮಾಡುವ ಕಾರ್ಯಕ್ರಮ ರೂಪಿಸಿರಲಿಲ್ಲ. ಶಾಸಕ ಡಾ.ಯತೀಂದ್ರ ಬಂದು ಹೋಗುವಂತೆ ತಿಳಿಸಿದ್ದರಿಂದ ಕ್ಷೇತ್ರಕ್ಕೆ ಆಗಮಿಸಿದ್ದು, ನಿಮ್ಮೆಲ್ಲರ ಉತ್ಸಾಹ ನೋಡಿ ನನಗೆ ಇನ್ನಷ್ಟು ಬಲ ಬಂದಿದೆ. ವರುಣ ಕ್ಷೇತ್ರದ ಜನತೆ ಆಶೀರ್ವಾದದಿಂದ ನಾನು ಮುಖ್ಯಮಂತ್ರಿಯಾಗಿದ್ದೆ. ಕಳೆದ ಬಾರಿ ನನ್ನ ಪುತ್ರ ಡಾ.ಯತೀಂದ್ರನನ್ನು 59 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದ್ದೀರಿ. ಈ ಚುನಾವಣೆ ಬಹಳ ಮಹತ್ತರವಾದ ಚುನಾವಣೆ. ನಿಮ್ಮ ಮೇಲೆ ನನಗೆ ನಂಬಿಕೆ ಇದೆ. ನನ್ನ ರಾಜಕೀಯ ಜೀವನದ ಕೊನೆ ಚುನಾವಣೆಯೂ ಇದಾಗಿರುವುದರಿಂದ ನನ್ನನ್ನು ಲಕ್ಷಕ್ಕೂ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿ, ವಿಧಾನಸಭೆಗೆ ಕಳುಹಿಸಬೇಕು ಎಂದು ಮನವಿ ಮಾಡಿದರು. ಬಿಜೆಪಿ ಸರ್ಕಾರದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಳಿವಿನ ಅಂಚಿನಲ್ಲಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜ್ಯದ ಆರ್ಥಿಕತೆ ದಿವಾಳಿಯಾಗಿದೆ. ರಾಜ್ಯ ಉಳಿಯಬೇಕಾದರೆ ಬಿಜೆಪಿ ಸರ್ಕಾರ ಕಿತ್ತೊಗೆಯಬೇಕು ಎಂದರು. ಈ ವೇಳೆ ಶಾಸಕರಾದ ಡಾ.ಯತೀಂದ್ರ, ಡಾ.ತಿಮ್ಮಯ್ಯ, ನಟ ಸಾಧುಕೋಕಿಲ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ತಾಪಂ ಮಾಜಿ ಸದಸ್ಯೆ ಮಹದೇವಮ್ಮ, ಮುಖಂಡರಾದ ಮಹೇಶ್, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಪ್ರಚಾರ ತಂತ್ರ

ಕೋಲಾರ ಅವಳಿ ಜಿಲ್ಲೆಯ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಲಿದ್ದಾರೆ. ಇದಕ್ಕಾಗಿ ಸುಮಾರು 30 ಎಕರೆಯಲ್ಲಿ ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಗಿದೆ. ಕೋಲಾರದ ನಂತರ ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರವಾಗಿ ಅಬ್ಬರದ ಪ್ರಚಾರ ನಡೆಸಲಿದ್ದಾರೆ. ಮಾಗಡಿ, ರಾಮನಗರ ಮತ್ತು ಕನಕಪುರದ ಜೊತೆಗೆ ಮಂಡ್ಯ ಜಿಲ್ಲೆಯನ್ನು ಗುರಿಯಾಗಿಟ್ಟುಕೊಂಡು ಮೋದಿ ರಣಕಹಳೆ ಮೊಳಗಿಸಲಿದ್ದಾರೆ. ನಂತರ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ಪ್ರಚಾರ ನಡೆಸಲಿರುವ ಮೋದಿ ಅವರು ಮೇ 6ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತವರು ಜಿಲ್ಲೆ ಕಲಬುರಗಿಯಲ್ಲಿ ರೋಡ್ ಶೋ ನಡೆಸುವರು. ಬಳಿಕ ಪ್ರಿಯಾಂಕ ಖರ್ಗೆ ಪ್ರತಿನಿಧಿಸುವ ಚಿತ್ತಾಪುರದಲ್ಲಿ ಬಹಿರಂಗ ಸಭೆ ನಡೆಸಿ ಬಿಜೆಪಿ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಲಿದ್ದಾರೆ. ಕಲ್ಯಾಣ ಕರ್ನಾಟಕದ ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಅಂದಾಜು 6ರಿಂದ 8 ಸಮಾವೇಶಗಳನ್ನು ನಡೆಸಲು ಉದ್ದೇಶಿಸಲಾಗಿದೆ. ರಾಜಧಾನಿ ಬೆಂಗಳೂರಿನ ನಂತರ ಅತೀಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಬೆಳಗಾವಿಯಲ್ಲಿ ರೋಡ್ ಶೋ ಮತ್ತು ಸಾರ್ವಜನಿಕ ಸಭೆ ನಡೆಸುವ ಮೋದಿಯವರು ಹುಬ್ಬಳ್ಳಿಯಲ್ಲಿ ಬೃಹತ್ ರೋಡ್ ಶೋ ಮತ್ತು ಸಾರ್ವಜನಿಕ ರ್‍ಯಾಲಿಯನ್ನು ನಡೆಸಲಿದ್ದಾರೆ. ಅಂದಾಜು 20ಕ್ಕೂ ಹೆಚ್ಚು ಸಾರ್ವಜನಿಕ ಸಭೆ ಇತರ ಕಡೆ ರೋಡ್ ಶೋ ನಡೆಸಿ ಮೇ 8ರವರೆಗೂ ಮೋದಿಯವರು ರಾಜ್ಯದಲ್ಲಿ ಪ್ರಚಾರವನ್ನು ನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

ವರುಣದಲ್ಲಿ ಕಾವೇರಿದ ಚುನಾವಣಾ ಪ್ರಚಾರ

ಸಿದ್ದರಾಮಯ್ಯ–ಸೋಮಣ್ಣ ಪೈಪೋಟಿಗಿಳಿದು ಮತದಾರರಿಗೆ ಮೋಡಿ





ಮೈಸೂರು, ಏ.22(ಎಸ್‌ಬಿಡಿ)– ವರುಣ ವಿಧಾನಸಭಾ ಕ್ಷೇತ್ರದಲ್ಲಿ ದಿನೇ ದಿನೇ ಚುನಾವಣಾ ಕಾವು ಹೆಚ್ಚುತ್ತಿದ್ದು, ಕಾಂಗ್ರೆಸ್ ಹಾಗೂ ಬಿಜೆಪಿ ಅಬ್ಬರದ ಪ್ರಚಾರ ನಡೆಸುತ್ತಿವೆ.

ಟಿಕೆಟ್ ಪ್ರಕಟವಾದ ಬೆನ್ನಲ್ಲೇ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅಖಾಡಕ್ಕಿಳಿದು ಮತಬೇಟೆ ಆರಂಭಿಸಿದ್ದಾರೆ. ಅವರ ಪರವಾಗಿ ಸಂಸದ ಪ್ರತಾಪ್ ಸಿಂಹ ಬಿರುಸಿನ ಕ್ಷೇತ್ರ ಪ್ರವಾಸ ನಡೆಸಿದ್ದಾರೆ. ಇವರಿಗೆ ಹಲವಾರು ಮುಖಂಡರು ಸಾಥ್ ನೀಡಿದ್ದಾರೆ. ಪ್ರಚಾರದ ನಡುವೆ ಬೇರೆ ಪಕ್ಷದಲ್ಲಿ ಗುರುತಿಸಿಕೊಂಡಿದ್ದವರನ್ನು ಬಿಜೆಪಿಗೆ ಸೆಳೆಯುವ ಪ್ರಯತ್ನವೂ ಮುಂದುವರೆದಿದೆ. ನಾಳೆ(ಏ.23)ಯಿಂದ ಮೂರು ದಿನ ಅಭ್ಯರ್ಥಿ ವಿ.ಸೋಮಣ್ಣ, ಹಲವು ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಲಿದ್ದಾರೆ.

ಮತ್ತೊಂದೆಡೆ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯನವರೂ ಭಾರೀ ಪ್ರಚಾರ ನಡೆಸಿದ್ದಾರೆ. ಕ್ಷೇತ್ರದಲ್ಲಿಂದು ಭರ್ಜರಿ ರೋಡ್ ಶೋ ಮೂಲಕ ಮತ ಯಾಚಿಸಿದ್ದಾರೆ. ದಿನವಿಡೀ ಹಲವೆಡೆ ಮತದಾರರ ಭೇಟಿ ಮಾಡಿ, ಬೆಂಬಲ ಕೋರಿದ್ದಾರೆ. ಇನ್ನು ಇವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ, ಅನೇಕ ಮುಖಂಡರೊಂದಿಗೆ ಕ್ಷೇತ್ರವನ್ನೆಲ್ಲಾ ಸುತ್ತು ಹಾಕುತ್ತಿದ್ದಾರೆ. ತಂದೆಗೆ ಕೊನೆ ಚುನಾವಣೆ, ಮತ ನೀಡಿ ಆಶೀರ್ವದಿಸಬೇಕೆಂದು ಮನವಿ ಮಾಡುತ್ತಿದ್ದಾರೆ.

ಪ್ರಚೋದಿತರಾಗಬೇಡಿ: ಚುನಾವಣೆಯಲ್ಲಿ ಎದುರಾಳಿಗಳು ಪರಸ್ಪರ ವಾಕ್ಸಮರ ನಡೆಸುವುದು ಸಹಜ. ಅದರಲ್ಲೂ ಸಿದ್ದರಾಮಯ್ಯ ಹಾಗೂ ವಿ.ಸೋಮಣ್ಣ ಘಟಾನುಘಟಿ ನಾಯಕರಾಗಿರುವುದರಿಂದ ಜಿದ್ದಾಜಿದ್ದಿ ಹೆಚ್ಚಾಗಿಯೇ ಇರುತ್ತದೆ. ಎರಡೂ ಪಕ್ಷದ ನಾಯಕರು ಆವೇಶಭರಿತ ಭಾಷಣ, ಹೇಳಿಕೆಗಳನ್ನು ನೀಡಬಹುದು. ಮುಂದುವರೆದು ಏಕವಚನದಲ್ಲೂ ನಿಂದಿಸಿಕೊಳ್ಳಬಹುದು. ಇವೆಲ್ಲವನ್ನೂ ಚುನಾವಣೆಗೆ ಸೀಮಿತವಾಗಿಸುವುದು ಉತ್ತಮ. ತೀರಾ ವೈಯಕ್ತಿಕವಾಗಿ ತೆಗೆದುಕೊಂಡರೆ ಮನಸ್ಸುಗಳು ಒಡೆಯುತ್ತವೆ. ಸಮುದಾಯಗಳ ನಡುವೆ ವೈಷಮ್ಯ ಮೂಡುತ್ತದೆ. ಒಟ್ಟಿಗೆ ಪರಸ್ಪರ ಮುಖ ನೋಡಲಾಗದ ದುಸ್ಥಿತಿ ನಿರ್ಮಾಣವಾಗುತ್ತದೆ. ದಶಕಗಳಾದರೂ ಕೂಡಿಸಲಾಗದಷ್ಟು ಬಿರುಕು ಸೃಷ್ಟಿಯಾಗುತ್ತದೆ. ಹಾಗಾಗಿ ಯಾರೂ ಕೂಡ ಪ್ರಚೋದನೆಗೆ ಒಳಗಾಗಬೇಡಿ. ಚುನಾವಣಾ ಗುಂಗಿನಲ್ಲಿ ವಿವೇಚನೆ ಮರೆಯಬೇಡಿ ಎಂದು ವರುಣ ಕ್ಷೇತ್ರದ ಹಿರಿಯ ನಾಗರಿಕರು ಮನವಿ ಮಾಡಿದ್ದಾರೆ.

ದಲಿತ ವೆಲ್‌ಫೇರ್ ಟ್ರಸ್ಟ್‌ನಿಂದ ಕಾಂಗ್ರೆಸ್‌ಗೆ ಬೆಂಬಲ



ಮೈಸೂರು,ಏ.22(ಪಿಎಂ)– ದಲಿತರನ್ನು ಉದ್ಧಾರ ಮಾಡಬೇಕೆಂಬ ಕೆಚ್ಚು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿದೆ. ಹಾಗಾಗಿ ಈ ಬಾರಿಯ ಚುನಾವಣೆಯಲ್ಲಿ ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಬೆಂಬಲಿಸಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಶಾಂತರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ದಲಿತ ಸಮುದಾಯವನ್ನು ಎಲ್ಲಾ ಅವಕಾಶಗಳಿಂದ ವಂಚಿತರನ್ನಾಗಿ ಮಾಡುತ್ತಿವೆ. ಅದಾಗ್ಯೂ ನಮ್ಮ ದಲಿತರಲ್ಲಿ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಬಿಜೆಪಿಯಲ್ಲಿದ್ದಾರೆ. ಅಂತಹವರಲ್ಲಿ ಛಲವಾದಿ ನಾರಾಯಣಸ್ವಾಮಿ ಒಬ್ಬರು. ದಲಿತ ಮೇಲಿನ ದೌರ್ಜನ್ಯಗಳ ಬಗ್ಗೆ ಇವರು ಮಾತನಾಡುವುದಿಲ್ಲ. ಇನ್ನು ಸಿದ್ದರಾಮಯ್ಯರನ್ನು ಟೀಕಿಸುವ ಯಾವುದೇ ನೈತಿಕತೆ ಸಂಸದ ಪ್ರತಾಪ್ ಸಿಂಹ ಅವರಿಗಿಲ್ಲ ಎಂದು ಕಿಡಿಕಾರಿದರು.

ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರಲ್ಲಿ ಸಿದ್ದರಾಮಯ್ಯನವರು ಮತ್ತೆ ಮುಖ್ಯಮಂತ್ರಿ ಆಗಬೇಕೆಂಬ ಆಕಾಂಕ್ಷೆ ಇದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿಯೂ ಕಾಂಗ್ರೆಸ್ ಬೆಂಬಲಿಸಲಿದ್ದೇವೆ. ಸಂವಿಧಾನದಲ್ಲಿ ಧಾರ್ಮಿಕ ಆಚರಣೆಗೆ ಅವಕಾಶವಿದ್ದರೂ ಸಂಸದ ಪ್ರತಾಪ್ ಸಿಂಹ, ಮಹಿಷಾ ಪ್ರತಿಮೆಗೆ ಪುಷ್ಪಾರ್ಚನೆಗೆ ಅವಕಾಶ ನೀಡದಂತೆ ಜಿಲ್ಲಾಡಳಿತದ ಮೇಲೆ ಒತ್ತಡ ಹಾಕಿ ತಡೆಯೊಡ್ಡಿದರು. ಇದೀಗ ಅದೇ ವರ್ಗದಲ್ಲಿ ಮತಯಾಚನೆಗೆ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ ಎಂದು ಬಿಎಸ್‌ಪಿ ಅಧಿಕಾರಕ್ಕೆ ಬರಬೇಕೆಂಬ ಆಕಾಂಕ್ಷೆ ನಮ್ಮಲ್ಲಿಯೂ ಇತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಬಿಎಸ್‌ಪಿಯಲ್ಲಿದ್ದ ಎನ್.ಮಹೇಶ್ ಬಿಜೆಪಿ ಸೇರಿದರು. ಇವರು ಭ್ರಷ್ಟರು. ಅಂಬೇಡ್ಕರ್ ಬಗ್ಗೆ ಮಾತನಾಡುತ್ತಿದ್ದ ಈ ವ್ಯಕ್ತಿ ಇಂದು ಸಾವರ್ಕರ್ ಬಗ್ಗೆ ಮಾತನಾಡುವಂತಾಗಿದೆ. ಹಣಕ್ಕಾಗಿ ತಮ್ಮನ್ನು ಮಾರಾಟ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಮುಖಂಡರಾದ ಚೆನ್ನಅನ್ನದಾನಿ, ರೇವಣ್ಣ, ಜಯಕುಮಾರ್, ರಾಜಪ್ಪ, ಲೇಖಕ ಸಿದ್ದಸ್ವಾಮಿ ಗೋಷ್ಠಿಯಲ್ಲಿದ್ದರು.

ವರುಣದಲ್ಲಿ ಬಿಎಸ್‌ಪಿ ಮತಬ್ಯಾಂಕ್ ಉಳಿಸಿಕೊಳ್ಳಲು ಸ್ಪರ್ಧೆ

ಯಾರನ್ನೂ ಗೆಲ್ಲಿಸಲು, ಸೋಲಿಸಲು ಅಲ್ಲ: ಬಿಎಸ್‌ಪಿ ರಾಜ್ಯಾಧ್ಯಕ್ಷ ಡಾ.ಎಂ.ಕೃಷ್ಣಮೂರ್ತಿ ಸ್ಪಷ್ಟನೆ, ಕಾಂಗ್ರೆಸ್‌ನ ಕೆಲವರಿಂದ ಅಪಪ್ರಚಾರ ಆರೋಪ



ಮೈಸೂರು,ಏ.22(ಪಿಎಂ)– ವರುಣಾ ಕ್ಷೇತ್ರದಲ್ಲಿ ಬಿಎಸ್‌ಪಿ ಮತ ಬ್ಯಾಂಕ್ ಇದ್ದು, ಇದನ್ನು ಉಳಿಸಿಕೊಳ್ಳುವ ಸಲುವಾಗಿ ತಾವು ವರುಣದಲ್ಲಿ ಸ್ಪರ್ಧೆ ಮಾಡಿರುವುದಾಗಿ ಸ್ಪಷ್ಟನೆ ನೀಡಿದ ಬಿಎಸ್‌ಪಿ ರಾಜ್ಯಾಧ್ಯಕ್ಷ ಡಾ.ಎಂ.ಕೃಷ್ಣಮೂರ್ತಿ, ಬಿಜೆಪಿ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಸಿದ್ದರಾಮಯ್ಯರನ್ನು ಸೋಲಿಸಲು ಬಿಎಸ್‌ಪಿ ಸ್ಪರ್ಧೆ ಮಾಡಿದೆ ಎಂದು ಕಾಂಗ್ರೆಸ್‌ನ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಇಲ್ಲಿ ಕೊನೆ ಕ್ಷಣದಲ್ಲಿ ದಲಿತ ಅಭ್ಯರ್ಥಿ ಕಣಕ್ಕಿಳಿಸಿದೆ. ಹಾಗಾಗಿ ಸಿದ್ದರಾಮಯ್ಯ ವಿರುದ್ಧವಿರುವ ದಲಿತ ಸಮುದಾಯದ ಮತಗಳು ಬಿಎಸ್‌ಪಿಗೆ ಬದಲಾಗಿ ಜೆಡಿಎಸ್ ಪಾಲಾಗಬಾರದು ಎಂಬ ನಿಟ್ಟಿನಲ್ಲಿ ಬಿಎಸ್‌ಪಿಯಿಂದ ತಾವು ಸ್ಪರ್ಧಿಸಿರುವುದಾಗಿ ತಿಳಿಸಿದರು.

ರಾಜ್ಯದ 135 ಕ್ಷೇತ್ರಗಳಲ್ಲಿ ಬಿಎಸ್‌ಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಅದರಲ್ಲಿ ವಿಶೇಷವಾಗಿ ಮೈಸೂರು ಜಿಲ್ಲೆಯಲ್ಲಿ ವರುಣ ಕ್ಷೇತ್ರದಲ್ಲಿ ಪಕ್ಷದ ರಾಜ್ಯ ಸಮಿತಿ ತೀರ್ಮಾನದಂತೆ ನನ್ನನ್ನು ಸ್ಪರ್ಧೆಗಿಳಿಸಲಾಗಿದೆ. ಮಳವಳ್ಳಿ ಕ್ಷೇತ್ರದಲ್ಲೂ ಸ್ಪರ್ಧೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ವರುಣ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ ನಂತರ ಕಾಂಗ್ರೆಸ್‌ನ ಕೆಲವರು ಬಿಜೆಪಿ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಇದು ಅತ್ಯಂತ ಖಂಡನೀಯ ಎಂದು ಕಿಡಿಕಾರಿದರು.


ನಾವು ಯಾರನ್ನೋ ಸೋಲಿಸಲು ಅಥವಾ ಗೆಲ್ಲಿಸಲು ಸ್ಪರ್ಧಿಸಿಲ್ಲ. ವರುಣ ಕ್ಷೇತ್ರದಲ್ಲಿ ಬಿಎಸ್‌ಪಿ ಮತಬ್ಯಾಂಕ್ ಇದೆ. ಅದನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಬಿಎಸ್‌ಪಿ ಅತಿದೊಡ್ಡ ರಾಷ್ಟ್ರೀಯ ಪಕ್ಷ. ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯ ಬಿಎಸ್‌ಪಿಗೆ ಇಲ್ಲ. ವರುಣದಲ್ಲಿ ಕೆಲವು ಮುಖಂಡರೊಂದಿಗೆ ಮಾತನಾಡಿದ್ದು, ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್ ಅವರು ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಿದ್ದಲ್ಲದೆ, ಈ ಭಾಗದ ದಲಿತ ನಾಯಕ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಸಚಿವ ಸಂಪುಟದಿಂದ ಕಿತ್ತು ಹಾಕಿದರು. ಸಿದ್ದರಾಮಯ್ಯರ ವಿರುದ್ಧ ಅಸಮಾಧಾನ ಇದೆ ಎಂದರು. ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ ಶಂಕರ್, ನಗರಾಧ್ಯಕ್ಷ ಶ್ರೀನಿವಾಸ ಪ್ರಸಾದ್, ಉಪಾಧ್ಯಕ್ಷ ಶ್ರೀಕಂಠ, ಜಿಲ್ಲಾಧ್ಯಕ್ಷ ಬಿ.ಆರ್.ಪುಟ್ಟಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಸ್ವಾಮೀಜಿಯೊಬ್ಬರು ಮೈತ್ರಿ ಮಾಡಿಸಲು ಮುಂದಾಗಿದ್ದರು: ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಎಸ್‌ಪಿ ಮೈತ್ರಿ ಮಾಡಿಸಲು ಇದೇ ಮೈಸೂರು ಮೂಲದ ಪ್ರಗತಿಪರ ಸ್ವಾಮೀಜಿಯೊಬ್ಬರು ಮುಂದಾಗಿದ್ದರು. ಆದರೆ ಬಿಎಸ್‌ಪಿಗೆ ರಾಜ್ಯದಲ್ಲಿ ಶಕ್ತಿ ಇಲ್ಲ. ಹೊಂದಾಣಿಕೆಗೆ ಇದು ಯುಪಿ ಅಲ್ಲವೆಂದು ಸಿದ್ದರಾಮಯ್ಯ ಮತ್ತು ಡಾ.ಹೆಚ್.ಸಿ.ಮಹದೇವಪ್ಪ ಇದಕ್ಕೆ ನಿರಾಕರಿಸಿದರು ಎಂದು ಡಾ.ಎಂ.ಕೃಷ್ಣಮೂರ್ತಿ ತಿಳಿಸಿದರು. ಸಂವಿಧಾನ ವಿರೋಧಿ ಬಿಜೆಪಿಯನ್ನು ಕಿತ್ತೊಗೆಯಬೇಕೆಂದು ಕಳೆದ 6 ತಿಂಗಳ ಹಿಂದೆ ಮೈಸೂರು ಮೂಲದ ಪ್ರಗತಿಪರ ಸ್ವಾಮೀಜಿಯೊಬ್ಬರು ನಮ್ಮ ಪಕ್ಷದ ಮುಖಂಡರನ್ನು ಸಂಪರ್ಕಿಸಿದ್ದರು. ಈ ವೇಳೆ ಬಿಎಸ್‌ಪಿ–ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಂಡರೆ ಸೂಕ್ತ. ನೀವೇನಾದರೂ ಅನುಮತಿ ಕೊಟ್ಟರೆ ಕಾಂಗ್ರೆಸ್ ಮುಖಂಡರ ಜೊತೆ ಮಾತನಾಡಲು ತಯಾರಿರುವುದಾಗಿ ಹೇಳಿದ್ದರು. ಸ್ವಾಮೀಜಿಯವರ ಸಲಹೆಯನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೆವು ಎಂದು ಹೇಳಿದರು.

ಏ.24ಕ್ಕೆ ನಾಮಪತ್ರ ಹಿಂಪಡೆಯಲು ಕಡೇ ದಿನ. ಈಗಲೂ ಕಾಂಗ್ರೆಸ್‌ನವರು ನಾವು ಕೇಳುವ 20 ಕ್ಷೇತ್ರಗಳನ್ನು ಬಿಟ್ಟುಕೊಟ್ಟರೆ, ನಾವು 115 ಕ್ಷೇತ್ರಗಳಲ್ಲಿ ಬಿಎಸ್‌ಪಿ ಅಭ್ಯರ್ಥಿಗಳ ನಾಮಪತ್ರ ಹಿಂಪಡೆಸುತ್ತೇವೆ. ಮೇ 6ರಂದು ಬಿಎಸ್‌ಪಿ ರಾಷ್ಟ್ರೀಯ ಅಧ್ಯಕ್ಷೆ ಮಾಯಾವತಿಯವರು ಮೈಸೂರು ಇಲ್ಲವೇ ಚಾಮರಾಜನಗರಕ್ಕೆ ಚುನಾವಣೆ ಹಿನ್ನೆಲೆಯಲ್ಲಿ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 23-04-2023

ಬಸವೇಶ್ವರ ಭುವನದ ಭಾಗ್ಯ



"ಬಸವೇಶ್ವರರಿಗೆ ಮನುಷ್ಯರೆಲ್ಲರೂ ಒಂದೇ ಎಂಬ ಭಾವ ಅವರ ಜೀವ-ಜೀವನದಲ್ಲೆಲ್ಲಾ ತುಂಬಿ ಹೋಗಿತ್ತು. ಮೂಲತಃ ಬ್ರಾಹ್ಮಣ ಕುಟುಂಬದಿಂದ ಬಂದಿದ್ದರೂ ಬಾಲ್ಯಾವಸ್ಥೆಯಿಂದಲೂ ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು. ಆದ್ದರಿಂದಲೇ ಅವರು ಯಾರಿಗೂ ಹೆದರದೆ ಧೈರ್ಯವಾಗಿ ತಮ್ಮ ಉಪನಯನವನ್ನು ಧಿಕ್ಕರಿಸಿದ್ದರು. ಇಡೀ ಸಮಾಜವನ್ನು ಮಾನವೀಯಗೊಳಿಸಲು ಬಸವೇಶ್ವರರು ಬದುಕಿನ ಅಗ್ನಿಗೆ ತಮ್ಮನ್ನು ತಾವು ಒಡ್ಡಿಕೊಂಡು ಒಂದು ರೀತಿ ಕರ್ಪೂರದಂತೆ ಉರಿದು ಜಗಕೆ ಬೆಳಕಾಗಿದ್ದರು. ದೀನ-ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರ ದಲಿತ ಪರ ಹೋರಾಟ ಸಹ ಮಾನವೀಯಗೊಳಿಸುವ ಪ್ರಯತ್ನಕ್ಕೆ ಸಾಕ್ಷಿ. ದಲಿತರ ಅವಮಾನಿತ ಬದುಕಿನ ನೋವುಗಳನ್ನು ಅರಿಯಲು ಈ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅವರು ತಮ್ಮ ಮೂಲ ಜಾತಿಯನ್ನೇ ತೊರೆದು ದಲಿತರೊಳಗೊಂದಾದದ್ದು ಸಾಮಾನ್ಯ ವಿಷಯವಲ್ಲ. ಈ ದಿಸೆಯಲ್ಲಿ ಅವರದು ವಿಶ್ವದಲ್ಲೇ ಅಪ್ರತಿಮ ಚೇತನವೆನ್ನಬಹುದು.


ಬನ್ನೂರು ಕೆ.ರಾಜು
ಸಾಹಿತಿ-ಪತ್ರಕರ್ತ

ಬಸವಣ್ಣನೆಂದರೆ ಭುವನದ ಭಾಗ್ಯ. ಮಾನವ ಕುಲವನ್ನಷ್ಟೇ ಅಲ್ಲದೆ ಸಕಲ ಜೀವರಾಶಿಗಳನ್ನು ಉದ್ಧರಿಸಲು ಭೂಮಿಗೆ ಬಂದ ಭಗವಂತ. ಅಲ್ಪರನ್ನು ಕಲ್ಪರನ್ನಾಗಿಸಲು ವಚನ ಜ್ಯೋತಿ ಹಚ್ಚಿದ ಜಗದ ಜ್ಯೋತಿ. ಅಲ್ಪಮಾನವರನ್ನು ವಿಶ್ವಮಾನವ ಮಾರ್ಗದಲ್ಲಿ ಕರೆದೊಯ್ಯಲು ಬೆಳಗಿನ ಹೆಜ್ಜೆಗಳನ್ನಿಟ್ಟ ಮಹಾ ಮಾನವತಾವಾದಿ.ಎಲ್ಲರೂ ತನ್ನವರೆಂಬ ಭಾವ ಬೆಳಕಿನಲ್ಲಿ ಅರಿವಿನ ಅಮೃತ ಸುರಿದ ಮನುಷ್ಯತ್ವದ ಮಹಾತ್ಮ. ಅಕ್ಷರಶಃ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲನ್ನಿಟ್ಟ ಸಮ ಸಮಾಜದ ಪರಿಕಲ್ಪನೆಯ ಪ್ರವಾದಿ.ಇಡೀ ಮಾನವ ಕುಲವೇ ಒಪ್ಪಿಕೊಳ್ಳುವಂತಹ, ಅಪ್ಪಿ ಕೊಳ್ಳುವಂತಹ ಒಳಿತಿನ ಹೂರಣ. ಜಗದ ಕತ್ತಲು ಸರಿಸಿದ ಬೆಳಗಿನ ತೋರಣ. ಮಹಾಕವಿ ಕುವೆಂಪು ಹೇಳುವಂತೆ ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ ಭೂಮಿಗೆ ಬಂದವರು ಬಸವಣ್ಣ. ಹನ್ನೆರಡನೆಯ ಶತಮಾನದ ಮಧ್ಯಭಾಗ, ಅದಾಗಲೇ ಭಗವಾನ್ ಬುದ್ಧ ಆಗಿ ಹೋಗಿ ಹದಿನೆಂಟು ಶತಮಾನಗಳು ಕಳೆದುಹೋಗಿದ್ದವು. ಈ ನಡುವೆ ಹಲವಾರು ದಾರ್ಶನಿಕರು, ಸಂತರು, ಸಾಧಕರು, ಸಿದ್ಧರು, ಪವಾಡ ಪುರುಷರು, ಆಚಾರ್ಯರು, ಪ್ರವಾದಿಗಳು ಬಂದು ಹೋಗಿ ತಮ್ಮದೇ ಆದ ತತ್ವಾದರ್ಶಗಳಿಂದ ಜಗವನ್ನು ಬೆಳಗಿದ್ದರು. ಕತ್ತಲೆಯ ಕೂಪದಲ್ಲಿದ್ದ ಜಗದ ಜನಕೆ ತಮ್ಮ ತೋರು ಬೆರಳಿನಿಂದ ಬೆಳಕಿನ ಪಥ ಕಾಣುವಂತೆ ಮಾಡಿದ್ದರು. ಕರುಣೆಯ ಕಡಲಾಗಿ ಬಂದು ಬುದ್ಧ ಮನುಷ್ಯತ್ವದ ಮಹಾನದಿ ಹರಿಸಿದ್ದ. ಜ್ಞಾನದ ಶಿಖರವಾಗಿ ಶಂಕರಾಚಾರ್ಯರು ಬಂದು ಆತ್ಮ ಜ್ಞಾನದ ಮಹದಾನಂದವನ್ನು ತುಂಬಿ ತುಳುಕಿಸಿದ್ದರು. ಶಾಂತಿದೂತ ಯೇಸು ಕ್ರಿಸ್ತ ಬಂದು ಶಾಂತಿ ಮಂತ್ರವನ್ನು, ಪ್ರೇಮ ತತ್ವವನ್ನು ಸಾರಿ ಹೋಗಿದ್ದ. ಮಹಮ್ಮದ, ಮಹಾವೀರ.... ಹೀಗೆ ಅನೇಕ ಮಂದಿ ಮಹಾಪುರುಷರು ಬಂದು ತಮ್ಮ ಸಂದೇಶಗಳನ್ನು ಪ್ರಪಂಚಕ್ಕೆ ಸಾರಿ ಹೋಗಿದ್ದರು.

ಆದರೂ ಅರ್ಥಹೀನ ಸಂಪ್ರದಾಯದಿಂದ, ಮೌಢ್ಯತೆಯ ಕೂಪದಿಂದ, ಕಂದಾಚಾರದ ಕಟ್ಟಳೆಗಳಿಂದ ಜಡ್ಡುಗಟ್ಟಿದ್ದ ಜಗತ್ತು ಅಷ್ಟು ಸುಲಭವಾಗಿ ಜಾಗೃತಿಗೊಂಡಿರಲಿಲ್ಲ. ಇಂಥ ಸಂದರ್ಭದಲ್ಲಿ ಜಗತ್ತಿನ ಮಹಾಬೆಳಕಾಗಿ ಭಾರತ ದೇಶದ ಕರ್ನಾಟಕದ ಬಿಜಾಪುರ ಜಿಲ್ಲೆಯ ಬಾಗೇವಾಡಿಯ ಅಗ್ರಹಾರದಲ್ಲಿ "ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ..." ಎನ್ನುತ್ತಾ ಮಾನವತೆಯ ಮಹಾ ಪರ್ವವಾಗಿ ಜಗಜ್ಯೋತಿ ಬಸವೇಶ್ವರರು ಮಾದರಸ ಮತ್ತು ಮಾದಲಾಂಬೆ ದಂಪತಿಗಳ ಸುಪುತ್ರರಾಗಿ ಅವತರಿಸಿದರು. ಅವರ ಅವತಾರವೆಂಬುದು ಸಾಮಾನ್ಯವಲ್ಲ. ವಚನ ಚಳವಳಿಯ ಅಸ್ತ್ರದಿಂದ ಬಸವ ಬೆಳಕು ಚೆಲ್ಲಿ ಮಾನವತೆಯ ಜ್ಯೋತಿ ಹಚ್ಚುವ ಪರಿ ಇದೆಯಲ್ಲ ಅದು ಇಂದಿಗೂ ವಿಶ್ವವ್ಯಾಪಿ ಇತಿಹಾಸವಾಗಿದೆ. ಅದಕ್ಕೇ ಅವರು 'ಜಗಜ್ಯೋತಿ' ಎನಿಸಿದ್ದು!

ಭಾರತ ದೇಶದಲ್ಲಿ ಅಷ್ಟೇ ಏಕೆ ಇಡೀ ವಿಶ್ವದಲ್ಲಿ ಹನ್ನೆರಡನೆಯ ಶತಮಾನ, ಅದೊಂದು ಮಹಾಕ್ರಾಂತಿ ಯುಗ. ಬಸವ ಬೆಳಕಿನ ಭಾಗ್ಯಯುಗ. ಕಾಯಕವೇ ಕೈಲಾಸವೆಂದು ಕಾಯಕಗಳಿಂದ, ಜ್ಞಾನ ದಾಸೋಹಗಳಿಂದ, ವಚನಸಾಹಿತ್ಯ ರಚನೆಗಳಿಂದ ಅರಿವಿನ ರಥ ಚಲಿಸಿದ ಶರಣ-ಶರಣೆಯರ ಯುಗ. ವಿಶ್ವಕಲ್ಯಾಣಕ್ಕಾಗಿ ಸಕಲರಿಗೂ ಲೇಸನ್ನೇ ಬಯಸಿ ಭಾರತದ ಪ್ರಥಮ ಲೋಕಸಭೆ ಎಂದು ಕರೆಯಲ್ಪಟ್ಟ 'ಅನುಭವ ಮಂಟಪ' ರಚಿಸಿ ಎಲ್ಲಾ ವರ್ಗದ ಜನರು ಯಾವುದೇ ಹಿಂಜರಿಕೆಯಿಲ್ಲದೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ವಿಚಾರಗಳನ್ನು ಮುಕ್ತವಾಗಿ ಚರ್ಚಿಸಿ, ಮನುಷ್ಯರನ್ನು ಮಹಾತ್ಮರನ್ನಾಗಿ ಮಾಡುವುದಕ್ಕಾಗಿ ಮಾನವತ್ವದ ತಳಹದಿಯ ಮೇಲೆ ಸೌಹಾರ್ದತೆಯ ಹೂವು ಅರಳುವಂತೆ ಮಾಡಿದ ಅಪೂರ್ವ ಯುಗ. ಇದೆಲ್ಲದರ ಕೇಂದ್ರಬಿಂದು ಯುಗಪುರುಷ ಬಸವೇಶ್ವರ.

ಆ ಕಾಲದಲ್ಲೇ ಪ್ರಜಾಸತ್ತಾತ್ಮಕ ತತ್ವಗಳ ಪ್ರತೀಕವಾದ 'ಅನುಭವ ಮಂಟಪ'ವನ್ನು ಸ್ಥಾಪಿಸುವುದರ ಮೂಲಕ ಪ್ರಜಾಪ್ರಭುತ್ವಕ್ಕೆ ನಾಂದಿಹಾಡಿದ ಮೊದಲಿಗರು ಬಸವೇಶ್ವರರು. ನಿಜ ಅರ್ಥದಿ ಶ್ರೇಷ್ಠ ಸಮಾಜ ಸುಧಾರಕರಿವರು. ಅನುಭವ ಮಂಟಪವೆಂಬುದು ಬಸವೇಶ್ವರರ ಮಹಾ ಪ್ರಯೋಗ ಶಾಲೆ. ಸಮಾಜದ ಸುಭದ್ರತೆ, ಸಮಾಜದ ಹಿತಚಿಂತನೆ, ಸಮುದಾಯದ ಸಂರಕ್ಷಣೆ, ಧರ್ಮದ ನಂಬಿಕೆ, ಮೌಲ್ಯ ಸಿದ್ಧಾಂತಗಳ, ವಿಚಾರ ವಿನಿಮಯಗಳ, ಚಿಂತನ-ಮಂಥನ ಚರ್ಚೆಗಳ ಸಂಗಮವಿದು. ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳ ವೇದಿಕೆಯೂ ಆಗಿದ್ದ ಬಸವೇಶ್ವರರ 'ಅನುಭವ ಮಂಟಪ'ದಲ್ಲಿ ವಚನ ಕ್ರಾಂತಿಯೇ ನಡೆದು ಬಹಳಷ್ಟು ಮಂದಿ ಶರಣ-ಶರಣೆಯರು ವಚನಕಾರರಾಗಲು ಸ್ಫೂರ್ತಿಯ ತಾಣ ಇದಾಗಿತ್ತು. ಸಿದ್ಧರಾಮ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಹಡಪದ ಅಪ್ಪಣ್ಣ, ಅಲ್ಲಮಪ್ರಭು, ಹರಳಯ್ಯ, ಅಕ್ಕಮಹಾದೇವಿ, ಕಾಳವ್ವ, ನೀಲಾಂಬಿಕೆ, ನಾಗಲಾಂಬಿಕೆ, ಗೊಗ್ಗವ್ವ, ಕದಿರೆ ರಮ್ಮವ್ವ, ರಾಯಮ್ಮ, ಮುಕ್ತಾಯಕ್ಕ, ಕಲ್ಯಾಣಿಯಮ್ಮ, ಬೊಂತಾದೇವಿ, ಗಂಗಾಂಬಿಕೆ, ಲಕ್ಷಮ್ಮ... ಹೀಗೆ ಇನ್ನೂ ಮುಂತಾದ ಶರಣ-ಶರಣೆಯರ ದಂಡೇ ಅಲ್ಲಿ ಸಂಗಮಿಸಿತ್ತು. ಬಸವೇಶ್ವರರಂತೂ ವಚನ ಸಾಹಿತ್ಯದ ಹರಿಕಾರರಾಗಿ ತಮ್ಮ ಸದ್ಭಾವನಾ ಲೇಖನಿಯನ್ನು ಹರಿಯಬಿಟ್ಟು ವಚನಗಳ ಶಿಖರವನ್ನು ನಿರ್ಮಿಸಿದ್ದರು. ಬಸವೇಶ್ವರರ ವಚನಗಳೆಂದರೆ ಅದೊಂದು ಅದ್ಭುತ ಕಾವ್ಯ. ಆಡು ಭಾಷೆಯಲ್ಲೇ ವಚನ ಕಾವ್ಯಕಟ್ಟಿದ ಶಬ್ದಗಾರುಡಿಗರವರು.

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
"ಅನ್ನದೊಳಗೊಂದಗಳ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪುರಾತರಾಣೆ
ನಿಮ್ಮ ಶರಣ (ಸಮಾಜ)ರಿಗಲ್ಲದೆ
ಮತ್ತೊಂದಕ್ಕೆ ಈಯೆನು
ಕೂಡಲಸಂಗಮದೇವ ನಿಮ್ಮಾಣೆ!

ಬಿಜ್ಜಳ ಮಹಾರಾಜನಲ್ಲಿ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಪರಮಾತ್ಮನ ಆಣೆಯಾಗಿ ಬಸವೇಶ್ವರರು ಅಂದು ನುಡಿದ ಈ ವಚನ ಇಂದಿಗೂ ಮಾದರಿಯಾಗಿದೆ. ಪ್ರಜೆಗಳ ಸಂಪತ್ತು ಪ್ರಜೆಗಳ ಕಲ್ಯಾಣಕ್ಕಾಗಿಯೇ ವಿನಿಯೋಗವಾಗಬೇಕೆ ಹೊರತು ದುರುಪಯೋಗ ಆಗಬಾರದೆಂದು ಆಗಲೇ ಅವರು ಎಚ್ಚರಿಸಿದ್ದರು. ವ್ಯಕ್ತಿಗಿಂತ ಸಮಾಜ ದೊಡ್ಡದೆಂದೂ, ಸ್ವಾರ್ಥವನ್ನು ಬಿಟ್ಟು ಸೇವಕನಂತೆ ಸಮಾಜದ ಅಭಿವೃದ್ಧಿಗಾಗಿ ಕೆಲಸ ಮಾಡಬೇಕೆಂದು ಪ್ರಜಾಪ್ರತಿನಿಧಿಗಳಿಗೆ ಅಂದೇ ಅವರು ನೀತಿ ಹೇಳಿದ್ದರು. ಅವರ ಮತ್ತೊಂದು ವಚನದ ಸ್ವಾರಸ್ಯ ನೋಡಿ-

"ಧರಣಿಯ ಮೇಲೊಂದು
ಹಿರಿದಪ್ಪ ಅಂಗಡಿಯನಿಕ್ಕಿ
ಹರದಕುಳ್ಳಿರ್ದ ನಮ್ಮ ಮಹದೇವಸೆಟ್ಟಿ
ಒಮ್ಮತವಾದರೆ ಒಡನೆ ನುಡಿವನು
ಇಮ್ಮನವಾದಡೆ ನುಡಿಯನು;ಕಾಣೆಯ ಸೋಲ
ಅರ್ಧಕಾಣಿಯ ಗೆಲ್ಲ;ಜಾಣ ನೋಡವ್ವಾ
ನಮ್ಮ ಕೂಡಲಸಂಗಮದೇವ."

ವ್ಯಾಪಾರದ ಪರಿಭಾಷೆಯಲ್ಲಿರುವ ಈ ವಚನ ಭಗವಂತ ಮತ್ತು ಭಕ್ತರ ಮಧ್ಯೆ ವ್ಯವಹಾರ ಹೇಗಿರಬೇಕೆಂದು ಹೇಳುತ್ತದೆ. ಮಹದೇವಸೆಟ್ಟಿಯೇ ಇಲ್ಲಿ ವ್ಯಾಪಾರಿ, ಈ ಧರಣಿಯೇ ಅವನ ಅಂಗಡಿ, ಕಿಂಚಿತ್ತೂ ಚೌಕಾಶಿಯಿರದ ವ್ಯಾಪಾರವಿಲ್ಲಿ, ಒಮ್ಮನ(ಒಂದೇ ಮನಸ್ಸು)ಕ್ಕುಂಟು

ಬೆಲೆ, ಇಮ್ಮನ(ಎರಡು ಮನಸ್ಸು)ಕ್ಕಿಲ್ಲ ಅವಕಾಶ, ಮಹದೇವಸೆಟ್ಟಿ ತನಗೆ ಬರಬೇಕಾದ ಅರ್ಧ ಕಾಸನ್ನೂ ಬಿಡುವುದಿಲ್ಲ. ಹಾಗೆಯೇ ಒಂದು ಕಾಸನ್ನೂ ಹೆಚ್ಚು ಪಡೆಯುವುದಿಲ್ಲ. ಮೋಸ, ವಂಚನೆಗೆ ಈ ಅಂಗಡಿಯಲ್ಲಿ ಜಾಗವಿಲ್ಲ. ಈ ರೀತಿ ವ್ಯವಹಾರಿಕ ಜಗತ್ತಿನ ಕಾರ್ಯಗಳಿಗೆ ಸಮಾನಾಂತರವಾಗಿ ಪಾರಲೌಕಿಕ ಜಗತ್ತಿನ ನಿಯಮಗಳನ್ನು ಈ ವಚನ ಚಿತ್ರಿಸುತ್ತದೆ.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರೆತ್ತುವೆ ಆಗಮದ ಮೂಗ ಕೊಯ್ಯುವೆ
ನೋಡಯ್ಯ ಮಹಾದಾನಿ ಕೂಡಲ ಸಂಗಮದೇವ
ಮಾದಾರ ಚೆನ್ನಯ್ಯನ ಮನೆಯ ಮಗ ನಾನು"

ಹೀಗೆನ್ನುವ ಬಸವೇಶ್ವರರ ಇಂಥ ಅದೆಷ್ಟೋ ವಚನಗಳು ವೈಚಾರಿಕ ಪ್ರಜ್ಞೆಯಿಂದ ಕ್ರಾಂತಿಯ ಕಹಳೆಯನ್ನು ಮೊಳಗಿಸಿ ವಚನ ಚಳವಳಿಗೆ ಹೊಸ ಬೆಳಕು ನೀಡಿವೆ. ಇಲ್ಲಿ ಮನಷ್ಯ ಮನುಷ್ಯನಾಗಿ ಬದುಕಲು ಬಿಡದ ಜಾತಿ ಎಂಬ ಭೂತದ ವಿರುದ್ಧ ಬಸವೇಶ್ವರರು ಸಿಡಿದು ನಿಲ್ಲುವುದನ್ನು ಕಾಣಬಹುದಾಗಿದೆ. ಬಸವೇಶ್ವರರ ಈ ವಚನವಂತೂ ಅಂಬೇಡ್ಕರರು ತಮ್ಮ ಕ್ರಾಂತಿಕಾರಿ ಕೃತಿ 'ಜಾತಿ ವಿನಾಶ'ದಲ್ಲಿ ಹೇಳಿರುವ ಜಾತಿ ಪದ್ಧತಿಯನ್ನು ನೀವು ದಮನ ಮಾಡಬೇಕಾದರೆ ಮೊದಲು ನೀವು ವೇದಗಳು ಮತ್ತು ಶಾಸ್ತ್ರಗಳಿಗೆ ಡೈನಾಮೇಟು ಹಾಕಬೇಕು ಎನ್ನುವ ಕ್ರಾಂತಿಕಾರಿ ಮಾತುಗಳನ್ನು ನೆನಪಿಸುತ್ತವೆ. ದಲಿತರ ಉದ್ಧಾರಕ್ಕೆಂದೇ ದೀಕ್ಷೆ ತೊಟ್ಟು ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟುಹಾಕಿದ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಬಸವೇಶ್ವರರ ನಡುವೆ ಬಹಳಷ್ಟು ಸಾಮ್ಯಗಳುಂಟು. ಮುಖ್ಯವಾಗಿ ಇವರಿಬ್ಬರೂ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಧೀರೋದ್ದಾತ ಚೇತನಗಳು. ಅಷ್ಟೇ ಅಲ್ಲ ಪರ್ಯಾಯ ಸಮಾಜವನ್ನೇ ಕಟ್ಟಿದವರು. ಅಸ್ಪೃಶ್ಯತೆಯ ನಾಶದಲ್ಲಿ ನಾಡಿನ ಉದ್ಧಾರವಿದೆ ಎಂದು ತಿಳಿದವರಲ್ಲಿ ಬಸವೇಶ್ವರರು ಮೊದಲಿಗರು. ಬಹುಶಃ ಅಂಬೇಡ್ಕರ್ ಏನಾದರೂ ಕರ್ನಾಟಕದಲ್ಲಿ ಜನಿಸಿದ್ದರೆ ಬಸವೇಶ್ವರರ ನಿಲುವನ್ನು ಒಪ್ಪಿ ಅವರ ವೀರಶೈವ ಧರ್ಮವನ್ನೇ ಒಪ್ಪಿಕೊಳ್ಳುತ್ತಿದ್ದರೇನೋ! ಏಕೆಂದರೆ "ಜಗತ್ತು ಸೃಷ್ಟಿಸಿದ ಶ್ರೇಷ್ಠತಮ ಮಹಾಪುರುಷರು ಬಸವೇಶ್ವರರು" ಎಂದು ಸ್ವತಃ ಅಂಬೇಡ್ಕರ್ ಅವರೇ ನುಡಿದಿದ್ದಾರೆ.

ತಾವು ಮೋಕ್ಷಾಪೇಕ್ಷಿ ಆದುದರಿಂದ ಪುನಃ ಜನಿಸಲು ತಮಗೆ ಇಷ್ಟವಿಲ್ಲ, ಆದರೂ ತಮಗೆ ಪುನರ್ಜನ್ಮವೆಂಬುದಿದ್ದರೆ ಮುಂದಿನ ಜನ್ಮದಲ್ಲಿ ಅಸ್ಪೃಶ್ಯನಾಗಿ ಹುಟ್ಟಲಿಚ್ಛಿಸುತ್ತೇನೆ ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಲವಾರು ಸಾರಿ ಘೋಷಿಸಿದ್ದಿದೆ. ಆದರೆ ಬಸವೇಶ್ವರರು ಇಂಥ ಯಾವುದೇ ಘೋಷಣೆಯನ್ನು ಮಾಡದೆಯೇ ಈ ಜನ್ಮದಲ್ಲಿಯೇ ಅಸ್ಪೃಶ್ಯರಾಗುತ್ತಾರೆ. ದಲಿತರಲ್ಲಿ ಆತ್ಮಪ್ರತ್ಯಯವನ್ನೂ, ನಂಬಿಕೆಯನ್ನೂ ಮೂಡಿಸಬೇಕಾದರೆ ತಾವೂ ದಲಿತರಾಗಬೇಕೆಂಬ ದೃಷ್ಟಿಯಿಂದವರು ದಲಿತರಾಗುತ್ತಾರೆ. ಇದಕ್ಕಾಗಿ ಅವರು ಗಾಂಧೀಜಿ ಬಯಸಿದಂತೆ ಮುಂದಿನ ಜನ್ಮದವರೆಗೂ ಕಾಯುವುದಿಲ್ಲ. ಹಾಗಾಗಿ ಈ ವಿಚಾರದಲ್ಲಿ ಬಸವಣ್ಣನವರು ಗಾಂಧಿಗಿಂತಲೂ ಎತ್ತರಕ್ಕೇರುತ್ತಾರೆ.

ಕೆಳಜಾತಿಯಲ್ಲಿ ಜನಿಸಿದ್ದಕ್ಕೆ ಅಪಮಾನದಿಂದ ನೊಂದುಕೊಳ್ಳುವುದು ಸಹಜ. ಆದರೆ ಬಸವೇಶ್ವರರು ಮೇಲ್ಜಾತಿ ಬ್ರಾಹ್ಮಣ ಕುಟುಂಬದಲ್ಲಿ ತಾವು ಹುಟ್ಟಿದ್ದಕ್ಕೆ ನೊಂದುಕೊಂಡು "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ, ಆನು ಹಾರುವನೆಂದಡೆ ಕೂಡಲ ಸಂಗಯ್ಯ ನಗುವನಯ್ಯ" ಎನ್ನುತ್ತಾರೆ. ಇಷ್ಟು ಸಾಲದೆಂಬಂತೆ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, "ತಾನು ಮಾದಾರ ಚೆನ್ನಯ್ಯನ ಮಗ" ಎನ್ನುವವರೆಗೂ ಹೋಗುತ್ತಾರೆ. "ಚೆನ್ನಯ್ಯನ ಮನೆಯ ದಾಸನ ಮಗನು

ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ
ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲ ಸಂಗಮದೇವ ಸಾಕ್ಷಿಯಾಗಿ"

ಹೀಗೆ ಹೇಳುವ ಧೈರ್ಯ ಬಸವೇಶ್ವರರಿಗಲ್ಲದೆ ಇನ್ನಾರಿಗೆ ಬಂದೀತು! ಏಕೆಂದರೆ ಜಾತಿ ನಿಷ್ಠ ಸಮಾಜದ ದೃಷ್ಟಿಯಲ್ಲಿ ಮಾದಾರ ಚೆನ್ನಯ್ಯ ಮತ್ತು ಕಕ್ಕಯ್ಯ ಅತ್ಯಂತ ಕೀಳು ಜಾತಿಯವರು. ಇಂಥವರ ಮನೆಯಲ್ಲಿ ಜೀತಕ್ಕಿರುವ ಜನರು ಇನ್ನೆಷ್ಟು ಹೀನ ಜಾತಿಯವರಿರಬೇಕೆಂದು ಯೋಚಿಸಿದಷ್ಟೂ ಬಸವೇಶ್ವರರ ಮನುಷ್ಯತ್ವದ ಮೇರು ವ್ಯಕ್ತಿತ್ವ ಮಿರಮಿರನೆ ಮಿಂಚುತ್ತದೆ. ಜೀತದಾಳುಗಳ ಹಾದರಕ್ಕೆ ಹುಟ್ಟಿದವನು ನಾನೆಂದು ಹೇಳಿಕೊಳ್ಳುವ ಬಸವೇಶ್ವರರ ಮಾನವತೆಗೆ ಅವರೇ ಸಾಟಿ, ಮನುಷ್ಯತ್ವದಿಂದ ದೈವತ್ವಕ್ಕೇರಿರುವ ಪರಿಯಿದು.

ಮಹಾಮಾನವತಾವಾದಿ ಬಸವೇಶ್ವರರಿಗೆ ಮನುಷ್ಯರೆಲ್ಲರೂ ಒಂದೇ ಎಂಬ ಭಾವ ಅವರ ಜೀವ-ಜೀವನದಲ್ಲೆಲ್ಲಾ ತುಂಬಿ ಹೋಗಿತ್ತು. ಮೂಲತಃ ಬ್ರಾಹ್ಮಣ ಕುಟುಂಬದಿಂದ ಬಂದಿದ್ದರೂ ಬಾಲ್ಯಾವಸ್ಥೆಯಿಂದಲೂ ಅವರು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು. ಆದ್ದರಿಂದಲೇ ಅವರು ಯಾರಿಗೂ ಹೆದರದೆ ಧೈರ್ಯವಾಗಿ ತಮ್ಮ ಉಪನಯನವನ್ನು ಧಿಕ್ಕರಿಸಿದ್ದರು. ಇಡೀ ಸಮಾಜವನ್ನು ಮಾನವೀಯಗೊಳಿಸಲು ಬಸವೇಶ್ವರರು ಬದುಕಿನ ಅಗ್ನಿಗೆ ತಮ್ಮನ್ನು ತಾವು ಒಡ್ಡಿಕೊಂಡು ಒಂದು ರೀತಿ ಕರ್ಪೂರದಂತೆ ಉರಿದು ಜಗಕೆ ಬೆಳಕಾಗಿದ್ದರು. ದೀನ-ದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರ ದಲಿತ ಪರ ಹೋರಾಟ ಸಹ ಮಾನವೀಯಗೊಳಿಸುವ ಪ್ರಯತ್ನಕ್ಕೆ ಸಾಕ್ಷಿ. ದಲಿತರ ಅವಮಾನಿತ ಬದುಕಿನ ನೋವುಗಳನ್ನು ಅರಿಯಲು ಈ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅವರು ತಮ್ಮ ಮೂಲ ಜಾತಿಯನ್ನೇ ತೊರೆದು ದಲಿತರೊಳಗೊಂದಾದದ್ದು ಸಾಮಾನ್ಯ ವಿಷಯವಲ್ಲ. ಈ ದಿಸೆಯಲ್ಲಿ ಅವರದು ವಿಶ್ವದಲ್ಲೇ ಅಪ್ರತಿಮ ಚೇತನವೆನ್ನಬಹುದು.

ಇಂಥ ಮಾನವೀಯ ನೆಲೆಯಲ್ಲೇ ವೈಚಾರಿಕ ಪ್ರಭೆಯೊಡನೆ ಸಮಾಜ ಸುಧಾರಣಾ ಹಾದಿಯಲ್ಲಿ ವಚನ ಸಾಹಿತ್ಯ ಕೃಷಿಯನ್ನು ಸಮೃದ್ಧವಾಗಿ ಮಾಡಿರುವ ಬಸವೇಶ್ವರರ ವಚನಗಳು ಸರ್ವಕಾಲಕ್ಕೂ ಸರ್ವಶ್ರೇಷ್ಠ ವಚನಗಳಾಗಿಯೇ ಉಳಿದಿವೆ, ಇಂದಿಗೂ ಸಹ ಹನ್ನೆರಡನೇ ಶತಮಾನದಲ್ಲಿ ಸೃಷ್ಟಿಗೊಂಡ ಅವರ ವಚನಗಳನ್ನು ಓದುತ್ತಿದ್ದರೆ ಈಗಿನ ಸಂದರ್ಭವನ್ನೇ, ಇಂದಿನ ಬಿಕ್ಕಟ್ಟುಗಳನ್ನೇ ಬಸವೇಶ್ವರರು ಬಿಚ್ಚಿಡುತ್ತಿದ್ದಾರೆ ಎನಿಸುತ್ತದೆ. ಅಷ್ಟೇ ಅಲ್ಲ ಇಂದು ನಮ್ಮ ಸಮಾಜವನ್ನು ಕಾಡುತ್ತಿರುವ ಪ್ರಶ್ನೆಗಳಿಗೆಲ್ಲ ಖಂಡಿತವಾಗಿಯೂ ಬಸವೇಶ್ವರರಲ್ಲಿ ಉತ್ತರವನ್ನು ಕಾಣಬಹುದು. "ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ ನೀ ಬಂದೆ, ಬಟ್ಟೆಗೆಟ್ಟವರಿಗೊಂದು ದಿಕ್ಕಾಗಿ, ಎಂಟು ಶತಮಾನಗಳ ಹಿಂದೆ, ಅಗ್ನಿಖಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ, ದೇವ ದಯೆಯೊಂದು ಹೇ ಧೀರಾವತಾರ ಶ್ರೀ ಬಸವೇಶ್ವರ!" ಎಂದು ವಿಶ್ವಕವಿ, ರಸಋಷಿ ಕುವೆಂಪು ಅವರು ತಮ್ಮ ಬಸವಬೆಳಕು ಕವಿತೆಯಲ್ಲಿ ಬಸವೇಶ್ವರರ ಬಗ್ಗೆ ಬರೆಯುತ್ತಾ ಮುಂದುವರಿದು ಜಾತಿ ಪದ್ಧತಿಯ ಹೋಮ ಕೂಪಕ್ಕೆ, ಬಿದ್ದು ವೈಧಿಕರ ಯಜ್ಞತಾಪಕ್ಕೆ, ಬಲಿ ಹೋದ ದಲಿತ ಜೀವರನೆತ್ತಿ ಮತಿ ವಿಚಾರಕ್ಕೆ, ಕಾಯಕದ ದಿವ್ಯತತ್ವದ ಸುಕ್ಷೇಮ ಧರ್ಮನಾಕಕ್ಕೆ, ನಡೆಸಿದ ಮಹಾತ್ಮನೆ, ನಿನಗೆ ನಮೋನಮಃ! ಎಂದು ಶ್ರೀ ಬಸವೇಶ್ವರರಿಗೆ ನಮಿಸುತ್ತಾರೆ.



ವಾರಭವಿಷ್ಯ



23.4.2023 ರಿಂದ 29.4.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಮೇಷ, ವೃಷಭ ಮಿಥುನ, ಕಟಕ, ಕುಜ-ಮಿಥುನ, ಬುಧ-ಮೇಷ, ಗುರು-ಮೀನ, ಶುಕ್ರ-ವೃಷಭ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಕೆಲವೊಮ್ಮೆ ನಾವು ಬಯಸದೇ ಇದ್ದರೂ ಕೌಟುಂಬಿಕ ಘರ್ಷಣೆಗಳು ನಡೆದು ಬಿಡುತ್ತವೆ. ನಿಮ್ಮ ತಾಳ್ಮೆಗೆಡಲು ನಿಮ್ಮ ರಾಶಿಯಲ್ಲಿ ಸ್ಥಿತನಿರುವ ರಾಹುವೇ ಕಾರಣ. ಪಶು ಸಂಗೋಪನೆ ಹಾಗೂ ಕೃಷಿ ಉಪಕರಣ ಮಾರಾಟಗಾರರಿಗೆ ಉತ್ತಮ ಧನಲಾಭವಾಗುವುದು. ನಿಮ್ಮ ರಾಶಿಯಲ್ಲಿ ನಾಲ್ಕು ಗ್ರಹಗಳ 'ಗ್ರಹಯುದ್ಧ' ನಡೆದಿದ್ದು ನಂಬಲರ್ಹರಲ್ಲದವರೊಡನೆ ಹಣಕಾಸಿನ ವ್ಯವಹಾರ ಮಾಡಬೇಡಿ.
ಶ್ರೀ ಗಣಪತಿ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಪರಿಶ್ರಮ ಹಾಗೂ ಏಕಾಗ್ರತೆಯಿಂದ ಜೀವನ ಪಥದಲ್ಲಿ ಯಶಸ್ಸನ್ನು ಗಳಿಸುವಿರಿ. ನಿಮ್ಮ ಪ್ರತಿಜ್ಞಾಪಾಲನೆಯನ್ನು ಇತರರು ಮೆಚ್ಚುವರು. ಉಚ್ಚ ಚಂದ್ರನ ಸಂಚಾರದಿಂದ ಕೈ ತುಂಬಾ ಹಣ ಬರುವುದು. ಆದರೆ ನೀವು ಹಣದಾಸೆಗೆ ಒಳಪಟ್ಟು ಸಮಾಜ ಬಾಹಿರ ಕೃತ್ಯಗಳನ್ನು ಎಸಗುವಿರಿ. ದುಡುಕು ಹಾಗೂ ಸಿಡುಕು ಸ್ವಭಾವದಿಂದ ಸಂಬಂಧಗಳಲ್ಲಿ ಬಿರುಕು ಉಂಟಾಗುವುದು. ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಈ ವಾರ ನಿಮ್ಮ ವಿವೇಚನಾ ಶಕ್ತಿ ಉತ್ತಮ ಮಟ್ಟದ್ದಾಗಿರುತ್ತದೆ. ನಿಮ್ಮ ಕಾರ್ಯತತ್ಪರತೆ ಉತ್ಕೃಷ್ಟ ಫಲವನ್ನು ನೀಡುವುದು. ಚಂದ್ರ ಸಂಚಾರ ಶುಭವಿದ್ದು ಅಂದುಕೊಂಡ ಕೆಲಸಗಳು ಅಂದುಕೊಂಡಂತೆ ನಡೆಯುವುದರಿಂದ ಪ್ರಸನ್ನಚಿತ್ತರಾಗಿರುತ್ತೀರಿ. ಕೇತುವು ಬಾಧಕನಾಗಿದ್ದು ನಿಮ್ಮ ಆಕ್ರಮಣಕಾರಿ ಬುದ್ಧಿಯಿಂದ ಹೊಸ ಶತ್ರುಗಳು ಹುಟ್ಟಿಕೊಳ್ಳುವರು. ಮಿತ್ರರು ದೂರ ಸರಿಯುವರು.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-5.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರದ ನಿಮ್ಮ ಕಾರ್ಯ ಕಲಾಪಗಳೆಲ್ಲವೂ ಶುಭ ಸ್ಥಿತಿಯಲ್ಲಿ ಸಾಗುವುದು. ನಿಮ್ಮ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಆಗುವುದು. ತತ್ವಜ್ಞಾನ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತರಾಗಿರುವಿರಿ. ಮನೆಯಲ್ಲಿ ಪ್ರೀತಿ ವಾತ್ಸಲ್ಯದ ವಾತಾವರಣ ಇರುವುದು. ಮನೆಯಲ್ಲೆ ಮಂಗಳ ಕಾರ್ಯಗಳು ನಡೆಯುವ ಸಾಧ್ಯತೆ ಇದೆ. ಸುರಕ್ಷಿತವಾಗಿ ವಾಹನ ಚಲಿಸಿ, ಇತರರೂ ಸುರಕ್ಷಿತವಾಗಲಿ.
ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಬರೀ ಕಷ್ಟ ಪಡುವುದರಿಂದಲೇ ಜಯ-ಸುಖವನ್ನು ಸಾಧಿಸಲು ಆಗುವುದಿಲ್ಲ. ದೈವ ಸಹಾಯವೂ ಬೇಕಾಗುತ್ತದೆ. ಇದೀಗ ಭಾಗ್ಯ ಭಾವಕ್ಕೆ ಬಂದಿರುವ ಗುರು ನಿಮ್ಮ ಜೀವನದಲ್ಲಿ ಗುರುತರವಾದ ಬದಲಾವಣೆಗೆ ಪೀಠಿಕೆ ಆಗಲಿದೆ. ಮಾಡುವ ಕೆಲಸವನ್ನು ನಿರ್ಮಲ ಚಿತ್ತರಾಗಿ ನಿರ್ವಹಿಸಿ ಪ್ರತಿಫಲವನ್ನು ದೈವದ ಮೇಲೆ ಬಿಡಿ ಮನಸ್ಸಿ ಪ್ರಾರ್ಥಿಸುವಾಗ ಪ್ರಸಾದದ ಚಿಂತೆ ಏಕೆ? ಸಮಯ ಸೇರಿದಂತೆ ನಿಮ್ಮ ಬವಣೆಗಳು ಸವೆಯುವುದು.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-9.

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಸಜ್ಜನರ ಭೇಟಿ, ಸುವಾರ್ತೆಗಳ ಸಂವಾದ. ಆರ್ಥಿಕ ಪರಿಸ್ಥಿತಿ ಸುಧಾರಿಸುವುದು, ಆದರೆ ದುಂದುವೆಚ್ಚದಿಂದ ಪರ್ಸ್ ಖಾಲಿ. ಯಾವುದು ಬೇಕು-ಬೇಡ ಎಂಬ ಪರ್ಯಾಪ್ತ ಪ್ರಜ್ಞೆ ಇಲ್ಲದೆ ತೊಂದರೆಗೆ ಒಳಗಾಗುವಿರಿ. ಗುಪ್ತ ಪ್ರೇಮ ಸಂಬಂಧಗಳಿಂದ ಸಂಕಷ್ಟ ಎದುರಿಸಬೇಕಾದೀತು. ಸರ್ಕಾರಿ ನೌಕರರು ವರ್ಗಾವಣೆ ನಿಮಿತ್ತ ವಾಸ್ತವ್ಯ ಬದಲಿಸಬೇಕಾಗಬಹುದು. ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-7.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಬೃಹಸ್ಪತಿ ಎಂಬ ಶುಭ ಗ್ರಹದ ವೀಕ್ಷಣೆ ನಿಮ್ಮ ರಾಶಿಯ ಮೇಲೆ ಬಂದಾಗಿದೆ. ಇದೇ ಸಮಯಕ್ಕೆ ಗುರುದರ್ಶನದಿಂದ ಗುರಿ ಕಾಣುತ್ತದೆ. ಸುದ್ದಿ ಸಂಚಾಲಕರಿಗೂ, ದೃಶ್ಯ ಮಾಧ್ಯಮದವರಿಗೂ ತಪ್ಪನ್ನು ಅವಲೋಕಿಸಿಕೊಳ್ಳುವ ಸಮಯವಾಗಿದೆ. ಕೇತು-ರಾಹುಗಳು ಶುಭಪ್ರದರಲ್ಲ, ಕೃತ್ರಿಮ ಗೆಳೆಯರ ಬಗ್ಗೆ ಎಚ್ಚರಿಕೆಯಿಂದ ಇರಿ. ಸಾಧ್ಯವಾದಷ್ಟು ಅನವಶ್ಯಕವಾದ ಕೆಲಸಗಳನ್ನು ಒಪ್ಪಿಕೊಳ್ಳಬೇಡಿ.
ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

'ಶ್ರದ್ಧಾವಾನ್ ಲಭತೇ ಫಲಂ' ಎಂಬ ಆರ್ಯೋಕ್ತಿಯಂತೆ ನೀವು ತೊಡಗಿಸಿಕೊಂಡ ಕೆಲಸದಲ್ಲಿ ತನ್ಮಯತೆ ಇರಲಿ, ಶುಭ ಫಲ ನಿಮ್ಮದಾಗಲಿದೆ. ಉಚ್ಚ ಚಂದ್ರನ ದೃಷ್ಟಿ ಫಲವಾಗಿ ಮನೆಯಲ್ಲಿ ಸಂತಸದ ವಾತಾವರಣ, ಆಪ್ತ ಬಂಧುಗಳ ಮಿಲನ. ಈ ನಡುವೆ ನಿಮ್ಮ ಸಹವಾಸಗಳು ನೆಟ್ಟಗಿರಲಿ ಅನ್ಯಥಾ ಆರಕ್ಷಕ ಠಾಣೆಯ ದರ್ಶನ ಮಾಡಬೇಕಾದೀತು. ಕಫ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಸುಬ್ರಹ್ಮಣ್ಯ ಸ್ತುತಿ. ಶುಭ ಸಂಖ್ಯೆ-6.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಮಂಥನ ಮಾಡದೆ ಅಮೃತ ಸಿಗದು' ಬೃಹಸ್ಪತಿಯು ಶುಭ ಸ್ಥಾನಕ್ಕೆ ಪಲ್ಲಟವಾಗಿದೆ. ಮನೆಯಲ್ಲಿ ಮಂಗಳಕಾರ್ಯಕ್ಕೆ ನಾಂದಿ ಆಗುವುದು. ಬಹು ನಿರೀಕ್ಷಿತ ಕೆಲಸಗಳು ಮರು ಚಾಲನೆ ಹೊಂದುವುದು. ಸುವರ್ಣ, ರಜತ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಶತ್ರುಗಳು ಹಿಂದೆ ಸರಿಯುವರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಾಧ್ಯತೆ ಇರುತ್ತದೆ. ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ದೈನಂದಿನ ಕೆಲಸಗಳು ಮಾಮೂಲಿನಂತೆ ನಡೆಯುವುದು. ಹಣಕಾಸು ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ. ನ್ಯಾಯಾಲಯ ವಿಚಾರಗಳು ನಿಮಗೆ ಅನುಕೂಲಕರವಾಗಿ ಇರುವುದಿಲ್ಲ. ಹಿರಿಯರ ಮಾತಿಗೆ ಮನ್ನಣೆ ನೀಡಿ ನಡೆದರೆ ಕಾರ್ಯ ಜಯ. ಆಧ್ಯಾತ್ಮದತ್ತ ಒಲವು ಮೂಡುವುದು. ದೂರ ಪ್ರಯಾಣಗಳನ್ನು ಮುಂದೂಡಿ.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಆರ್ಥಿಕ ಪರಿಸ್ಥಿತಿಯಲ್ಲಿ ಅಲ್ಪಸ್ವಲ್ಪ ಸುಧಾರಣೆ ಕಂಡು ಬರುವುದು. ವೃತ್ತಿಪರ ಕೆಲಸಗಳ ಹೊರೆ ಜಾಸ್ತಿಯಾಗಿ ದೇಹಾಯಾಸ. ಕುಟುಂಬ ಸದಸ್ಯರ ನೆರವಿನಿಂದ ಕೆಲವು ಕಾರ್ಯಗಳು ಪೂರ್ಣಗೊಳ್ಳಲಿವೆ. ಮನೆಯ ಹೊರಗೆ ಪ್ರತಿಕೂಲ ವಾತಾವರಣ ಇರುತ್ತದೆ. ವಿನಾಕಾರಣ ವಾಗ್ವಾದಗಳು ಉಂಟಾಗಲಿದೆ. ಸಾಲದ ಪ್ರಯತ್ನಗಳು ವಿಫಲಗೊಳ್ಳಲಿದೆ. ವಾಹನ ಚಲಿಸುವಾಗ ಜಾಗ್ರತೆ, ತಪ್ಪಿದರೆ ಜಾರುತ್ತೀರಾ.
ಶ್ರೀ ಮಾರುತಿ ಉಪಾಸನೆ. ಶುಭ ಸಂಖ್ಯೆ-2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಶುಭ ಗುರು ನಿಮ್ಮ ರಾಶ್ಯಾಧಿಪತಿ, ಇದೀಗ ಶುಭ ಸ್ಥಾನಕ್ಕೆ ಪಲ್ಲಟವಾಗಿದೆ. ಗುರು ಕೃಪೆಯಿಂದ ಬದುಕು ಸಮೃದ್ಧವಾಗಲಿದೆ. ಇದುವರೆಗೆ ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಕ್ರಮೇಣ ಶಮನವಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವ ಸಾಧ್ಯತೆ ಇದೆ. ವ್ಯಯಸ್ಥಾನದಲ್ಲಿರುವ ಶನಿದೇವ ಸ್ವಯಂಕೃತಾಪರಾಧದಿಂದ ಬುದ್ಧಿ ಕಲಿಸುತ್ತಾರೆ. ಮಾರಕ ಸ್ಥಾನದಲ್ಲಿರುವ ರಾಹು-ಕೇತು ಅಪಘಾತಗಳಿಗೆ ಕಾರಣರಾಗಬಹುದು. ಶ್ರೀ ರಾಘವೇಂದ್ರ ಪೂಜೆ. ಶುಭ ಸಂಖ್ಯೆ-5.

ಕೊಡವ ಕುಟುಂಬಗಳ ಬಾಳೆಯಡ ಕ್ರಿಕೆಟ್ ನಮ್ಮೆಗೆ ವೈಭವದ ಚಾಲನೆ

ಜಿಲ್ಲೆಯಲ್ಲಿ ಹಾಕಿ ನಂತರ ಕ್ರಿಕೆಟ್ ಕೂಡ ಚರಿತ್ರೆಯಲ್ಲಿ ದಾಖಲಾಗಿದೆ





ನಾಪೋಕ್ಲು, ಏ.22– ಕೊಡಗು ಜಿಲ್ಲೆ ಸೇನೆ ಮತ್ತು ಕ್ರೀಡೆ ಎರಡರಲ್ಲೂ ಹೆಸರುವಾಸಿಯಾಗಿದ್ದು, ಹಾಕಿಯ ನಂತರ ಕ್ರಿಕೆಟ್ ಕೂಡ ಚರಿತ್ರೆಯಲ್ಲಿ ದಾಖಲಾಗಿದೆ ಎಂದು ಕರ್ನಲ್ ಮಾಚಿಮಂಡ ಮುತ್ತಪ್ಪ ತಿಳಿಸಿದ್ದಾರೆ.

ಸಮೀಪದ ಚೆರಿಯಪರಂಬುವಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ಶನಿವಾರದಿಂದ ಆರಂಭವಾದ ಬಾಳೆಯಡ ಕ್ರಿಕೆಟ್ ನಮ್ಮೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಆಯೋಜಿಸುತ್ತಿರುವ ಕ್ರೀಡಾ ಚಟುವಟಿಕೆಗಳು ಇಂದಿನ ಯುವ ಜನಾಂಗಕ್ಕೆ ಮಾದರಿಯಾಗುತ್ತಿವೆ. ಹಿಂದೆ ಕ್ರೀಡೆ ವೃತ್ತಿಯ ಒಂದು ಭಾಗವಾಗಿರಲಿಲ್ಲ. ಈಗ ಕ್ರೀಡೆ ಮತ್ತು ವೃತ್ತಿ ಎರಡು ಒಂದಕ್ಕೊಂದು ಪೂರಕವಾಗಿದ್ದು ಕ್ರೀಡಾಕೂಟಗಳ ಆಯೋಜನೆಯಿಂದ ಜನಾಂಗದವರ ಬಾಂಧವ್ಯ ವೃದ್ಧಿ ಆಗಲಿದೆ ಬಾಳೆಯಡ ಕುಟುಂಬಸ್ಥರು ಆಯೋಜಿಸಿರುವ ಕೌಟುಂಬಿಕ ಕ್ರಿಕೆಟ್ ನಮ್ಮೆ ಇತರ ಕುಟುಂಬದವರಿಗೂ ಮಾದರಿ ಆಗಲಿ ಎಂದರು.

ಮತ್ತೋರ್ವ ಮುಖ್ಯ ಅತಿಥಿ ಒಲಂಪಿಯನ್ ಬೊಳ್ಳಂಡ ಪ್ರಮೀಳಾ ಅಯ್ಯಪ್ಪ ಮಾತನಾಡಿ, ಕುಟುಂಬದವರ ಪ್ರೋತ್ಸಾಹವಿದ್ದಲ್ಲಿ ಕ್ರೀಡೆಯಲ್ಲೂ ಉನ್ನತ ಸ್ಥಾನಕ್ಕೇರಲು ಸಾಧ್ಯ. ಇಂದು ಶಿಕ್ಷಣದೊಂದಿಗೆ ಕ್ರೀಡೆಗೂ ಉತ್ತೇಜನ ನೀಡುವ ಅವಶ್ಯಕತೆ ಇದೆ. ಮಕ್ಕಳ ಭವಿಷ್ಯಕ್ಕಾಗಿ ಪೋಷಕರು ತಮ್ಮ ಕನಸುಗಳನ್ನು ಬದಿಗೊತ್ತಿ ಆಸಕ್ತಿದಾಯಕ ರಂಗದಲ್ಲಿ ಮುಂದೆ ಬರಲು ಪ್ರೋತ್ಸಾಹ ನೀಡಬೇಕು ಎಂದರು.

ನಿವೃತ್ತ ಕರ್ನಲ್ ಪುಟ್ಟಿಚಂಡ ಗಣಪತಿ, ಪರ್ವತಾರೋಹಿ ಜಮ್ಮಡ ಪ್ರೀತ್ ಅಪ್ಪಯ್ಯ ಮಾತನಾಡಿದರು. ಬಾಳೆಯಡ ಕ್ರಿಕೆಟ್ ನಮ್ಮೆ ಸಮಿತಿ ಅಧ್ಯಕ್ಷ ಒಲಂಪಿಯನ್, ಲೆಫ್ಟಿನೆಂಟ್ ಕರ್ನಲ್ ಬಾಳೆಯಡ ಸುಬ್ರಮಣಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೊಡವ ಕೌಟುಂಬಿಕ ಕ್ರಿಕೆಟ್ ಉತ್ಸವ ಆರಂಭವಾದಾಗ 109 ತಂಡಗಳು ಪಾಲ್ಗೊಂಡಿದ್ದವು. ಇದೀಗ ಬಾಳೆಯಡ ಕ್ರಿಕೆಟ್ ನಮ್ಮೆಯಲ್ಲಿ 252 ತಂಡಗಳು ಭಾಗವಹಿಸಿ ದಾಖಲೆ ನಿರ್ಮಿಸಿವೆ. ಕೌಟುಂಬಿಕ ಕ್ರಿಕೆಟ್ ನಮ್ಮೆಯ ಯಶಸ್ವಿಗಾಗಿ ಬಾಳೆಯಡ ಫಂಡ್ ಸ್ಥಾಪಿಸಿ ಆರ್ಥಿಕ ಸಂಪನ್ಮೂಲವನ್ನು ಕುಟುಂಬದ ಎಲ್ಲಾ ಸದಸ್ಯರ ಮತ್ತು ದಾನಿಗಳ ಸಹಕಾರದಿಂದ ಕ್ರೋಢೀಕರಿಸಲಾಗಿದೆ ಎಂದರು.



ಈ ಸಂದರ್ಭ ವೇದಿಕೆಯಲ್ಲಿ ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ಬಾಳೆಯಡ ಕುಟುಂಬದ ಹಿರಿಯ ಬಾಳೆಯಡ ಮಂದಪ್ಪ, ಹಾಕಿ ಅಕಾಡೆಮಿ ಸದಸ್ಯ ಕೇಲೇಟಿರ ಅರುಣ್ ಬೇಬ ಇನ್ನಿತರರು ಉಪಸ್ಥಿತರಿದ್ದರು.

ಶಶಿರ್ ಬೆಳ್ಳಿಯಪ್ಪ ಮತ್ತು ಬಿಶನ್ ಬಿದ್ದಪ್ಪ ಪುಟಾಣಿಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಕರುಣ್ ಕಾಳಪ್ಪ ಸ್ವಾಗತಿಸಿ ಚೆಪ್ಪುಡಿರ ಕಾರ್ಯಪ್ಪ ಬಾಳೆಯಡ ದಿವ್ಯ ಕಾರ್ಯಕ್ರಮ ನಿರೂಪಿಸಿದರು. ಸದಾ ಕುಶಾಲಪ್ಪ ವಂದಿಸಿದರು.

ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಬಾಳೆಯಡ ಕುಟುಂಬಸ್ಥರಿಂದ ದುಡಿ ಕೊಟ್ ಪಾಟ್ ಮೂಲಕ ಆಕರ್ಷಕ ಮೆರವಣಿಗೆ ನಡೆಯಿತು. ಸಾಂಸ್ಕೃತಿಕ ಉಡುಗೆ ಕೊಡುಗೆಗಳೊಂದಿಗೆ ತಳಿಯಕ್ಕಿ ಬೊಳಕ್ ಹಾಗೂ ದುಡಿ ಕೊಟ್ ಪಾಟ್‌ನೊಂದಿಗೆ ಮೆರವಣಿಗೆ ಮೂಲಕ ಅತಿಥಿಗಳನ್ನು ವೇದಿಕೆಗೆ ಕರೆತರಲಾಯಿತು.

ಧ್ವಜಾರೋಹಣ: ಕ್ರಿಕೆಟ್ ಅಕಾಡೆಮಿಯ ಮತ್ತು ಬಾಳೆಯಡ ಕುಟುಂಬಸ್ಥರ ಧ್ವಜಾ ರೋಹಣವನ್ನು ಅತಿಥಿಗಳು ನೆರವೇರಿಸಿದರು. ಆನಂತರ ಅತಿಥಿಗಳು ಶ್ವೇತ ಬಣ್ಣದ ಪಾರಿವಾಳ ಮತ್ತು ವಿವಿಧ ಆಕರ್ಷಕ ಬಣ್ಣಗಳ ಬೆಲೂನ್‌ಗಳನ್ನು ಹಾರಿಬಿಟ್ಟರು.

ಪ್ರದರ್ಶನ ಪಂದ್ಯ: ಮುಖ್ಯ ಅತಿಥಿಗಳು ಕ್ರೀಡಾಪಟುಗಳನ್ನು ಪರಿಚಯಿಸಿಕೊಂಡು ಬ್ಯಾಟಿನಿಂದ ಚಂಡು ಹೊಡೆಯುವುದರ ಮೂಲಕ ಪ್ರದರ್ಶನ ಪಂದ್ಯಕ್ಕೆ ಚಾಲನೆ ನೀಡಿ ದರು. ಚೆಟ್ಟಳ್ಳಿಯ ಜೋಮಾಲೆ ಪೊಮ್ಮಕ್ಕಡ ತಂಡ ಮತ್ತು ಟಿ.ಶೆಟ್ಟಿಗೇರಿಯ ಸಂಭ್ರಮ ಪೊಮ್ಮಕ್ಕಡ ತಂಡದ ನಡುವೆ ಪ್ರದರ್ಶನ ಪಂದ್ಯ ನಡೆಯಿತು. ಚೆಟ್ಟಳ್ಳಿಯ ಜೋಮಾಲೆ ಪೊಮ್ಮಕ್ಕಡ ತಂಡ ಸೋಲು ಕಂಡರೆ, ಟಿ. ಶೆಟ್ಟಿಗೇರಿಯ ಸಂಭ್ರಮ ಪೊಮ್ಮಕ್ಕಡ ತಂಡ ಗೆಲುವು ಸಾಧಿಸಿತು.

ಪ್ರಥಮ ಪಂದ್ಯಾಟ; ಅತಿಥಿಯ ಬಾಳೆಯಡ ಮತ್ತು ಮುಂಡೋಟಿರ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಬಾಳೆಯಡ ತಂಡ ಗೆಲುವು ಸಾಧಿಸಿ ಮುಂದಿನ ಆಟಕ್ಕೆ ಮುಂದಡಿ ಇಟ್ಟಿದೆ.

ಸಾಂಸ್ಕೃತಿಕ ಕಾರ್ಯಕ್ರಮ; ಅಂಕುರ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಿಂದ ಏರ್ಪಡಿಸಲಾಗಿದ್ದ ಆಕರ್ಷಕ ಬ್ಯಾಂಡ್ ಪ್ರದರ್ಶನ ವೀಕ್ಷಕರ ಗಮನ ಸೆಳೆಯಿತು. ಬಳಿಕ ನಡೆದ ತಿಂಗಕೋರು ಕಾವೇರಿಕ್ ಮೊಟ್ಟು ತಂಡದಿಂದ ಪರೆಕಳಿ, ಕತ್ತಿಯಾಟ್, ಕೋಲಾಟ್ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ ಸೆಳೆದವು.

ಡಾ.ಮಂಥರ್ ಗೌಡ ಪರ ಬಿರುಸಿನ ಪ್ರಚಾರ



ಮಡಿಕೇರಿ,ಏ.22– ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಮಂಥರ್ ಗೌಡ ಪರ ಮಡಿಕೇರಿ ನಗರ ಕಾಂಗ್ರೆಸ್ ಸಮಿತಿಯಿಂದ ಬಿರುಸಿನ ಚುನಾವಣಾ ಪ್ರಚಾರ ನಡೆಯಿತು. ನಗರದ ಅಶೋಕ್ ಪುರ, ಗುಂಡೂರಾವ್ ಕಾಂಪೌಂಡ್ ಮತ್ತು ಆಕಾಶವಾಣಿ ಬಳಿ ಪಕ್ಷದ ಪ್ರಮುಖರು ಹಾಗೂ ಕಾರ್ಯಕರ್ತರು ಪಕ್ಷದ ಯೋಜನೆಗಳ ಕುರಿತು ಜನರಿಗೆ ಮಾಹಿತಿ ನೀಡಿ ಅಭ್ಯರ್ಥಿಯ ಗೆಲುವಿಗೆ ಮನವಿ ಮಾಡಿದರು.

ಈ ಸಂದರ್ಭ ಕೊಡಗು ಚುನಾವಣಾ ಉಸ್ತುವಾರಿ ಹೆಚ್.ಎಂ.ನಂದಕುಮಾರ್, ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಟಿ.ಪಿ. ರಮೇಶ್, ಮಡಿಕೇರಿ ನಗರ ಕಾಂಗ್ರೆಸ್ ಅಧ್ಯಕ್ಷ ಬಿ.ವೈ.ರಾಜೇಶ್, ಡಿಸಿಸಿ ಸದಸ್ಯರುಗಳಾದ ಕೆ.ಯು.ಅಬ್ದುಲ್ ರಜಾಕ್, ಚುಮ್ಮಿ ದೇವಯ್ಯ, ಎಂ.ಎ.ಜಫ್ರುಲ್ಲ, ಟಿ.ಹೆಚ್. ಉದಯ ಕುಮಾರ್, ಪ್ರಕಾಶ್ ಆಚಾರ್ಯ, ಮಡಿಕೇರಿ ನಗರ ಪ್ರಧಾನ ಕಾರ್ಯದರ್ಶಿ ಆರ್.ಪಿ.ಚಂದ್ರಶೇಖರ್, ಅಲ್ಪಸಂಖ್ಯಾತರ ಘಟಕದ ನಗರಾಧ್ಯಕ್ಷ ಕೆ.ಜಿ.ಪೀಟರ್ ಮತ್ತಿತರರು ಪಾಲ್ಗೊಂಡಿದ್ದರು.

ಕುಶಾಲನಗರದ ಕೆ.ಎ.ಅನನ್ಯ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ



ಕುಶಾಲನಗರ, ಏ.22– ದ್ವಿತೀಯ ಪಿಯು ಫಲಿತಾಂಶ ಪ್ರಕಟಗೊಂಡಿದ್ದು, ಕುಶಾಲನಗರದ ನಿವಾಸಿ, ಮೂಡಬಿದ್ರೆ ಆಳ್ವಾಸ್ ಕಾಲೇಜು ವಿದ್ಯಾರ್ಥಿನಿ ಕೆ.ಎ.ಅನನ್ಯ 600ಕ್ಕೆ 600 ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಅನನ್ಯ, ಕುಶಾಲನಗರದ ಗುಮ್ಮನಕೊಲ್ಲಿ ಮಾರುತಿ ಬಡಾವಣೆ ನಿವಾಸಿ ನಿವೃತ್ತ ಸೈನಿಕ ಕೆ.ಎ.ಅಶೋಕ ಹಾಗೂ ಗುಮ್ಮನಕೊಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಿಜಿ.ನಳಿನಿ ದಂಪತಿ ಪ್ರಥಮ ಪುತ್ರಿ ಎಂದು ಕಾಲೇಜಿನ ಪ್ರಾಂಶುಪಾಲರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನನ್ಯ ಅವರ ಪೋಷಕರು ನೆರೆಹೊರೆಯವರಿಗೆ, ಸಂಬಂಧಿಕರಿಗೆ ಸಿಹಿ ಹಂಚಿ ಮಗಳ ಸಾಧನೆಯನ್ನು ಸಂಭ್ರಮಿಸಿದರು. ಸುದ್ದಿಗಾರರೊಂದಿಗೆ ಅನನ್ಯ ತಾಯಿ ಮಾತನಾಡಿ, ಅನನ್ಯ ಅವರು ಕಂಪನಿ ಸೆಕ್ರೆಟರಿ ಕೋರ್ಸ್‌ನತ್ತ ಆಸಕ್ತಿ ಹೊಂದಿರುವುದಾಗಿ ತಿಳಿಸಿದರು.

ಹುಲಿ ದಾಳಿಗೆ ಕರು ಬಲಿ

ಗೋಣಿಕೊಪ್ಪ, ಏ.22– ಹುಲಿ ದಾಳಿಗೆ ಕೊಳ್ತೋಡು–ಬೈಗೋಡು ಗ್ರಾಮದ ಕೇಳಪಂಡ ಪೂವಯ್ಯ ಕುಸುಮ ಅವರ ಸೇರಿದ ಕರು ಬಲಿಯಾಗಿದೆ.



ಶನಿವಾರ ಬೆಳಗ್ಗೆ 8 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಗದ್ದೆಯ ಸಮೀಪ ಕಟ್ಟಿದ್ದ ಕರುವಿನ ಮೇಲೆ ಹುಲಿ ದಾಳಿ ಮಾಡುತ್ತಿದ್ದಾಗ ಕಾರ್ಮಿಕರು ಕಿರುಚಿಕೊಂಡಿದ್ದಾರೆ. ಹುಲಿ ಸ್ಥಳದಿಂದ ಕಾಲ್ಕಿತ್ತಿದೆ. ಎರಡು ಹುಲಿಗಳಿದ್ದವು ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಪೊನ್ನಂಪೇಟೆ ವಲಯ ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿದೆ.

ವಿಜ್ಞಾನ ವಿಭಾಗದಲ್ಲಿ ಟಿ.ಎಂ. ಹಂಶಿಕ ಪ್ರಥಮ ಸ್ಥಾನ



ಕುಶಾಲನಗರಏ.22– ಸಮೀಪದ ಕೂಡಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಟಿ.ಎಂ.ಹಂಶಿಕ ವಿಜ್ಞಾನ ವಿಭಾಗದಲ್ಲಿ 582 ಅಂಕಗಳನ್ನು (ಶೇ.97) ಗಳಿಸುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ ಬಸಪ್ಪ ತಿಳಿಸಿದ್ದಾರೆ.

ಶನಿವಾರಸಂತೆಯಲ್ಲಿ ಅಪ್ಪಚ್ಚು ರೋಡ್ ಶೋ



ಶನಿವಾರಸಂತೆ, ಏ.22– ಶಾದಿ ಭಾಗ್ಯ, ಟಿಪ್ಪು ಜಯಂತಿಯನ್ನು ಆಚರಿಸುವಂತೆ ಯಾರೂ ಕೇಳಿರಲಿಲ್ಲ, ಅವು ಹಿಂದಿನ ಕಾಂಗ್ರೆಸ್ ಸರ್ಕಾರದ ಒಡೆದು ಆಳುವ ನೀತಿಯ ತಂತ್ರಗಳಾಗಿದ್ದವು ಎಂದು ಮಡಿಕೇರಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಎಂ.ಪಿ. ಅಪ್ಪಚ್ಚು ರಂಜನ್ ಅಸಮಾಧಾನ ವ್ಯಕ್ತಪಡಿಸಿದರು. ಶನಿವಾರಸಂತೆ ವ್ಯಾಪ್ತಿಯಲ್ಲಿ ರೋಡ್ ಶೋ ಮೂಲಕ ಚುನಾವಣಾ ಪ್ರಚಾರ ನಡೆಸಿದ ಬಳಿಕ ನಡೆದ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಾದಿ ಭಾಗ್ಯ ಕೆಟ್ಟ ಯೋಜನೆ ಎಂದು ಹೇಳುತ್ತಿಲ್ಲ. ಆದರೆ ಅದರ ಅಗತ್ಯವೇ ಇರಲಿಲ್ಲ. ಯೋಜನೆಗೆ ಭಾರೀ ಪ್ರಚಾರ ಕೊಡಲಾಯಿತೇ ಹೊರತು, ಅದರ ಫಲ ಪಡೆದವರ ಸಂಖ್ಯೆ ತೀರಾ ಕಡಿಮೆ ಎಂದರು.

ಶಾದಿ ಭಾಗ್ಯ ಯೋಜನೆಯನ್ನು ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗೆ ಮಾತ್ರ ಸೀಮಿತಗೊಳಿಸಿ ಸಮುದಾಯಗಳ ನಡುವೆ ಕಂದಕ ಸೃಷ್ಟಿಸಿತೇ ಹೊರತು ಅದರಿಂದ ಆದ ಉಪಯೋಗ ಅಷ್ಟರಲ್ಲೇ ಇದೆ ಎಂದು ಟೀಕಿಸಿದರು. ಟಿಪ್ಪು ಜಯಂತಿ ಸೃಷ್ಟಿಸಿದ ಅನಾಹುತ ಎಲ್ಲರಿಗೂ ಗೊತ್ತೇ ಇದೆ, ಅದನ್ನು ವಿವರಿಸಿ ಹೇಳುವ ಅಗತ್ಯವಿಲ್ಲ ಎಂದ ಅಪ್ಪಚ್ಚು ರಂಜನ್, ಜನತಂತ್ರದಲ್ಲಿ ಜನರಿಗೆ ಬೇಡವಾದ ವಿಷಯಗಳನ್ನು ಹೇರಲಾಗುವುದಿಲ್ಲ ಎಂದರು.

ಜಿಲ್ಲಾದ್ಯಂತ ಸಂಭ್ರಮದ ರಂಜಾನ್ ಆಚರಣೆ

● ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ● ಪರಸ್ಪರ ಶುಭಾಶಯ ವಿನಿಮಯ



ಚಾಮರಾಜನಗರ, ಏ.22–ಜಿಲ್ಲೆಯಾದ್ಯಂತ ಮುಸ್ಲಿಂ ಬಾಂಧವರು ಶನಿವಾರ ಈದ್ ಉಲ್ ಫಿತ್ರ್(ರಂಜಾನ್) ಅನ್ನು ಶ್ರದ್ಧೆ, ಭಕ್ತಿ, ಸಂಭ್ರಮದಿಂದ ಆಚರಿಸಿದರು.

ತ್ಯಾಗ, ಶಾಂತಿಯ ಸಂಕೇತದ ಹಬ್ಬವನ್ನು ತಿಂಗಳ ಉಪವಾಸ ವ್ರತ ಅಂತ್ಯಗೊಳಿಸುವ ಮೂಲಕ ಭಕ್ತಿಯಿಂದ ಆಚರಿಸಿದರು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಗ್ರಾಮೀಣ ಭಾಗದಲ್ಲಿ ಮುಸ್ಲಿಂ ಬಾಂಧವರು ಬೆಳಗ್ಗೆ ತಮ್ಮ ಊರಿನ ಈದ್ಗಾ ಮೈದಾನಗಳಲ್ಲಿ ಸಮಾವೇಶಗೊಂಡು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹೊಸ ಧಿರಿಸಿನೊಂದಿಗೆ ಹಬ್ಬ ಸ್ವಾಗತಿಸಿದ ಮಂದಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಹರ್ಷ ವ್ಯಕ್ತಪಡಿಸಿದರು.

ನಗರ ಸೇರಿದಂತೆ ಕೆಲವೆಡೆ ಸಾಮೂಹಿಕ ಪ್ರಾರ್ಥನೆ ನಂತರ ಸಮುದಾಯದ ಎಲ್ಲರೂ ಒಟ್ಟುಗೂಡಿ ಮೆರವಣಿಗೆ ನಡೆಸಿದರು. ಸ್ಥಿತಿ ವಂತರು ತಮ್ಮ ಧರ್ಮದ ಬಡ ಮಂದಿಗೆ ಕೈಲಾದಷ್ಟು ದಾನ ಮಾಡಿದರಲ್ಲದೇ ಹಿರಿಯರಿಂದ ಆಶೀರ್ವಾದ ಪಡೆದರು.


ಜಿಲ್ಲಾ ಕೇಂದ್ರದಲ್ಲಿನ ಸೋಮವಾರಪೇಟೆ ಬಳಿ ಇರುವ ಈದ್ಗಾ ಹಾಗೂ ಪಾಲಿಟೆಕ್ನಿಕ್ ಕಾಲೇಜಿನ ಹಿಂಭಾಗದಲ್ಲಿರುವ ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ ಶ್ರದ್ಧಾ, ಭಕ್ತಿಯಿಂದ ನೆರವೇರಿತು. ಹಿಂದಿನ ಎರಡು ದಿನಗಳ ಹಿಂದೆಯೇ ಈದ್ಗಾವನ್ನು ಶುಚಿಗೊಳಿಸುವ ಕಾರ್ಯ ನಡೆದಿತ್ತು. ಎರಡು ಈದ್ಗಾದಲ್ಲೂ ಬೃಹತ್ ಗಾತ್ರದ ಶಾಮಿಯಾನ ಹಾಕಿಸಲಾಗಿತ್ತು. ಈದ್ಗಾಕ್ಕೆ ತೆರಳಲಾಗದವರು ಮಸೀದಿಯಲ್ಲೇ ಪ್ರಾರ್ಥನೆ ಸಲ್ಲಿಸುವ ಮೂಲಕ ಹಬ್ಬ ಆಚರಿಸಿದರು.

ಪುಟ್ಟ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಹೊಸ ಬಟ್ಟೆ ತೊಟ್ಟು ಕಂಗೊಳಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಹೆಂಗಳೆಯರು ಹಬ್ಬದ ದಿನವೂ ತಮಗಿಷ್ಟವಾದ ವಸ್ತುಗಳ ವ್ಯಾಪಾರ, ವಹಿವಾಟಿನಲ್ಲಿ ತೊಡಗಿದ್ದರು. ಜಿಲ್ಲಾ ಕೇಂದ್ರವಲ್ಲದೇ ಕೊಳ್ಳೇಗಾಲ, ಗುಂಡ್ಲುಪೇಟೆ, ಹನೂರು, ಯಳಂದೂರು ಸೇರಿದಂತೆ ಎಲ್ಲೆಡೆ ರಂಜಾನ್ ಆಚರಣೆ ಜೋರಾಗಿತ್ತು.

ಹಬ್ಬದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ನಗರ ಸೇರಿದಂತೆ ಜಿಲ್ಲೆಯ ಎಲ್ಲೆಡೆ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ನಿಯೋಜಿಸಿತ್ತು.

ಜಗತ್ತಿಗೆ ನೀರು ಕೊಟ್ಟವರು ಭಗೀರಥ ಉಪ್ಪಾರರು

ಮೇಗಲಹುಂಡಿ ಗ್ರಾಮದ 100ಕ್ಕೂ ಹೆಚ್ಚು ಯುವಕರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ



ಚಾಮರಾಜನಗರ, ಏ.22– ಭಗೀರಥ ಉಪ್ಪಾರ ಸಮಾಜದವರು ಜಗತ್ತಿಗೆ ನೀರು ಕೊಟ್ಟಂಥ ಬಂಧುಗಳು. ಬಹಳ ಕಷ್ಟದಲ್ಲಿ ಜೀವನ ನಡೆಸುತ್ತಿರುವ ತಮ್ಮೆಲ್ಲರ ಬದುಕು ಹಸನಗೊಳ್ಳಲು ಬಿಜೆಪಿಯನ್ನು ಬೆಂಬಲಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ತಿಳಿಸಿದರು.

ನಗರದ ನೂತನ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮೇಗಲಹುಂಡಿ, ನಲ್ಲೂರು, ಕೆಕೆಹುಂಡಿ, ಚಂದಕವಾಡಿ, ಭೋಗಾಪುರ, ನಂಜೇದೇವನಪುರ ಗ್ರಾಮಗಳ ನೂರಕ್ಕು ಹೆಚ್ಚು ಯುವಕರನ್ನು ಬಿಜೆಪಿಗೆ ಸೇರ್ಪಡೆ ಮಾಡಿಕೊಂಡು ಅವರು ಮಾತನಾಡಿದರು.

ಕ್ಷೇತ್ರ ಹಾಗೂ ತಮ್ಮ ಗ್ರಾಮಗಳ ಅಭಿವೃದ್ಧಿಯನ್ನು ಬಯಸಿ, ತಾವೆಲ್ಲರೂ ಬಿಜೆಪಿಗೆ ಸೇರ್ಪಡೆಯಾಗುತ್ತಿರುವುದು ನಮ್ಮ ಪುಣ್ಯ. ಕಳೆದ 15 ವರ್ಷ ಕಾಂಗ್ರೆಸ್‌ಗೆ ಅಧಿಕಾರ ಕೊಟ್ಟು ನೋಡಿದ್ದೀರಿ. ಯಾವುದೇ ಅಭಿವೃದ್ಧಿಯಾಗಿಲ್ಲ. ಒಂದು ಬಾರಿ ಬಿಜೆಪಿಗೆ ಮತ ಹಾಕಿ, ನಿಮ್ಮ ಒಂದು ಮತ ಕ್ಷೇತ್ರದ ಅಭಿವೃದ್ಧಿಯ ದಿಕ್ಕನ್ನು ಬದಲಾಯಿಸುತ್ತದೆ. ಎರಡು ವರ್ಷಗಳಲ್ಲಿ ನಿಮ್ಮ ನಿರೀಕ್ಷೆಗೂ ಮೀರಿ ಸೋಮಣ್ಣ ಅಭಿವೃದ್ಧಿ ಪಡಿಸುತ್ತಾನೆ ಈ ಬಾರಿ ನನಗೆ ಒಂದು ಮತ ಕೊಡಿ ಎಂದು ಮನವಿ ಮಾಡಿದರು.


ಉಪ್ಪಾರರು ಸ್ವಾಭಿಮಾನಿಗಳು, ಯಾರದೇ ತಂಟೆ ತಕರಾರಿಗೆ ಹೋಗುವುದಿಲ್ಲ. ಶ್ರಮ ಜೀವಿಗಳು, ಬೆಂಗಳೂರಿನ ಗೋವಿಂದರಾಜ ನಗರದಲ್ಲಿ ಬಹಳಷ್ಟು ಅಭಿವೃದ್ಧಿ ಮಾಡಿದ್ದೇನೆ. ಯಾವುದೇ ಜಾತಿ ಧರ್ಮ ಎಂದು ಭಿನ್ನ ಮಾಡುವ ವ್ಯಕ್ತಿ ನನ್ನಲ್ಲ. ಎಲ್ಲರು ಸಹ ನನಗೆ ಒಂದೇ, ಭಾರತೀಯರು ಎಂಬ ನೆಲಗಟ್ಟಿನಲ್ಲಿ ಹೋಗೋಣ. ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಾಕಾರಗೊಳಿಸಲು ಎಲ್ಲರು ಸಹ ಮತ್ತೆ ಬಿಜೆಪಿಯನ್ನು ಗೆಲ್ಲಿಸೋಣ ಎಂದರು.

ವರುಣಾ ಮತ್ತು ಚಾಮರಾಜನಗರ ಎರಡು ಕ್ಷೇತ್ರಗಳಲ್ಲಿ ಮತಯಾಚನೆ ಮಾಡಬೇಕಾಗಿದೆ ಈಗಾಗಿ ನಿಮ್ಮ ಗ್ರಾಮಗಳ ಪ್ರತಿ ಬೀದಿಗೂ ಬಂತು ಮತ ಹೇಳಬೇಕೆಂಬ ಆಸೆ ಇದೆ. ಕಾಲವಕಾಶ ಕಡಿಮೆಯಾಗಿರುವುದರಿಂದ ತಾವೆಲ್ಲರು ಸಹ ಪ್ರಚಾರ ಮಾಡಿ, ಕಮಲಕ್ಕೆ ಮತ ಹಾಕಿಸಬೇಕು. ಏ.10 ರವರೆಗೆ ತಾವೇ ಎಲ್ಲರು ಸೋಮಣ್ಣ ಆಗಬೇಕು. ಕಮಲದ ಗುರುತಿಗೆ ಮತ ಕೊಡಿಸಬೇಕು. ಏ.13ರ ನಂತರ ನಿಮ್ಮ ಗ್ರಾಮಗಳಿಗೆ ನಾನೇ ಭೇಟಿ ಕೊಡುತ್ತೇನೆ. ಅಭಿವೃದ್ಧಿ ಪಡಿಸೋಣ ಎಂದು ಸೋಮಣ್ಣ ಸಲಹೆ ನೀಡಿದರು.

ಮೇಗಲಹುಂಡಿ ಗ್ರಾಮದ ಮುಖಂಡರಾದ ಮಹದೇವಸ್ವಾಮಿ, ರಮೇಶ್, ಮಹದೇವಶೆಟ್ಟಿ ಸಿದ್ದಶೆಟ್ಟಿ ಮಂಜು, ಪ್ರಭು, ಲೋಕೇಶ್, ಮಹೇಶ್, ಮಯಣ್ಣ, ವಿಜಯ್, ಕುಮಾರ್, ಜಲೇಂದ್ರ ಬೀಶೆಟ್ಟಿ ಸಂಕೇಶ್, ಕಪ್, ಗಣೇಶ್, ಗಣೇಶ್, ಮಹೇಶ್, ಮಹದೇವಸ್ವಾಮಿ, ಕೃಷ್ಣ ಮಂಜು, ರವಿ, ಗಣಪತಿ ನಲ್ಲೂರು ರಾಘವೇಂದ್ರ, ಕೆಕೆಹುಂಡಿ ಪುಟ್ಟರಾಜು, ಮಹದೇವೇಗೌಡ, ಮಹದೇವಸ್ವಾಮಿ, ನಾಗರಾಜು, ಶಿವಪುರದ ಪುಟ್ಟಸ್ವಾಮಿ, ಪ್ರಭುಸ್ವಾಮಿ, ಬಸಪ್ಪ ನಪಾಳ್ಯ ಕುಮಾರ್, ಚಂದಕವಾಡಿ ಬಸವರಾಜಪ್ಪ ಅಮಚವಾಡಿ ಲಕ್ಷ್ಮೀಕಾಂತ್, ಭೋಗಾಪುರ ಮಾದಪ್ಪ ಸೇರಿದಂತೆ ನೂರಕ್ಕು ಹೆಚ್ಚು ಯುವಕರು ಬಿಜೆಪಿ ಸೇರ್ಪಡೆಯಾದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಪ್ರಭಾರಿ ಕೋಟೆ ಶಿವಣ್ಣ, ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಮುಖಂಡರಾದ ಎಂ.ರಾಮಚಂದ್ರು, ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಎಸ್. ಮಹದೇವಯ್ಯ, ಮಂಗಲ ಶಿವಕುಮಾರ್, ಆರ್.ಬಾಲರಾಜು, ಡಾ.ಎ.ಆರ್. ಬಾಬು, ಕೆ.ವೀರಭದ್ರಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ದಯಾನಿಧಿ, ಗೌಡಿಕೆ ಮಾದಪ್ಪ, ಮಾಜಿ ಗ್ರಾ.ಪಂ. ಪ್ರಕಾಶ್, ನಾಗರಾಜಮೂರ್ತಿ, ಮಾಜಿ ಅಧ್ಯಕ್ಷ ಬಸವಣ್ಣ, ಗ್ರಾಪಂ ಸದಸ್ಯ ಪಣ್ಯದಹುಂಡಿ ಸಂತೋಷ್, ಬಸವನಾಯಕ, ಮರಿಸ್ವಾಮಿ, ಪಟೇಲ್. ಎಸ್.ಪಿ. ಸ್ವಾಮಿ, ಶಿವಣ್ಣ, ಮಹದೇವ ನಾಯಕ ಮೊದಲಾದವರು ಇದ್ದರು.

ಇಂದು ಬಸವ ಜಯಂತಿ ಆಚರಣೆ



ಚಾಮರಾಜನಗರ, ಏ.22– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಸವ ಜಯಂತಿಯನ್ನು ಏ.23ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಸರಳವಾಗಿ ಹಾಗೂ ಸಾಂಕೇತಿಕವಾಗಿ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಗುರುಲಿಂಗಯ್ಯ, ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಡಿಎಸ್ ಮುಖಂಡನ ಕಾರಿಗೆ ಬೆಂಕಿ

ಕೊಳ್ಳೇಗಾಲ, ಏ.22– ಕಿಡಿಗೇಡಿಗಳ ಕೃತ್ಯಕ್ಕೆ ಜಮೀನಿನ ಶೆಡ್‌ನಲ್ಲಿ ನಿಲ್ಲಿಸಿದ್ದ ಜೆಡಿಎಸ್ ಮುಖಂಡರೊಬ್ಬರ ಕಾರೊಂದು ಬೆಂಕಿಗೆ ಆಹುತಿಯಾಗಿರುವ ಘಟನೆ ಗ್ರಾಮಾಂತರ ಠಾಣಾ ವ್ಯಾಪ್ತಿಯ ತೆಳ್ಳನೂರು ಗ್ರಾಮದಲ್ಲಿ ವರದಿಯಾಗಿದೆ.




ತಾಲೂಕಿನ ತೆಳ್ಳನೂರು, ಗ್ರಾಪಂನ ಅಧ್ಯಕ್ಷೆ ಲೀಲಾವತಿ ಅವರ ಪತಿ ರಮೇಶ್ ಕಾರು ಸುಟ್ಟು ಹೋಗಿದೆ. ಕಾರು (ಕೆಎ–09, ಎಂಸಿ 4948) ತೆಳ್ಳನೂರಿನಲ್ಲಿರುವ ರಮೇಶ್ ಅವರ ಜಮೀನಿನ ಶೆಡ್‌ನಲ್ಲಿ ನಿಲ್ಲಿಸಲಾಗಿತ್ತು. ಕಳೆದ ರಾತ್ರಿ ಯಾರೋ ದುಷ್ಕರ್ಮಿಗಳ ಸುಟ್ಟು ಹಾಕಿದ್ದು ಕ್ರಮವಹಿಸಿ ಎಂದು ರಮೇಶ್ ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದಾರೆ. ರಾಜಕೀಯ ವೈಷಮ್ಯಕ್ಕೆ ಈ ಕೃತ್ಯ ನಡೆದಿರಬಹುದೆಂದು ಹೇಳಲಾಗಿದೆ.

ಮಹೇಶ್ ಗೆಲುವಿಗೆ ತಂತ್ರಗಾರಿಕೆ ಅನುಸರಿಸೋಣ

ಏನೇ ಸಮಸ್ಯೆ, ನ್ಯೂನ್ಯತೆಗಳಿದ್ದರೂ ನಮ್ಮ ದೃಷ್ಟಿ ಬಿಜೆಪಿ ಗೆಲ್ಲಿಸುವತ್ತ ಮಾತ್ರ ಇರಬೇಕು

ಕೊಳ್ಳೇಗಾಲ, ಏ.22–ಶಾಸಕ ಮಹೇಶ್ ಗೆಲ್ಲಿಸಲು ಏನೆಲ್ಲಾ ತಂತ್ರಗಾರಿಕೆ ಅನುಸರಿಸಬೇಕು ಎಂಬುದು ನಮ್ಮೆಲ್ಲರ ಗುರಿಯಾಗಬೇಕು, ನಾಳೆಯಿಂದಲೇ ಪ್ರತಿಯೊಂದು ಗ್ರಾಮದಲ್ಲೂ ಪಕ್ಷದ ಮುಖಂಡರನ್ನು ಬೇಟಿಯಾಗಿ ಅವರೊಡನೆ ಚರ್ಚಿಸಿ ಶಾಸಕ ಮಹೇಶ್ ಅವರನ್ನು ಎರಡನೇ ಬಾರಿಗೆ ಗೆಲ್ಲಿಸಲು ಮುಂದಾಗಬೇಕು, ನಮಗೆ ಹಿನ್ನಡೆ ಉಂಟುಮಾಡುವ ಯಾವುದೇ ಶಕ್ತಿ ಇದ್ದರೂ ಅದನ್ನು ಧಮನ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಮುಂದಾಗೋಣ ಎಂದು ಮಾಜಿ ಶಾಸಕ, ಬಿಜೆಪಿ ಮುಖಂಡ ಬಾಲರಾಜು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನಮ್ಮೆಲ್ಲರ ಹೋರಾಟ ಮಹೇಶ್ ಅವರಿಗೆ ಗೆಲುವಾಗಬೇಕು, ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಲು ಮಹೇಶ್ ಅವರ ಬೆನ್ನುಲುಬಾಗಿ ದುಡಿಯೋಣ ಎಂದರು. ಬಿಜೆಪಿ ಸದೃಡ ಪಕ್ಷ, ನಮ್ಮೆಲ್ಲರ ದೃಷ್ಟಿ ಮತ್ತು ಗುರಿ ಗೆಲ್ಲುವತ್ತ ಮಾತ್ರ ಅದಕ್ಕಾಗಿಯೇ ನಮ್ಮ ಹೋರಾಟ. ಪಕ್ಷ ಬಲವರ್ಧನೆ ನಿಟ್ಟಿನಲ್ಲಿ ಏನೇ ನ್ಯೂನ್ಯತೆಗಳಿದ್ದರೆ ಚರ್ಚೆ ಮಾಡಿ ಬಗೆಹರಿಸಿಕೊಳ್ಳಬೇಕು. ಇಲ್ಲಿ ಪಕ್ಷದ ಚಿನ್ಹೆಯ ನಮಗೆ ಮುಖ್ಯವಾಗಬೇಕು ಎಂದರು.



ಬಿಜೆಪಿಗೆ ನಾನೇ ಹೊಸಬ, ಮಾಜಿ ಶಾಸಕ ಎಸ್.ಬಾಲರಾಜು ಅವರೇ ನನಗಿಂತ ಹಳಬರು. ಅವರು ಪಕ್ಷ ಸೇರ್ಪಡೆಯಿಂದಾಗಿ ಕೊಳ್ಳೇಗಾಲ ಮಾತ್ರವಲ್ಲ ಇಡೀ ಜಿಲ್ಲೆ ಮತ್ತು ಮೈಸೂರು ಭಾಗದಲ್ಲೂ ಬಿಜೆಪಿಗೆ ದೊಡ್ಡ ಶಕ್ತಿ ಬಂದಂತಾಗಿದೆ, ಪಕ್ಷದಲ್ಲಿ ಮುಂದಿನ ದಿನಗಳಲ್ಲಿ ಎಲ್ಲರೂ ಹೊಂದಾಣಿಕೆ ಮಾಡಿಕೊಂಡು ಪಕ್ಷದ ಕೆಲಸ ಮಾಡುವ ಹಾಗೂ ಅತ್ಯಧಿಕ ಮತಗಳಿಂದ ಗೆಲ್ಲುವ ಕೆಲಸವನ್ನು ಎಲ್ಲರೂ ಮಾಡಬೇಕಿದೆ.
–ಎನ್. ಮಹೇಶ್, ಶಾಸಕ, ಬಿಜೆಪಿ ಅಭ್ಯರ್ಥಿ

ಈ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಎನ್.ಮಹೇಶ್, ಚಲನಚಿತ್ರ ನಿರ್ದೇಶಕ ಎಸ್.ಮಹೇಂದರ್ ಮಂಡಲ ಅಧ್ಯಕ್ಷ ರಮೇಶ್ ಮುರಾರಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಲೋಕೇಶ್, ಯಳಂದೂರು ಮಂಡಲ ಅಧ್ಯಕ್ಷ ಮಹೇಶ್, ಕುದೇರು ಹಾಲು ಒಕ್ಕೂಟದ ಅಧ್ಯಕ್ಷ ನಾಗೇಂದ್ರ, ತಮಿಳುನಾಡು ಉಸ್ತುವಾರಿ ದೊರೈ, ಜಿಲ್ಲಾ ವಕ್ತಾರ ಬಸವರಾಜಪ್ಪ ಜಿಲ್ಲಾ ಉಪಾಧ್ಯಕ್ಷ ಚಿಂತು ಪರಮೇಶ್, ಜಕಾವುಲ್ಲಾ, ಕೆ.ಕೆ.ಮೂರ್ತಿ, ಅಣಗಳ್ಳಿ ಬಸವರಾಜು, ಪಿ.ಎನ್. ಶಿವಕುಮಾರ, ರವೀಶ್ ಇನ್ನಿತರರು ಇದ್ದರು

ಮತ ಎಣಿಕೆ ಕೇಂದ್ರಕ್ಕೆ ವೀಕ್ಷಕರ ಭೇಟಿ, ಸಿದ್ಧತೆ ಪರಿಶೀಲನೆ

ಚಾಮರಾಜನಗರ, ಏ.22– ವಿಧಾನ ಸಭಾ ಚುನಾವಣೆಗೆ ಜಿಲ್ಲೆಗೆ ನೇಮಕವಾಗಿರುವ ಚುನಾವಣಾ ವೀಕ್ಷಕರು ನಗರದ ಹೊರ ವಲಯದಲ್ಲಿರುವ ಮತ ಎಣಿಕೆ ಕೇಂದ್ರವಾದ ಬೇಡರಪುರ ಬಳಿಯ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದರು.

ಚಾಮರಾಜನಗರ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ಅಭಿನವ್ ಚಂದ್ರ ಹಾಗೂ ಕೊಳ್ಳೇಗಾಲ, ಹನೂರು ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ಭೂಪೇಂದ್ರ.ಎಸ್. ಚೌಧರಿ ಹಾಗೂ ಚಾಮರಾಜನಗರ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ವೆಚ್ಚ ವೀಕ್ಷಕರಾದ ಹಿಮಾಮ್ಷು ಪಿ. ಜೋಷಿ, ಕೊಳ್ಳೇಗಾಲ, ಹನೂರು ವಿಧಾನಸಭಾ ಕ್ಷೇತ್ರದ ವೆಚ್ಚ ವೀಕ್ಷಕರಾದ ಅನಿಲ್ ಗಾಂಧಿ ಮತ್ತು ಪೊಲೀಸ್ ವೀಕ್ಷಕರಾದ ಠಾಕೂರ್ ಥಾಪ ಅವರು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ ಅವರೊಂದಿಗೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ಕೊಟ್ಟು ಮತ ಎಣಿಕೆ ಸಿದ್ದತೆಗೆ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಸೂಚನೆ ನೀಡಿದರು.

ತಹಶೀಲ್ದಾರ್ ಬಸವರಾಜು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ವಿನಯ್‌ಕುಮಾರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆರ್.ಸಿ. ಕೆಂಪರಾಜು ಇತರೆ ಅಧಿಕಾರಿಗಳು ಹಾಜರಿದ್ದರು.

ಇದಕ್ಕೂ ಮೊದಲು ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತಗಟ್ಟೆ ಸಿಬ್ಬಂದಿ ನಿಯೋಜನೆ ಸಂಬಂಧ ಎರಡನೇ ಹಂತದ ರ್‍ಯಾಂಡಮೈಜೇಶನ್ ಪ್ರಕ್ರಿಯೆಯು ಜಿಲ್ಲಾ ವೀಕ್ಷಕರ ಸಮ್ಮುಖದಲ್ಲಿ ನೆರವೇರಿತು.

ಮೈಸೂರು ಮಿತ್ರ ಭಾನುವಾರ 23 ಏಪ್ರಿಲ್ 2023

ಒಂದನೇ ಪುಟದಿಂದ

ಹೊಸ ಮುಖಗಳಿಗೆ ಅವಕಾಶ

ಹೊಸ ಪ್ರಯೋಗ ಮಾಡಿ, ವೈದ್ಯರು, ಇಂಜಿನಿಯರ್, ಐಎಎಸ್, ಐಪಿಎಸ್ ಹಾಗೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಗುರುತಿಸಿ, ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ನೀಡಿದ್ದಾರೆ. ದೇಶದ ಬೆಳವಣಿಗೆಯಲ್ಲಿ ಕರ್ನಾಟಕ ತನ್ನದೇ ಕೊಡುಗೆ ನೀಡುತ್ತಿದೆ. ಜಿಎಸ್‌ಟಿ ನೀಡಿಕೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ. ಹಾಗಾಗಿ ಈ ಚುನಾವಣೆ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಚುನಾವಣೆಯಲ್ಲಿ ಈಗಾಗಲೇ ಉತ್ತರ ಪ್ರದೇಶ, ಗುಜರಾತ್ ಸೇರಿದಂತೆ ಬೇರೆ ರಾಜ್ಯಗಳಲ್ಲಿ ಹೊಸ ಪ್ರಯೋಗ ಮಾಡಲಾಗಿತ್ತು. ನಮ್ಮ ರಾಜ್ಯದಲ್ಲೂ ಭವಿಷ್ಯದ ದೃಷ್ಟಿಯಿಂದ ಹೊಸ ಪ್ರಯೋಗ ಮಾಡಿ, ಯುವಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಕಾಂಗ್ರೆಸ್ ಗೆಲ್ಲಲ್ಲ: ಕಾಂಗ್ರೆಸ್ ದೇಶದಲ್ಲಿ ದಿವಾಳಿಯಾಗಿದೆ. ಅದಕ್ಕಾಗಿ ಹೇಗಾದರೂ ಕರ್ನಾಟಕದಲ್ಲಿ ಅಧಿಕಾರ ಹಿಡಿಯಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ. ದೆಹಲಿ ವರಿಷ್ಠರಿಗೆ ಕರ್ನಾಟಕವನ್ನು ಎಟಿಎಂ ಮಾಡಿಕೊಟ್ಟು, ಅವರಿಗೆ ಆರ್ಥಿಕ ಶಕ್ತಿ ನೀಡುವ ಪಿತೂರಿಯನ್ನು ರಾಜ್ಯ ಕಾಂಗ್ರೆಸ್ ನಡೆಸುತ್ತಿದೆ. ರಾಜ್ಯದ ಜನರು ಇದಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಅತಂತ್ರದ ನಿರೀಕ್ಷೆ ಜೆಡಿಎಸ್‌ನದ್ದು: ಜೆಡಿಎಸ್‌ನವರು ರಾಜ್ಯದಲ್ಲಿ ಅತಂತ್ರ ವಿಧಾನಸಭೆ ಬಂದರೆ ಮಾತ್ರ ನಮಗೆ ಭವಿಷ್ಯವಿದೆ ಎಂದು ಕನಸು ಕಾಣುತ್ತಿದ್ದಾರೆ. ಇದಕ್ಕೆ ರಾಜ್ಯದ ಜನರು ಅವಕಾಶವನ್ನು ನೀಡಬಾರದು. ಡಬಲ್ ಎಂಜಿನ್ ಬಿಜೆಪಿ ಸರ್ಕಾರವನ್ನು ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ತರಬೇಕೆಂದು ಜನರು ತೀರ್ಮಾನ ಮಾಡಿದ್ದಾರೆ. 150ಕ್ಕೂ ಸ್ಥಾನ ಗಳಿಸಿ ಬಿಜೆಪಿ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದು ತಿಳಿಸಿದರು.

ಯಡಿಯೂರಪ್ಪ ಒಂದು ಶಕ್ತಿ: ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಒಂದು ಶಕ್ತಿಯಾಗಿದ್ದಾರೆ. ಅವರ ರಾಜಕೀಯ ಶಕ್ತಿ, ವರ್ಚಸ್ಸು ಕುಗ್ಗಿಲ್ಲ. ಸಿಎಂ ಸ್ಥಾನದಿಂದ ಕೆಳಗಿಳಿದ ಮೇಲೆ ವರ್ಚಸ್ಸು, ಶಕ್ತಿ ಇನ್ನೂ ಹೆಚ್ಚಿದೆ. ಅವರು ರಾಜ್ಯಪಾಲರಾಗಬೇಕು, ತಮ್ಮ ಮಗ ಮುಖ್ಯಮಂತ್ರಿ ಆಗಬೇಕೆಂಬ ಕನಸನ್ನು ಕಂಡಿಲ್ಲ. ರಾಜ್ಯದಲ್ಲಿ ಸಂಪೂರ್ಣ ಬಹುಮತದೊಂದಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂಬುದೇ ಅವರ ಗುರಿ, ಸಂಕಲ್ಪ, ಕನಸಾಗಿದೆ. ಅದಕ್ಕಾಗಿ ಶ್ರಮಿಸುತ್ತಿದ್ದಾರೆ. ಯಡಿಯೂರಪ್ಪನವರನ್ನು ರಾಜಕೀಯವಾಗಿ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.ಈ ಬಾರಿ ಚುನಾವಣೆಯಲ್ಲಿ ಬಿಜೆಪಿ ಸಾಮೂಹಿಕ ನಾಯಕತ್ವದಲ್ಲಿ ನಡೆಯುತ್ತಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮುಂದಿನ ಸಿಎಂ ಯಾರಾಗಬೇಕೆಂಬುದನ್ನು ಶಾಸಕರ ಅಭಿಪ್ರಾಯ ಪಡೆದು ವರಿಷ್ಠರು ತೀರ್ಮಾನ ಮಾಡುತ್ತಾರೆ ಎಂದು ತಿಳಿಸಿದರು.

ಕಾಂಗ್ರೆಸ್‌ನವರಿಗೆ ನೈತಿಕತೆ ಇಲ್ಲ: ವೀರಶೈವ-ಲಿಂಗಾಯತ ಸಮುದಾಯದ ಬಗ್ಗೆ ಅನುಕಂಪದ ಮಾತುಗಳನ್ನು ಕಾಂಗ್ರೆಸ್ ನಾಯಕರು ಆಡುತ್ತಿದ್ದಾರೆ. ವೀರಶೈವ ಲಿಂಗಾಯತ ಧರ್ಮವನ್ನು ಕಾಂಗ್ರೆಸ್ ಸರ್ಕಾರ ಹೊಡೆಯಲು ಪ್ರಯತ್ನ ಮಾಡಿತ್ತು. ಕಾಂಗ್ರೆಸ್‌ನವರಿಗೆ ವೀರಶೈವ ಲಿಂಗಾಯತ ಸಮಾಜದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರುವುದರಿಂದ, ಉತ್ತರ ಕರ್ನಾಟಕದಲ್ಲಿ ಬಿಜೆಪಿಗೆ ನಕರಾತ್ಮಕ ಪರಿಣಾಮ ಬೀರುವುದಿಲ್ಲ. ಅದು ಮೇ 13 ರಂದು ಚುನಾವಣೆ ಫಲಿತಾಂಶ ಗೊತ್ತಾಗುತ್ತದೆ. ಜಗದೀಶ್ ಶೆಟ್ಟರ್ ಅವರ ಕಥೆ ಏನಾಯ್ತು ಎಂಬುದು ತಿಳಿಯಲಿದೆ ಎಂದರು.

ಶಿಕಾರಿಪುರ ಬಿಜೆಪಿ ಭದ್ರಕೋಟೆ: ಶಿಕಾರಿಪುರ ಬಿ.ಎಸ್.ಯಡಿಯೂರಪ್ಪರವರನ್ನು ಸತತವಾಗಿ ಗೆಲ್ಲಿಸಿಕೊಂಡು ಬಂದಿದೆ. ಕ್ಷೇತ್ರದಲ್ಲಿ ನಾನು ಅಭ್ಯರ್ಥಿಯಾಗಬೇಕೆಂದು ಯಡಿಯೂರಪ್ಪ ತೀರ್ಮಾನ ಮಾಡಿದಲ್ಲ. ಕಾರ್ಯಕರ್ತರು ತೀರ್ಮಾನ ಮಾಡಿದ್ದು. ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಪಕ್ಷದ ವರಿಷ್ಠರು ನನ್ನನ್ನು ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿದ್ದಾರೆ. ಹಾಗಾಗಿ ಈ ಬಾರಿ ಮತಗಳ ಅಂತರದಿಂದ ಅಲ್ಲಿ ಗೆದ್ದು ಬರುತ್ತೇನೆ. ಶಿಕಾರಿಪುರ ಈಗ ಭದ್ರಕೋಟೆಯಾಗಿರುವುದು ನಾನು ಗೆದ್ದ ಬಳಿಕ ಸುಭದ್ರ ಕೋಟೆಯಾಗಿ ಪರಿವರ್ತನೆಯಾಗಲಿದೆ ಎಂದು ಹೇಳಿದರು.

ಯಡಿಯೂರಪ್ಪ, ಸಿದ್ದರಾಮಯ್ಯ ನಡುವೆ ಒಳ ಒಪ್ಪಂದ ಆಗಿಲ್ಲ

ಮೈಸೂರು,ಏ.22 (ಎಂಟಿವೈ)- ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ಯಾವುದೇ ಒಳ ಒಪ್ಪಂದ ನಡೆದಿಲ್ಲ. ಅಂತಹ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳುವ ಅಗತ್ಯತೆ ಯಡಿಯೂರಪ್ಪರಿಗೆ ಇಲ್ಲ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದರು.

ಮೈಸೂರಲ್ಲಿ ಶನಿವಾರ ಸುದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರುಣ ಹಾಗೂ ಶಿಕಾರಿಪುರ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ ನಡುವೆ ಯಾವುದೇ ಆಂತರಿಕ ಒಪ್ಪಂದ ನಡೆದಿಲ್ಲ. ಯಡಿಯೂರಪ್ಪನವರೇ ಒಂದು ಮಹಾ ಶಕ್ತಿ, ಅಗ್ರ ನಾಯಕ. ಹಾಗಾಗಿ ಅವರು ಬೇರೆ ಯಾರೊಂದಿಗೂ ಒಳ ಒಪ್ಪಂದ ಮಾಡಿಕೊಳ್ಳುವ ಅಗತ್ಯತೆ ಉದ್ಭವಿಸುವುದಿಲ್ಲ. ರಾಜ್ಯದಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಶಕ್ತಿ ಅವರಿಗೆ ಇದೆ. ಈ ಹಿಂದೆ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟವೇ ಶಿವಮೊಗ್ಗಕ್ಕೆ ಬಂದು ಕೂತಿತ್ತು. ಚುನಾವಣೆಯಲ್ಲಿ ಪ್ರಚಾರ ಮಾಡಿದರೂ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ ರಾಘವೇಂದ್ರ ಗೆಲುವು ಸಾಧಿಸಿದರು. ಈಗ ದಿವಾಳಿ ಪರಿಸ್ಥಿತಿಯಲ್ಲಿರುವ ಕಾಂಗ್ರೆಸ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅಗತ್ಯ ಏನಿದೆ ಎಂದು ಪ್ರಶ್ನಿಸಿದರು.

ವರುಣದಲ್ಲಿ ಗೆಲುವು ಖಚಿತ: ವರುಣ ಕ್ಷೇತ್ರದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಬದಲಾವಣೆ ಗಾಳಿ ಬೀಸುತ್ತಿದ್ದು, ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಗೆಲುವು ಸಾಧಿಸಲಿದ್ದಾರೆ. ವರುಣ ಕ್ಷೇತ್ರ ನನ್ನನ್ನು ರಾಜ್ಯಕ್ಕೆ ಪರಿಚಯಿಸಿಕೊಟ್ಟಿದೆ. ಹಾಗಾಗಿ ಕ್ಷೇತ್ರದ ಋಣ ನನ್ನ ಮೇಲಿದೆ. ಈ ಕ್ಷೇತ್ರದ ಜನರ ಪ್ರೀತಿಗೆ ನಾನು ತುಂಬಾ ಆಭಾರಿಯಾಗಿದ್ದಾನೆ. ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಲಿದ್ದೇನೆ ಎಂದು ಹೇಳಿದರು.

ವರುಣ ಕ್ಷೇತ್ರದಲ್ಲಿ ಪ್ರವಾಸ ಮಾಡಿ, ಚುನಾವಣಾ ಪ್ರಚಾರ ನಡೆಸಿದ್ದೇನೆ. ಮತಪ್ರಚಾರ ಮಾಡಿದ್ದೇನೆ. ಮುಂದೆಯೂ ಈ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಲು ಬರುತ್ತೇನೆ. ಹಳೇ ಮೈಸೂರು ಭಾಗದಲ್ಲಿ ಬಿಜೆಪಿಯನ್ನು ಪ್ರಬಲವಾಗಿ ಸಂಘಟನೆ ಮಾಡಿ, ಚುನಾವಣೆಗಳಲ್ಲಿ ಅತಿ ಹೆಚ್ಚು ಸ್ಥಾನವನ್ನು ಗೆಲ್ಲಿಸುತ್ತೇನೆ ಎಂದು ಹೇಳಿದರು. ಮೈಸೂರಿನ ಕೆಆರ್ ಕ್ಷೇತ್ರದಲ್ಲಿ ಕೂಡ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಗೆಲ್ಲಲಿದ್ದಾರೆ. ಶಾಸಕ ಎಸ್.ಎ.ರಾಮ ದಾಸ್ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಎಲ್ಲರೂ ಒಗ್ಗಟ್ಟಾಗಿ, ಬಿಜೆಪಿ ಅಭ್ಯರ್ಥಿಯ ಗೆಲುವಿಗಾಗಿ ಶ್ರಮಿಸಲಿದ್ದಾರೆ. ಈ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡುತ್ತೇವೆ ಅಭ್ಯರ್ಥಿಯನ್ನು ಗೆಲ್ಲಿಸಿ ಕೊಳ್ಳುತ್ತೇವೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್. ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ರಾಜ್ಯ ಉಪಾಧ್ಯಕ್ಷ ಎಂ. ರಾಜೇಂದ್ರ, ಮೈಸೂರು ನಗರ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್, ವಕ್ತಾರರಾದ ಡಾ.ಕೆ.ವಸಂತ್‌ಕುಮಾರ್, ಎಂ.ಎ.ಮೋಹನ್, ಮಾಧ್ಯಮ ಸಂಯೋಜಕ ನಾಗೇಶ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಕೇಬಲ್ ಮಹೇಶ್ ಇದ್ದರು.

ಅಪ್ಪಳಿಸಿದ ಆಲ್ಟೋ ಕಾರು: ಐವರ ಸಾವು

ಈ ಅವಘಡದಲ್ಲಿ ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲವಾದರೂ, ಬಸ್‌ನಲ್ಲಿದ್ದ ಬಟ್ಟೆ-ಬರೆ ಹಾಗೂ ಚಿನ್ನಾಭರಣ ಅಗ್ನಿಗಾಹುತಿಯಾಗಿದೆ. ಮೈಸೂರಿನಲ್ಲಿ ನಡೆಯುತ್ತಿದ್ದ ಮದುವೆ ಸಮಾರಂಭಕ್ಕಾಗಿ ವರನ ಕಡೆಯ ಬಂಧುಗಳು ಈ ಬಸ್‌ನಲ್ಲಿ ಬರುತ್ತಿದ್ದರು. ಇದ್ದಕ್ಕಿದ್ದಂತೆ ಹೊಗೆ ಕಾಣಿಸಿಕೊಂಡಿದ್ದು, ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದವರು ಬಸ್ ಪ್ರಯಾಣಿಕರನ್ನು ಎಚ್ಚರಿಸಿದ ಕಾರಣ ತಕ್ಷಣವೇ ಪ್ರಯಾಣಿಕರು ಅದನ್ನು ಚಾಲಕನ ಗಮನಕ್ಕೆ ತಂದಿದ್ದಾರೆ. ಬಸ್ ನಿಲ್ಲುತ್ತಿದ್ದಂತೆಯೇ ಎಲ್ಲರೂ ತಕ್ಷಣ ಕೆಳಗಿಳಿದರಾದರೂ, ಬಸ್‌ನ ಡಿಕ್ಕಿಯಲ್ಲಿದ್ದ ಸಾಮಾನು ಸರಂಜಾಮುಗಳನ್ನು ತೆಗೆದುಕೊಳ್ಳುವಷ್ಟರಲ್ಲಿ ಡೀಸೆಲ್ ಟ್ಯಾಂಕ್‌ಗೆ ಬೆಂಕಿ ತಗುಲಿ ಜ್ವಾಲೆ ಬಸ್ ಆವರಿಸಿದೆ. ವಿಷಯ ತಿಳಿದು ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕಾಗಮಿಸುವಷ್ಟರಲ್ಲಿ ಬಸ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಅಗ್ನಿಶಾಮಕ ದಳ ಸಿಬ್ಬಂದಿ ಅಳಿದುಳಿದ ಬೆಂಕಿಯನ್ನು ನಂದಿಸಿದರು. ಇದರ ಪರಿಣಾಮ ಎಕ್ಸ್‌ಪ್ರೆಸ್ ವೇನಲ್ಲಿ ಕೆಲ ಕಾಲ ವಾಹನ ಸಂಚಾರ ಬಂದ್ ಮಾಡಲಾಗಿತ್ತು. ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಒಂದೇ ಕುಟುಂಬದ ಐವರು ಸಾವು: ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ವಿಭಜಕ ಹಾರಿ ಎದುರಿಗೆ ಬರುತ್ತಿದ್ದ ಮತ್ತೊಂದು ಕಾರಿಗೆ ಅಪ್ಪಳಿಸಿದ ಪರಿಣಾಮ ಒಂದೇ ಕುಟುಂಬದ ಐವರು ಸಾವನ್ನಪ್ಪಿದ ಘಟನೆ ಎಕ್ಸ್‌ಪ್ರೆಸ್ ವೇನ ರಾಮನಗರ-ಚನ್ನಪಟ್ಟಣ ಬೈಪಾಸ್‌ನಲ್ಲಿ ನಡೆದಿದೆ. ಈ ಅಪಘಾತದಲ್ಲಿ ಬೆಂಗಳೂರಿನ ಕೆಂಗೇರಿ ಸಮೀಪದ ಚೈತನ್ಯನಗರ ನಿವಾಸಿಗಳಾದ ರವಿ ಪೂಜಾರ್(46), ಅವರ ಪತ್ನಿ ಲಕ್ಷ್ಮೀ ಪೂಜಾರ್(40), ಮಕ್ಕಳಾದ ಇಂಚರ ಪೂಜಾರ್(15), ಶಾಂತಲಾ ಪೂಜಾರ್(8) ಮತ್ತು ಸಿರಿ ಪೂಜಾರ್(2) ಮೃತಪಟ್ಟಿದ್ದಾರೆ.

ಮೂಲತಃ ಕೆ.ಆರ್.ಪೇಟೆಯವರಾಗಿದ್ದು, ಕೆಂಗೇರಿಯಲ್ಲಿ ವಾಸವಿರುವ ರವಿ ಪೂಜಾರ್ ಅವರು ಕುಟುಂಬ ಸಮೇತರಾಗಿ ಆಲ್ಟೋ ಕಾರಿನಲ್ಲಿ ಹುಣಸೂರಿನ ಸ್ನೇಹಿತರ ಕುಟುಂಬದ ಕಾರ್ಯಕ್ರಮಕ್ಕಾಗಿ ಬರುತ್ತಿದ್ದರು. ರಾಮನಗರ-ಚನ್ನಪಟ್ಟಣ ಬೈಪಾಸ್‌ನಲ್ಲಿ ಇವರು ಚಾಲನೆ ಮಾಡುತ್ತಿದ್ದ ಕಾರು ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಹಾರಿ ಎದುರಿನ ರಸ್ತೆಯಲ್ಲಿ ಬರುತ್ತಿದ್ದ ಇನ್ನೋವಾ ಕಾರಿಗೆ ಅಪ್ಪಳಿಸಿದೆ. ಇದರ ಪರಿಣಾಮ ರವಿ, ಇಂಚರ ಮತ್ತು ಸಿರಿ ಸ್ಥಳದಲ್ಲೇ ಸಾವನ್ನಪ್ಪಿದರೆ, ಲಕ್ಷ್ಮೀ ಮತ್ತು ಶಾಂತಲಾ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಆಲ್ಟೋ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಇನ್ನೋವಾ ಕಾರಿನ ಮುಂಭಾಗ ಜಖಂಗೊಂಡಿದೆ. ಅದೃಷ್ಟವಶಾತ್ ಇನ್ನೋವಾ ಕಾರಿನಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಚನ್ನಪಟ್ಟಣ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವರುಣ: ಸಿದ್ದರಾಮಯ್ಯ ಅಬ್ಬರದ ಪ್ರಚಾರ, ಪುತ್ರ ಡಾ.ಯತೀಂದ್ರ ಸಾಥ್

● ಹೆಲಿಕಾಪ್ಟರ್ ನೋಡಲು ಸುತ್ತುವರಿದ ಜನ ● ಕಾರ್ಯ ಸಿದ್ದೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ● ಮುಂದಿನ ಸಿಎಂ ಸಿದ್ದರಾಮಯ್ಯ ಎಂದು ಘೋಷಣೆ





ಮೈಸೂರು, ಏ. 22(ಎಂಟಿವೈ)-ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ, ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುವಂತೆ ಮನವಿ ಮಾಡಿದರು.

ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿರುವ ವರುಣ ಕ್ಷೇತ್ರದಲ್ಲಿ ರಾಜಕೀಯ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಶನಿವಾರ ದಿನವಿಡೀ ಅಬ್ಬರದ ಪ್ರಚಾರ ನಡೆಸಿ ಮತಯಾಚಿಸಿದರು.

ಮತಯಾಚಿಸಲು ಬೆಂಗಳೂರಿನಿಂದ ಸುತ್ತೂರು ಹೆಲಿಪ್ಯಾಡ್‌ಗೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಮಾಜಿ ಸಿಎಂ ಸಿದ್ದರಾಮಯ್ಯ, ವರುಣ ಕ್ಷೇತ್ರದ ಕಾರೇಪುರ, ಹಾಡ್ಯ, ಬಾಣೂರು, ಚಿನ್ನಂಬಳ್ಳಿ, ತಗಡೂರು, ವರಹಳ್ಳಿ, ಚುಂಚನಹಳ್ಳಿ, ಹನುಮನಪುರ, ದಾಸನೂರು, ಕಾರೆಮೋಳೆ, ತೊರವಳ್ಳಿ, ತೊರವಳ್ಳಿ ಮೋಳೆ, ಚಿಕ್ಕಹೊಮ್ಮಾ ಮೋಳೆ, ಅಂಕುಶರಾಯನಪುರ, ಚಿಕ್ಕ ಹೊಮ್ಮ, ದೊಡ್ಡ ಹೊಮ್ಮ ಹಾಗೂ ಅವತಾಳಪುರದಲ್ಲಿ ಪ್ರಚಾರ ನಡೆಸಿದರು. ನಾಮಪತ್ರ ಸಲ್ಲಿಸಿದ ಬಳಿಕ ಕ್ಷೇತ್ರಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಕಾರ್ಯಕರ್ತರು, ಹಿತೈಷಿಗಳು ಹಾಗೂ ಗ್ರಾಮಸ್ಥರಿಂದ ಅದ್ದೂರಿ ಸ್ವಾಗತ ದೊರೆಯಿತು. ತೆರೆದ ವಾಹನದಲ್ಲಿ ಸಾಗುವ ಮೂಲಕ ಬಿರುಸಿನಿಂದ ಮತಯಾಚಿಸಿದರು.

ಹೆಲಿಕಾಪ್ಟರ್ ಬಳಿಯೇ ನುಗ್ಗಿದ ಜನ: ಸುತ್ತೂರು ಗ್ರಾಮದಲ್ಲಿರುವ ಹೆಲಿಪ್ಯಾಡ್‌ಗೆ ಸಿದ್ದರಾಮಯ್ಯ ಆಗಮಿಸಿದಾಗ ಭದ್ರತಾ ಲೋಪ ಕಂಡು ಬಂತು. ಅವರನ್ನು ನೋಡಲು ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರು ಮುಗಿಬಿದ್ದರು. ಹೆಲಿಕಾಪ್ಟರ್ ಲ್ಯಾಂಡ್ ಆಗುತ್ತಿದ್ದಂತೆಯೇ ಅದರ ಸಮೀಪಕ್ಕೆ ಜನ ನುಗ್ಗಿದರು. ರೆಕ್ಕೆಗಳು ಬೀಸುತ್ತಿದ್ದರೂ ಲೆಕ್ಕಿಸದ ಜನರು ಅವರನ್ನು ಸುತ್ತುವರಿದರು. ಆಗ ಜನರನ್ನು ನಿಯಂತ್ರಿಸಲು ಪೊಲೀಸರು ಪರದಾಡಬೇಕಾಯಿತು.

ಕಾರ್ಯದಲ್ಲೇ ಅದ್ದೂರಿ ಸ್ವಾಗತ: ವರುಣ ಕ್ಷೇತ್ರ ವ್ಯಾಪ್ತಿಯ ಕಾರ್ಯ ಗ್ರಾಮದಲ್ಲಿರುವ ಕಾರ್ಯ ಸಿದ್ದೇಶ್ವರಸ್ವಾಮಿ ದೇವಾಲಯಕ್ಕೆ ಆಗಮಿಸಿದ ಸಿದ್ದರಾಮಯ್ಯ ದೇವರ ದರ್ಶನ ಪಡೆದರು. 2013ರಲ್ಲಿ ಸಿದ್ದರಾಮಯ್ಯ ವಿರುದ್ಧ ಸ್ಪರ್ಧೆ ಮಾಡಿದ್ದ ಬಿಎಸ್‌ವೈ ಆಪ್ತ ಸಹಾಯಕ ಕಾಪು ಸಿದ್ದಲಿಂಗಸ್ವಾಮಿ ಸ್ವಗ್ರಾಮವಾದ ಕಾರ್ಯದಲ್ಲೂ ಅವರಿಗೆ ಅದ್ದೂರಿ ಸ್ವಾಗತ ದೊರೆತದ್ದು ವಿಶೇಷವಾಗಿತ್ತು.

ಅಬ್ಬರದ ರೋಡ್ ಶೋ: ಬಳಿಕ ಈ ಗ್ರಾಮದಲ್ಲಿ ಸಿದ್ದರಾಮಯ್ಯ ಭರ್ಜರಿ ಮತಯಾಚನೆ ಮಾಡಿದರು. ತೆರೆದ ವಾಹನದಲ್ಲಿ ರೋಡ್ ಷೋ ನಡೆಸಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿದ ಅವರಿಗೆ ಹೂವಿನ ಮಳೆಗೈದ ಜನರು ಅಭಿಮಾನ ಮೆರೆದರು. ಬಳಿಕ ನಿಗದಿತ ಗ್ರಾಮಗಳಲ್ಲಿ ಸಿದ್ದರಾಮಯ್ಯ ನಡೆಸಿದ ರೋಡ್ ಷೋ ಮಿಂಚಿನ ಸಂಚಲನವನ್ನುಂಟು ಮಾಡಿತು.

ಮುಗಿಲು ಮುಟ್ಟಿದ ಜಯಘೋಷ: ಪ್ರತಿ ಗ್ರಾಮಕ್ಕೆ ಭೇಟಿ ನೀಡಿದಾಗಲೂ ಸಿದ್ದರಾಮಯ್ಯ ಪರ ಜಯಘೋಷ ಮೊಳಗಿದವು. 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' 'ಮೈಸೂರು ಹುಲಿ' ಎಂದು ಘೋಷಣೆ ಕೂಗಿ ಕಾರ್ಯಕರ್ತರು ಅಭಿಮಾನ ಮೆರೆದರು.

ಬಿಜೆಪಿ ಉಪ್ಪಾರರನ್ನು ಸಹಿಸುತ್ತಿಲ್ಲ: ವರುಣ ಕ್ಷೇತ್ರ ತಗಡೂರು ಗ್ರಾಮದ ಉಪ್ಪಾರ ಬೀದಿಯಲ್ಲಿ ಮಾತನಾಡಿದ ಅವರು, ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಶ್ರೀ ಭಗೀರಥ ಪೀಠ ಸ್ಥಾಪನೆ ಮಾಡಿದ್ದೇನೆ. ರಾಜ್ಯದಲ್ಲಿ ಮೊದಲ ಬಾರಿಗೆ ಉಪ್ಪಾರ ಸಮುದಾಯದ ಪುಟ್ಟರಂಗಶೆಟ್ಟಿಯನ್ನು ಮಂತ್ರಿ ಮಾಡಿದವನು ನಾನು. ಚಾಮರಾಜನಗರದಲ್ಲಿ ಪುಟ್ಟರಂಗಶೆಟ್ಟಿ ಶಾಸಕರಾಗಿದ್ದಾರೆ. ಅವನ ವಿರುದ್ಧವೂ ವಿ. ಸೋಮಣ್ಣ ಸ್ಪರ್ಧೆ ಮಾಡಿದ್ದಾನೆ. ಇಲ್ಲಿ ನನ್ನ ವಿರುದ್ಧವೂ ಸ್ಪರ್ಧೆ ಮಾಡಿದ್ದಾನೆ. ಉಪ್ಪಾರ ಸಮುದಾಯದವರು ಸೋಮಣ್ಣನನ್ನು ಚಾಮರಾಜನಗರ ದಲ್ಲೂ ಸೋಲಿಸಬೇಕು. ವರುಣದಲ್ಲೂ ಸೋಲಿಸಬೇಕು ಎಂದು ಕರೆ ನೀಡಿದರು.

ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ: ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ್ರೆ ನಮಗೂ ಅಧಿಕಾರ ಸಿಗುತ್ತೆ ನಮಗೆ ಅಧಿಕಾರ ಬಂದ್ರೆ ನಿಮ್ಮಗೆಲ್ಲ ಒಳ್ಳೆಯದನ್ನೇ ಮಾಡುತ್ತೇವೆ. ನಾನು ಬಸವ ಜಯಂತಿ ದಿನ ಅಧಿಕಾರ ಸ್ವೀಕಾರ ಮಾಡಿದೆ. ಕಳೆದ ಬಾರಿ ಮೇ 13 ಬಸವ ಜಯಂತಿ ಬಂದಿತ್ತು. ಈ ಬಾರಿ ನಾಳೆಯೇ ಬಸವ ಜಯಂತಿ. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣ ನವರ ಭಾವಚಿತ್ರ ಹಾಕಬೇಕೆಂದು ಹೇಳಿದವನು ನಾನು ಎಂದರು.

ಈ ವೇಳೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ನಟ ಸಾಧು ಕೋಕಿಲ ಸೇರಿದಂತೆ ಇನ್ನಿತರರು ಇದ್ದರು.

ಬಿಜೆಪಿ ದ್ವೇಷ ರಾಜಕೀಯ: ಸಿದ್ದರಾಮಯ್ಯ ಆರೋಪ

ಮೈಸೂರು,ಏ.22(ಎಂಟಿವೈ)- ವರುಣ ಕ್ಷೇತ್ರದಲ್ಲಿ ಬಿಜೆಪಿ ದ್ವೇಷದ ರಾಜಕೀಯ ಮಾಡುತ್ತಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ವರುಣ ಕ್ಷೇತ್ರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಗ್ಗೆ ನನಗೆ ಯಾವುದೇ ವೈಯಕ್ತಿಕ ದ್ವೇಷ ಇಲ್ಲ. ಅವರು, ಆರ್‌ಎಸ್‌ಎಸ್‌ನವರು, ಬಿಜೆಪಿಯವರು ರಾಜಕೀಯ ದ್ವೇಷದಿಂದ ನನ್ನನ್ನು ಸೋಲಿಸಬೇಕೆಂದೇ ನಿಂತಿದ್ದಾರೆ. ಅವರು ಏನು ಇಲ್ಲಿಯ ಮತದಾರರೇ? ವರುಣ ಬಗ್ಗೆ ನನಗೆ ಆತಂಕ ಇದೆ ಎಂಬುದು ಸುಳ್ಳು. ಸಿದ್ದರಾಮಯ್ಯ ಅವರಿಗೆ ಭಯವಾಗಿದೆ ಎಂಬ ಪ್ರತಾಪ್ ಸಿಂಹ ಹೇಳಿಕೆ ಖಾರವಾಗಿ ಪ್ರತಿಕ್ರಿಯಿಸಿ ಪ್ರತಾಪ್ ಸಿಂಹ ಯಾರು? ಅವರಿಗೂ ವರುಣಕ್ಕೂ ಏನು ಸಂಬಂಧ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯರಿಗೆ ಸೋಲುವ ಭೀತಿ ಎದುರಾಗಿದೆ ಎಂಬ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆಗೂ ತಿರುಗೇಟು ಕೊಟ್ಟ ಸಿದ್ದರಾಮಯ್ಯ, ಮೊದಲು ಅವರು ತಮ್ಮ ಕ್ಷೇತ್ರ ನೋಡಿಕೊಳ್ಳಲು ಹೇಳಿ. 1978ರಿಂದ ನಾನು ವರುಣ ಒಳಗೊಂಡಿರುವ ಕ್ಷೇತ್ರದಲ್ಲೇ ಸ್ಪರ್ಧೆ ಮಾಡಿದ್ದೇನೆ. ಈ ಸಲವೂ ಸ್ಪರ್ಧೆ ಮಾಡಲು ಪಕ್ಷ ಅವಕಾಶ ನೀಡಿದೆ. ಕೊನೆಯ ಎರಡು ದಿನ ಕೂಡ ವರುಣದಲ್ಲಿ ಪ್ರಚಾರಕ್ಕೆ ಬರುತ್ತೇನೆ ಎಂದರು.



ಮೈಸೂರಿನಲ್ಲಿ ಶನಿವಾರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರಕ್ಕೆ ಕುಮ್ಮಕ್ಕು ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಮುಖ್ಯ ಚುನಾವಣಾ ಆಯುಕ್ತರಿಗೆ ಅಧಿಕಾರಿಗಳು ಬಿಜೆಪಿ ಪರ ಅಂಟಿಸಿದ್ದಾರೆ ಎನ್ನಲಾದ ಪೋಸ್ಟರ್ ರವಾನಿಸುವ ಮೂಲಕ ದೂರು ನೀಡಲಾಯಿತು. ಈ ವೇಳೆ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಮೈಸೂರು ನಗರ ಕಾಂಗ್ರೆಸ್ ಒಬಿಸಿ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಎಸ್.ಯೋಗೀಶ, ಉಪ್ಪಾರ ಓಬಿಸಿ ರಾಜ್ಯ ಕಾರ್ಯದರ್ಶಿ ಮೊಗಣ್ಣಚಾರ್, ನಗರ ಒಬಿಸಿ ಉಪಾಧ್ಯಕ್ಷ ರವಿನಂದನ್, ಕಾರ್ಯದರ್ಶಿ ಮಹೇಶ್, ಲೋಕೇಶ್, ಕುಮಾರ್, ಮಾದಾಪುರ ಲಿಂಗರಾಜು, ಮಹೇಂದ್ರ, ಮಹೇಶ್ ಇನ್ನಿತರರು ಹಾಜರಿದ್ದರು.

ಲಿಂಗಾಯತರು ಭ್ರಷ್ಟರೆಂದು ನಾನು ಹೇಳಿಲ್ಲ: ಸಿದ್ದರಾಮಯ್ಯ

ಮೈಸೂರು,ಏ.22(ಎಂಟಿವೈ)- ಬಿಜೆಪಿ ನೀಚ ರಾಜಕಾರಣ ಮಾಡುತ್ತಿದ್ದು, ನನ್ನ ಹೇಳಿಕೆಯನ್ನು ತಿರುಚಿ ಲಿಂಗಾಯತರ ವಿರುದ್ಧ ಮಾತನಾಡಿರುವುದಾಗಿ ಅಪಪ್ರಚಾರ ಮಾಡುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿಗರು ಈ ಚುನಾವಣೆಯಲ್ಲಿ ಲಿಂಗಾಯತ ಅಸ್ತ್ರವನ್ನು ಬಳಸುತ್ತಿದ್ದಾರೆ. ಬಸವರಾಜ ಬೊಮ್ಮಾಯಿ ಮಾತ್ರ ಭ್ರಷ್ಟರಾಗಿದ್ದಾರೆ ಎಂದಿದ್ದೇನೆ. ಆ ಹೇಳಿಕೆಯನ್ನು ಬಿಜೆಪಿಗರು ಲಿಂಗಾಯಿತರನ್ನೇ ಭ್ರಷ್ಟರು ಎಂದು ಹೇಳಿದ್ದಾರೆ ಎಂದು ತಿರುಚಿ ಅಪಪ್ರಚಾರ ನಡೆಸುತ್ತಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಇಂತಹ ಕೃತ್ಯಕ್ಕೆ ಬಿಜೆಪಿಗರು ಕೈ ಹಾಕಿದ್ದಾರೆ. ಲಿಂಗಾಯತ ಸಮುದಾಯಲ್ಲಿ ವೀರೇಂದ್ರ ಪಾಟೀಲ್, ನಿಜಲಿಂಗಪ್ಪ, ಜೆ.ಹೆಚ್.ಪಟೇಲ್ ಸೇರಿದಂತೆ ಅನೇಕ ಅತ್ಯುತ್ತಮ ಮುಖ್ಯಮಂತ್ರಿಗಳು ಕೆಲಸ ನಿರ್ವಹಿಸಿದ್ದಾರೆ. ನನಗೆ ಲಿಂಗಾಯತರ ಮೇಲೆ ಅಪಾರವಾದ ಗೌರವವಿದೆ. ಹೇಳಿಕೆ ತಿರುಚಿ ಲಿಂಗಾಯತರಿಗೆ ಅಪಮಾನ ಮಾಡುವ ಕೆಲಸಕ್ಕೆ ಬಿಜೆಪಿ ಕೈ ಹಾಕಿದೆ ಎಂದು ಆರೋಪಿಸಿದರು.

ನಾನು ಪತ್ರಕರ್ತರೊಬ್ಬರ ಪ್ರಶ್ನೆಗೆ ಪ್ರತಿಕ್ರಿಯಿಸುವಾಗ ಬಿಜೆಪಿಯವರು ಲಿಂಗಾಯತ ಅಸ್ತ್ರನ್ನು ಪ್ರಯೋಗ ಮಾಡುತ್ತಿದ್ದಾರೆ ಎಂದು ಹೇಳಿದ್ದೆ, ನಾನು ಬಸವರಾಜ ಬೊಮ್ಮಾಯಿ ಅವರಿಗೆ ಸೀಮಿತವಾಗಿ ಭ್ರಷ್ಟ ಎಂದು ಹೇಳಿದ್ದೆ, ಲಿಂಗಾಯತರು ಭ್ರಷ್ಟರು ಎಂದು ಎಲ್ಲಿಯೂ ಹೇಳಿಲ್ಲ. ಇದನ್ನು ತಿರುಚಿ ವರದಿ ಮಾಡಿರುವುದು ಸರಿಯಾಗಿಲ್ಲ. ಬಿಜೆಪಿಯವರು ನನ್ನ ಹೇಳಿಕೆಯನ್ನು ಕಟ್ ಮಾಡಿ ಸೇರಿಸಿ, ತಮಗೆ ಬೇಕಾದಂತೆ ತಿರುಚಿ ಚುನಾವಣೆ ಸಂದರ್ಭವಿರುವುದರಿಂದ ಅದರ ಲಾಭ ಪಡೆಯಲು ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಲಿಂಗಾಯತರ ಬಗ್ಗೆ ನಮಗೆ ಗೌರವ ಇರುವುದರಿಂದಲೇ ಹೆಚ್ಚು ಟಿಕೆಟನ್ನು ಅವರಿಗೆ ನೀಡಿದ್ದೇವೆ. ಕಳೆದ ಬಾರಿ 47 ಲಿಂಗಾಯತ ಅಭ್ಯರ್ಥಿಗಳಿಗೆ ಪಕ್ಷದ ಟಿಕೆಟ್ ನೀಡಿದ್ದೆವು, ಈ ಬಾರಿ ಅದಕ್ಕಿಂತ ಹೆಚ್ಚು ಅಂದರೆ ಸುಮಾರು 52 - 53 ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದ್ದೇವೆ. ನಮ್ಮಲ್ಲಿ ಜಾತಿ ಮೇಲೆ ಮುಖ್ಯಮಂತ್ರಿಯ ತೀರ್ಮಾನ ಮಾಡುವುದಿಲ್ಲ, ಶಾಸಕರ ಅಭಿಪ್ರಾಯ ಪಡೆದು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಇದು ನಮ್ಮಲ್ಲಿ ನಡೆದುಕೊಂಡುಬಂದ ಪದ್ಧತಿ. ಬಿಜೆಪಿಯವರು ಜಾತಿ ಮೇಲೆ ಮಾಡಿದರೆ ನಾವೇನು ಮಾಡೋಕಾಗಲ್ಲ. ಲಿಂಗಾಯತರೆಲ್ಲ ಭ್ರಷ್ಟರೆಂದು ನಾನು ಹೇಳಿಯೇ ಇಲ್ಲ. ರಾಜಕೀಯ ದುರುದ್ದೇಶದಿಂದ ನನ್ನ ಹೇಳಿಕೆಯನ್ನು ತಿರುಚಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಇಂದು ಡಾ.ರಾಜ್‌ಕುಮಾರ್ ಗಾನ ಸಂಜೆ



ಮೈಸೂರು,ಏ.22(ಪಿಎಂ)- ಮಹತೀ ಮ್ಯೂಸಿಕಲ್ ಗ್ರೂಪ್‌ನ ದಶಮಾನೋತ್ಸವ ಹಾಗೂ ಡಾ.ರಾಜ್‌ಕುಮಾರ್ ಸಂಗೀತ ಸಂಜೆ ಕಾರ್ಯಕ್ರಮವನ್ನು ಏ.23ರಂದು ಹಮ್ಮಿಕೊಳ್ಳಲಾಗಿದೆ ಎಂದು ಗ್ರೂಪ್‌ನ ಸಂಸ್ಥಾಪಕ ಮತ್ತು ಗಾಯಕ ಅರುಣಾಚಲಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಅಂದು ಸಂಜೆ 4ಕ್ಕೆ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಡಾ.ರಾಜ್‌ಕುಮಾರ್ ಅವರ 30ಕ್ಕೂ ಹೆಚ್ಚು ಗೀತೆಗಳನ್ನು ನಮ್ಮ ಗ್ರೂಪ್‌ನ ಗಾಯಕರು ಸಾದರಪಡಿಸಲಿದ್ದಾರೆ. ಯಾವುದೇ ರೀತಿಯ ಸಭಾ ಕಾರ್ಯಕ್ರಮ ಇರುವುದಿಲ್ಲ ಎಂದರು. ಗಾಯಕರಾದ ಶ್ರೀಕಂಠರಾವ್, ಆರ್.ಶ್ರೀನಿವಾಸ್, ಮಹಾಲಕ್ಷ್ಮೀ ಗೋಷ್ಠಿಯಲ್ಲಿದ್ದರು.

ಗ್ರಾಮೀಣ ವಿದ್ಯಾರ್ಥಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು,ಏ.22- ಮೈಸೂರು ತಾಲೂಕಿನ ಮೂಡಲ ಹುಂಡಿ ಗ್ರಾಮದ ಸತೀಶ್ ಕುಮಾರ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಾಮರ್ಸ್ ವಿಭಾಗದಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿದ್ದು, ಶೇ.94ರಷ್ಟು ಅಂಕ ಪಡೆದುಕೊಂಡಿದ್ದಾರೆ. ಮೈಸೂರಿನ ಮರಿಮಲ್ಲಪ್ಪ ಕಾಲೇಜಿನ ವಿದ್ಯಾರ್ಥಿಯಾಗಿರುವ ಸತೀಶ್ ಕುಮಾರ್ ಮೂಡಲಹುಂಡಿ ನಿವಾಸಿ ಮಾಕಣ್ಣ, ಲಕ್ಷ್ಮಿ ದಂಪತಿ ಪುತ್ರ. ಈತ 600ಕ್ಕೆ 563 ಅಂಕ ಪಡೆದುಕೊಂಡಿದ್ದಾರೆ. ಕನ್ನಡದಲ್ಲಿ 99, ಇಂಗ್ಲೀಷ್ 80, ಅರ್ಥಶಾಸ್ತ್ರ 98, ಬಿಸಿನೆಸ್ ಸ್ಟಡೀಸ್ 90, ಅಕೌಂಟೆನ್ಸಿ 97, ಸ್ಟಾಟಿಸ್ಟಿಕ್‌ನಲ್ಲಿ 99 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.



ವಿಧಾನಸಭಾ ಸಾರ್ವತ್ರಿಕ ಚುನಾವಣೆ

ಮತಗಟ್ಟೆಗಳ ಪಿಆರ್‌ಓ, ಎಪಿಆರ್‌ಓಗಳಿಗೆ ತರಬೇತಿ

ಮೈಸೂರು, ಏ. 22(ಆರ್‌ಕೆ)- ಮೇ 10ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ಮೈಸೂರು ಜಿಲ್ಲೆಯಾದ್ಯಂತ ಮತಗಟ್ಟೆಗಳಿಗೆ ನಿಯೋಜನೆಗೊಂಡಿರುವ ಅಧ್ಯಕ್ಷೀಯ ಅಧಿಕಾರಿ (ಪ್ರಿಸೈಡಿಂಗ್ ಆಫೀಸರ್) ಹಾಗೂ ಸಹಾಯಕ ಅಧ್ಯಕ್ಷೀಯ ಅಧಿಕಾರಿ (ಅಸಿಸ್ಟೆಂಟ್ ಪ್ರಿಸೈಡಿಂಗ್ ಆಫೀಸರ್)ಗಳಿಗೆ ಎರಡು ದಿನಗಳ ತರಬೇತಿ ಕಾರ್ಯಕ್ರಮ ಇಂದಿನಿಂದ ಆರಂಭವಾಗಿದೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಹಿಂಭಾಗವಿರುವ ಬೇಡನ್ ಪೋವೆಲ್ ಶಾಲೆಯಲ್ಲಿ ನಡೆದ ಚಾಮರಾಜ ವಿಧಾನಸಭಾ ಕ್ಷೇತ್ರ ಪಿಆರ್‌ಓ ಮತ್ತು ಎಪಿಆರ್‌ಓಗಳ ತರಬೇತಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಪಾಲ್ಗೊಂಡು ಮಾಸ್ಟರ್ ಟ್ರೇನರ್ಸ್ ಹೇಳುವ ಮಾಹಿತಿಯನ್ನು ನೋಟ್ ಮಾಡಿಕೊಂಡು ಮತಗಟ್ಟೆಗಳಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ ನ್ಯಾಯಸಮ್ಮತ, ಮುಕ್ತ ಹಾಗೂ ಶಾಂತಿಯುತ ಮತದಾನಕ್ಕೆ ಸಹಕರಿಸಬೇಕೆಂದು ಸಲಹೆ ನೀಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಹಾಗೂ ಮತದಾನ ಎಂಬುದು ಪವಿತ್ರ ಕಾರ್ಯವಾಗಿದ್ದು, ಮತದಾರರಿಗೆ ಅವರ ಹಕ್ಕು ಚಲಾಯಿಸಲು ಸೌಲಭ್ಯ ನೀಡಬೇಕು ಹಾಗೂ ಸಮರ್ಪಕವಾಗಿ ಭಾರತ ಚುನಾವಣಾ ಆಯೋಗವು ನೀಡುವ ಮಾರ್ಗಸೂಚಿ, ನಿಯಮಗಳಿಗನುಸಾರ ಯಾವುದೇ ಹಂತದಲ್ಲೂ ಲೋಪವಾಗದಂತೆ ಕೆಲಸ ಮಾಡಿ, ಯಾರೂ ಸಹ ಸಬೂಬು ಹೇಳದೇ ಮತದಾನ ಕರ್ತವ್ಯದಲ್ಲಿ ಉತ್ಸಾಹದಿಂದ ಭಾಗವಹಿಸ ಬೇಕೆಂದು ಡಾ. ರಾಜೇಂದ್ರ ಸಲಹೆ ನೀಡಿದರು.



ಈ ಸಂದರ್ಭ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಚಾಮರಾಜ ಕ್ಷೇತ್ರದ ಚುನಾವಣಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು. ಸೆಕ್ಟರ್ ಆಫೀಸರ್‌ಗಳ ಉಪಸ್ಥಿತಿಯಲ್ಲಿ ಆಯಾ ಮಾಸ್ಟರ್ ಟ್ರೇನರ್‌ಗಳು ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಸ್ಟ್ರಾಂಗ್ ರೂಂ ಕೇಂದ್ರದಲ್ಲಿ ಪ್ರಿಸೈಡಿಂಗ್ ಮತ್ತು ಅಸಿಸ್ಟೆಂಟ್ ಪ್ರಿಸೈಡಿಂಗ್ ಅಧಿಕಾರಿ (ಪಿಆರ್‌ಓ ಮತ್ತು ಎಪಿಆರ್‌ಗಳು)ಗಳಿಗೆ ತರಬೇತಿ ನೀಡಲಾಗುತ್ತಿದೆ.

ಒಂದೊಂದು ಕೇಂದ್ರದಲ್ಲಿ ಸುಮಾರು 2,000 ಮಂದಿಗೆ ತರಬೇತಿ ನೀಡುತ್ತಿದ್ದು, ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳು, ವಿವಿ ಪ್ಯಾಟ್‌ಗಳ ಕಾರ್ಯ ಹಾಗೂ ಅವುಗಳ ನಿರ್ವಹಣೆ ಕುರಿತಂತೆ ಪ್ರಾತ್ಯಕ್ಷಿಕೆ ನೀಡುವ ಮೂಲಕ ಮಾಸ್ಟರ್ ಟ್ರೇನರ್‌ಗಳು ಅಧಿಕಾರಿಗಳಿಗೆ ತರಬೇತಿ ನೀಡುತ್ತಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ಹುಣಸೂರು ರಸ್ತೆಯ ಸೆಂಟ್ ಜೋಸೆಫ್ ಶಾಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ, ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ನರಸಿಂಹರಾಜ ಕ್ಷೇತ್ರ ಹಾಗೂ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಉಳಿದ ವಿಧಾನಸಭಾ ಕ್ಷೇತ್ರಗಳ ತರಬೇತಿ ನಡೆಯುತ್ತಿದ್ದು, ನಾಳೆ (ಏ. 23) ಸಂಜೆ 5 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಪ್ರತೀ ಕೇಂದ್ರದ 15ರಿಂದ 18 ಕೊಠಡಿಗಳಲ್ಲಿ ಮಾಸ್ಟರ್ ಟ್ರೇನರ್‌ಗಳಿಂದ ತರಬೇತಿ ನೀಡಲಾಗುತ್ತಿದ್ದು, ಪಿಆರ್‌ಓ-ಎಪಿಆರ್‌ಓಗಳಿಗೆ ತಿಂಡಿ-ಊಟ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು, ಅಂಚೆ ಮತದಾನ ಮಾಡಲಿಚ್ಛಿಸುವವರಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನೂ ಇದೇ ವೇಳೆ ಪಡೆದುಕೊಳ್ಳಲಾಗುತ್ತಿದೆ.





ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	6	4	2	0	8
ಲಕ್ನೋ	7	4	3	0	8
ಸಿಎಸ್‌ಕೆ	6	4	2	0	8
ಗುಜರಾತ್	6	4	2	0	8
ಪಂಜಾಬ್	7	4	3	0	8
ಆರ್‌ಸಿಬಿ	6	3	3	0	6
ಮುಂಬೈ	6	3	3	0	6
ಕೋಲ್ಕತ್ತಾ	6	2	4	0	4
ಎಸ್‌ಆರ್‌ಹೆಚ್	6	2	4	0	4
ಡೆಲ್ಲಿ	6	1	5	0	2

ಗುಜರಾತ್ ಟೈಟನ್ಸ್, ಪಂಜಾಬ್ ಕಿಂಗ್ಸ್‌ಗೆ ಭರ್ಜರಿ ಜಯ

● ಗೆಲ್ಲುವ ಪಂದ್ಯ ಸೋತ ಲಕ್ನೋ ● ಸೂರ್ಯಕುಮಾರ್ ಯಾದವ್, ಕ್ಯಾಮೆರಾನ್ ಗ್ರೀನ್ ಹೋರಾಟ ವ್ಯರ್ಥ





ಲಕ್ನೋ/ ಮುಂಬೈ, ಏ.22– ಪ್ರಸಕ್ತ ಸಾಲಿನ ಐಪಿಎಲ್ ಪಂದ್ಯಾವಳಿಯಲ್ಲಿ ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ ಹಾಗೂ ರಾತ್ರಿ ನಡೆದ ಮತ್ತೊಂದು ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ಭರ್ಜರಿ ಗೆಲುವು ದಾಖಲಿಸಿದೆ.

ಗುಜರಾತ್‌ಗೆ ಜಯ: ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ನೀಡಿದ ಗುಜರಾತ್ ಟೈಟಾನ್ಸ್, ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 7 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಸುಲಭವಾಗಿ ಗೆಲ್ಲುವ ಪಂದ್ಯವನ್ನು ರಾಹುಲ್ ಪಡೆ ಸೋಲು ಅನುಭವಿಸಿತು.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 135ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಶುಭ್‌ಮನ್ ಗಿಲ್ ಖಾತೆ ತೆರೆಯುವ ಮುನ್ನವೇ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಒಂದಾದ ನಾಯಕ ಹಾರ್ದಿಕ್ ಪಾಂಡ್ಯ ಹಾಗೂ ವೃದ್ಧಿಮಾನ್ ಸಹಾ 2ನೇ ವಿಕೆಟ್‌ಗೆ 68ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಸಹಾ 6 ಬೌಂಡರಿ ಒಳಗೊಂಡ 47ರನ್ ಗಳಿಸಿ ಕೃನಾಲ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಅಭಿನವ್ ಮನೋಹರ್ 3, ವಿಜಯ್ ಶಂಕರ್ 10ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದೆಡೆ ನಾಯಕನಿಗೆ ತಕ್ಕ ಆಟವಾಡಿದ ಹಾರ್ದಿಕ್ ಪಾಂಡ್ಯ 50 ಎಸೆತಗಳಲ್ಲಿ 4 ಸಿಕ್ಸರ್, 2 ಬೌಂಡರಿ ಒಳಗೊಂಡ 66 ರನ್ ಗಳಿಸಿ ಔಟಾದರು. ಲಖನೌ ಪರ ಕೃನಾಲ್ ಪಾಂಡ್ಯ, ಮಾರ್ಕಸ್ ಸ್ಟೋಯಿನಿಸ್ ತಲಾ 2, ನವೀನ್ ಉಲ್ ಹಕ್ ಹಾಗೂ ಅಮಿತ್ ಮಿಶ್ರಾ ತಲಾ ಒಂದೊಂದು ವಿಕೆಟ್ ಉರುಳಿಸಿದರು.

136 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಕ್ನೋ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 128 ರನ್ ಗಳಿಸುವ ಮೂಲಕ ಸುಲಭವಾಗಿ ಗೆಲ್ಲುವ ಪಂದ್ಯವನ್ನು 7 ರನ್ ಅಂತರದಿಂದ ಸೋತಿತು. ತಂಡದ ಪರ ಕೆ.ಎಲ್.ರಾಹುಲ್ 8 ಬೌಂಡರಿ ಒಳಗೊಂಡ 68, ಕೈಲ್ ಮೇಯರ್ಸ್ 24, ಕೃನಾಲ್ ಪಾಂಡ್ಯ 23, ರನ್ ಗಳಿಸಿದರು. ಗುಜರಾತ್ ಪರ ಬೌಲಿಂಗ್‌ನಲ್ಲಿ ನೂರ್ ಅಹಮ್ಮದ್, ಮೊಹಿತ್ ಶರ್ಮಾ ತಲಾ 2 ಹಾಗೂ ರಶೀದ್ ಖಾನ್ 1 ವಿಕೆಟ್ ಪಡೆದರು. ಮೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪಂಜಾಬ್‌ಗೆ ಜಯ: ಅರ್ಷದೀಪ್ ಸಿಂಗ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಪಂಜಾಬ್ ಕಿಂಗ್ಸ್, 5 ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ 13 ರನ್‌ಗಳ ಜಯ ಸಾಧಿಸಿದೆ.


ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂಜಾಬ್ ಕಿಂಗ್ಸ್ ನೀಡಿದ್ದ 215 ರನ್‌ಗಳ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ ಇಶಾನ್ ಕಿಶನ್ ಅವರ ವಿಕೆಟ್ ಅನ್ನು ಬಹುಬೇಗ ಕಳೆದುಕೊಂಡರೂ, ನಾಯಕ ರೋಹಿತ್ ಶರ್ಮಾ ಹಾಗೂ ಕ್ಯಾಮೆರಾನ್ ಗ್ರೀನ್ ಸ್ಫೋಟಕ ಬ್ಯಾಟಿಂಗ್‌ನಿಂದ ಭರ್ಜರಿ ಆರಂಭ ಪಡೆಯಿತು. ಇವರಿಬ್ಬರೂ 2ನೇ ವಿಕೆಟ್‌ಗೆ 76 ರನ್ ಜೊತೆಯಾಟವಾಡಿದರು. ಈ ವೇಳೆ 27 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 44 ರನ್ ಗಳಿಸಿದ್ದ ರೋಹಿತ್ ಶರ್ಮಾ ವಿಕೆಟ್ ಒಪ್ಪಿಸಿದರು. ನಂತರ ಮೂರನೇ ವಿಕೆಟ್‌ಗೆ ಜೊತೆಯಾದ ಕ್ಯಾಮೆರಾನ್ ಗ್ರೀನ್ ಹಾಗೂ ಸೂರ್ಯಕುಮಾರ್ ಯಾದವ್ 75 ರನ್ ಜೊತೆಯಾಟವಾಡಿದರು. ಆ ಮೂಲಕ 16ನೇ ಓವರ್‌ಗೆ ತಂಡದ ಮೊತ್ತವನ್ನು 159ಕ್ಕೆ ತಂದರು. ಒಂದು ತುದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಕ್ಯಾಮೆರಾನ್ ಗ್ರೀನ್ 43 ಎಸೆತಗಳಲ್ಲಿ 3 ಸಿಕ್ಸರ್, 6 ಬೌಂಡರಿ ಒಳಗೊಂಡ 67 ರನ್ ಗಳಿಸಿ ನೇಥನ್ ಎಲ್ಲಿಸ್ ರಣತಂತ್ರಕ್ಕೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಸೂರ್ಯಕುಮಾರ್ ಯಾದವ್ ಸಹ 26 ಎಸೆತಗಳಲ್ಲಿ 3 ಸಿಕ್ಸರ್, 7 ಬೌಂಡರಿ ಒಳಗೊಂಡ ಬಿರುಸಿನ 57 ರನ್ ಗಳಿಸಿ ನಿರ್ಗಮಿಸಿದರು.

ಟಿಮ್ ಡೇವಿಡ್ ಅಜೇಯ 25 ರನ್ ಗಳಿಸಿದರೂ ಕೊನೆಯ ಓವರ್‌ನಲ್ಲಿ ಅರ್ಷದೀಪ್ ಸಿಂಗ್ ಮುಂಬೈ ತಂಡವನ್ನು ನಿಯಂತ್ರಿಸಿದರು. ಅಂತಿಮವಾಗಿ ಮುಂಬೈ ಇಂಡಿಯನ್ಸ್ 6 ವಿಕೆಟ್ ನಷ್ಟಕ್ಕೆ 201 ರನ್ ಗಳಿಸುವಲ್ಲಿ ಶಕ್ತವಾಯಿತು. ಆ ಮೂಲಕ 13 ರನ್‌ಗಳಿಂದ ಸೋಲು ಒಪ್ಪಿಕೊಂಡಿತು. ಪಂಜಾಬ್ ಪರ ಅರ್ಷದೀಪ್ ಸಿಂಗ್ 4, ಲೈಮ್ ಲಿವಿಂಗ್‌ಸ್ಟೋನ್, ನಾಥನ್ ಎಲ್ಲಿಸ್ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಿಗೆ 8 ನಷ್ಟಕ್ಕೆ 214 ರನ್ ಬೃಹತ್ ಮೊತ್ತ ಕಲೆ ಹಾಕಿತ್ತು. ತಂಡದ ಪರ ಮ್ಯಾಥ್ಯೂ ಶಾರ್ಟ್ 11, ಪ್ರಭ್‌ಸಿಮ್ರಾನ್ 26, ಟೈಡೆ 29, ಲಿವಿಂಗ್ ಸ್ಟೋನ್ 10, ಹರ್‌ಪ್ರೀತ್ ಸಿಂಗ್ 41, ಸ್ಯಾಮ್ ಕರನ್ 55, ಜಿತೇಶ್ ಶರ್ಮಾ 25 ರನ್ ಗಳಿಸಿದರು. ಮುಂಬೈ ಪರ ಕ್ಯಾಮೆರಾನ್ ಗ್ರೀನ್, ಪಿಯೂಷ್ ಚಾವ್ಲಾ ತಲಾ 2, ಅರ್ಜುನ್ ತೆಂಡೂಲ್ಕರ್, ಜೋಫ್ರಾ ಅರ್ಚರ್ ಹಾಗೂ ಜೇಸನ್ ಬೆಹ್ರಾನ್ ಡ್ರಾಫ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಪಂಜಾಬ್ ಪರ ಸ್ಯಾಮ್ ಕರನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಎಸ್‌ಜೆಸಿಇ ಕಾಲೇಜಿನಲ್ಲಿ ಮತದಾನ ಜಾಗೃತಿ



ಮೈಸೂರು, ಏ.22(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ (ಎಸ್‌ಜೆಸಿಇ) ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಜಿಪಂ, ನಗರಪಾಲಿಕೆ, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿ ಮೂಡಿಸಲಾಯಿತು.

ನೂರಾರು ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗೆ ಕಡ್ಡಾಯ ಮತದಾನ ಮಾಡುವಂತೆ ಪ್ರಮಾಣ ವಚನ ಬೋಧಿಸುವ ಮೂಲಕ ಮತದಾನ ಮಹತ್ವ ತಿಳಿಸಿಕೊಡಲಾಯಿತು. ಮತದಾನ ಜಾಗೃತಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಯುವ ಮತದಾರರು ಮತ ಚಲಾಯಿಸುವ ಮೂಲಕ ಮತ್ತೊಬ್ಬರಿಗೆ ಪ್ರೇರಣೆಯಾಗಬೇಕು. ದೇಶದ ಅಭಿವೃದ್ಧಿ ಉತ್ತಮ ನಾಯಕರನ್ನು ಆಯ್ಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಮತದಾರರು ತಮ್ಮ ಹಕ್ಕು ಚಲಾಯಿಸುವಂತೆ ತಿಳಿಸಿದರು.

ಇದೇ ವೇಳೆ ಮತದಾನದ ಮಹತ್ವದ ಕುರಿತಾದ ಕಿರಿ ನಾಟಕ ಪ್ರದರ್ಶಿಸಲಾಯಿತು. ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಕುಲಸಚಿವ ಡಾ.ಎಸ್.ಎ.ಧನರಾಜ್, ಬಿಇಓ ಕೃಷ್ಣ, ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ರಂಜಿತ್ ಕುಮಾರ್, ನಗರಪಾಲಿಕೆ ಪರಿಸರ ಇಂಜಿನಿಯರ್ ಮೈತ್ರಿ ಮತ್ತಿತರರಿದ್ದರು.






ಮೈಸೂರು, ಏ.22– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಿನಕಲ್ ಗ್ರಾಮದ ರಂಗರಾಜು, ಶ್ರೀನಿವಾಸ್, ಯಜಮಾನರಾದ ಶಿವಣ್ಣ, ಪಾಪಣ್ಣ, ಮಂಜು ಎಪಿಬಿಜೆಪಿ ಮುಖಂಡರು ಹಾಗೂ ವಿಜಯನಗರ 3 ಮತ್ತು 4ನೇ ಹಂತದ ಯೂಥ್ ಅಸೋಸಿಯೇಷನ್ ಅಧ್ಯಕ್ಷ, ಮಹೇಶ್, ರಘು, ವಾಸು, ಮಂಜು, ಮಹೇಂದ್ರ ಹೇಮಂತ್, ಕಿರಣ್, ನಾಗರಾಜು, ಚಂದ್ರ, ಶಶಿ ಕುಮಾರ್ (ಪಿಂಕು) ಹಾಗೂ ನೂರಾರು ಮಹಿಳೆಯರು ಕಾಂಗ್ರೆಸ್, ಬಿಜೆಪಿ ತೊರೆದು ಶಾಸಕರಾದ ಜಿ.ಟಿ ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಪಕ್ಷ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಜೆ ಡಿ ಎಸ್ ಅಧ್ಯಕ್ಷರಾದ ಹೆಚ್. ಸಿ ರಾಜು, ನಂಜೇಗೌಡ್ರು ಮಿಲ್ ಸ್ವಾಮಿ, ಬಿರಾದಾರ್, ಶಿವಲಿಂಗ ನಾಯ್ಕ್, ವಿಜಿ, ಟಿ. ವೆಂಕಟೇಶ್, ವೆಂಕಟೇಶ್, ಜೆ. ರಮೇಶ, ಸ್ವಾಮಿ, ಜಗದೀಶ್ ಹೆಚ್. ಬಿ, ಹರೀಶ್, ವಿಜಿಕುಮಾರ್, ದಾಸ್, ಉಪಸ್ಥಿತರಿದ್ದರು

ಮೈಸೂರಲ್ಲಿ ಮುಸ್ಲಿಂ ಬಾಂಧವರಿಂದ ಭಕ್ತಿಭಾವದ ರಂಜಾನ್ ಆಚರಣೆ

ಸಾಮೂಹಿಕ ಪ್ರಾರ್ಥನೆ; ಪರಸ್ಪರ ಶುಭಾಶಯ ವಿನಿಮಯ





ಮೈಸೂರು, ಏ. 22 (ಆರ್‌ಕೆ)– ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನ ಸೇರಿದಂತೆ ವಿವಿಧೆಡೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಮುಸ್ಲಿಂ ಬಾಂಧವರು ಇಂದು ರಂಜಾನ್ ಹಬ್ಬವನ್ನು ಭಕ್ತಿಭಾವ ಹಾಗೂ ಅತ್ಯಂತ ಸಂಭ್ರಮದಿಂದ ಆಚರಿಸಿದರು.

ತಿಲಕ್‌ನಗರದ ಹಳೇ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆ ನೇತೃತ್ವ ವಹಿಸಿದ್ದ ಮುಸಲ್ಮಾನರ ಧರ್ಮಗುರು ಸರ್‌ಖಾಜಿ ಹಜರತ್ ಮೌಲಾನ ಮೊಹಮದ್ ಉಸ್ಮಾನ್ ಷರೀಫ್ ಅವರು ನೆರೆದಿದ್ದ ಮುಸ್ಲಿಂ ಬಾಂಧವರು ಹಾಗೂ ನಾಡಿಗೆ ರಂಜಾನ್ ಸಂದೇಶ ನೀಡಿ ಶುಭ ಕೋರಿದರು.

ನಮ್ಮ ದೃಷ್ಟಿಯಲ್ಲಿ ಬಡವ–ಬಲ್ಲಿದ ಎಲ್ಲರೂ ಒಂದೇ ಯಾವುದೇ ಜಾತಿ–ಧರ್ಮಭೇದವಿಲ್ಲದೇ ಸಮಾಜದಲ್ಲಿರುವ ಸರ್ವರನ್ನೂ ಸಮಾನವಾಗಿ ಕಂಡು ಸಂಕಷ್ಟದಲ್ಲಿರುವವರಿಗೆ ನೆರವು ನೀಡಬೇಕೆಂಬುದೇ ರಂಜಾನ್ ಹಬ್ಬದ ಮಹತ್ವವಾಗಿದೆ. ಒಗ್ಗಟ್ಟು ಮತ್ತು ಪ್ರಾಮಾಣಿಕತೆ ರಂಜಾನ್ ಸಂಕೇತವಾಗಿದೆ. ಮಾನವ ಕುಲಕ್ಕೆ ಸೇವೆ ಮಾಡುವ ಮೂಲಕ ಮಾನವೀಯತೆ ಮೆರೆಯುವುದೇ ಪ್ರತಿ ಮುಸ್ಲಿಮರ ಧ್ಯೇಯವಾಗಿರಲಿ ಎಂದು ಅವರು ನುಡಿದರು.

ಕೋಮು ಸೌಹಾರ್ದ, ಸೋದರತ್ವ ಮೆರೆಯುವ ಮೂಲಕ ದೇಶದ ರಕ್ಷಣೆ ಮತ್ತು ಭ್ರಾತೃತ್ವದ ಸಂಕೇತ ಸಾರಬೇಕಾಗಿದೆ ಮುಸ್ಲಿಮೇತರರೂ ಸಹ ರಂಜಾನ್ ಹಬ್ಬವನ್ನು ಆಚರಿಸಿ ನಾವೆಲ್ಲಾ ಒಂದೇ ಎಂಬ ಭಾವನೆ ಮೂಡಿಸಿದರೆ ಮಾತ್ರ ಅದರ ಮೂಲ ಉದ್ದೇಶ ಸಾಕಾರವಾಗಲಿದೆ ಎಂದ ಸರ್‌ಖಾಜಿ ಅವರು, ಆರ್ಥಿಕವಾಗಿ ಸದೃಢವಾಗಿರುವ ಪ್ರತಿಯೊಬ್ಬ ಮುಸ್ಲಿಂ ಸಹೋದರರು ತಮ್ಮ ಉಳಿತಾಯದ ಶೇ. 2.5 ರಷ್ಟನ್ನು ಬಡವರಿಗೆ ನೀಡಬೇಕು ಎಂದು ಕರೆ ನೀಡಿದರು.

ರಾಜೀವ್‌ನಗರ 2ನೇ ಹಂತದ ಹೊಸ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ರಂಜಾನ್ ಪ್ರಾರ್ಥನೆಯಲ್ಲೂ ಸಾವಿರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು. ಗೌಸಿಯಾನಗರ, ಗಾಯತ್ರಿಪುರಂ, ಅಶೋಕ ರಸ್ತೆ, ಎನ್.ಆರ್. ಮೊಹಲ್ಲಾ, ಅಗ್ರಹಾರ ಸೇರಿದಂತೆ ಮೈಸೂರು ನಗರದ ವಿವಿಧೆಡೆ ನಡೆದ ರಂಜಾನ್ ಪ್ರಾರ್ಥನೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ರಂಜಾನ್ ಶುಭಾಶಯ ವಿನಿಮಯ ಮಾಡಿಕೊಂಡರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾ ನಿಲಯ (ವಿಟಿಯು)ದ ನಿವೃತ್ತ ಡೀನ್ ಡಾ. ಸೈಯದ್ ಶಕೀಬ್ ಉರ್ ರೆಹಮಾನ್, ಮಾಜಿ ನಗರಪಾಲಿಕೆ ಸದಸ್ಯ ಕೆ.ಸಿ. ಶೌಕತ್ ಪಾಷ, ಹಿರಿಯ ಪತ್ರಕರ್ತ ಅಫ್ಸರ್ ಪಾಷ, ನಯೀಮುಲ್ಲಾ, ಖೈಸರ್, ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಗಯಾಜ್ ಅಹಮದ್, ಅಕ್ರಂ, ಉಪ ಮೇಯರ್ ಅನ್ವರ್ ಬೇಗ್, ಮಾಜಿ ಪಾಲಿಕೆ ಸದಸ್ಯ ಸುಹೇಲ್ ಬೇಗ್, ಸಮಾಜ ಸೇವಕ ಮೊಹಮದ್ ಮುಮ್ತಾಜ್ ಅಹಮದ್, ಕಾಂಗ್ರೆಸ್ ಮುಖಂಡರಾದ ಶೌಕತ್ ಅಲಿ ಖಾನ್, ತಂಜೀಲ್ ಫೈಜಾನ್ ಹಾಗೂ ಇತರರು ಹಳೇ ಈದ್ಗಾ ಮೈದಾನದಲ್ಲಿ ನಡೆದ ರಂಜಾನ್ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಶಾಸಕ ತನ್ವೀರ್ ಸೇಠ್ ಅವರು ಅಶೋಕ ರಸ್ತೆಯಲ್ಲಿರುವ ಮಜ್ಜಿದ್ ಇ ಕುಚಿಮೆನನ್‌ನಲ್ಲಿ ನಡೆದ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು. ಮೌಲಾನಾ ಮುಫ್ತಿ ಮೊಹಮದ್ ಸುಲ್ತಾನ ಸಾಹೇಬ್ ಸಹ ಇದೇ ಸಂದರ್ಭ ರಂಜಾನ್ ಶುಭಾಶಯ ವಿನಿಮಯ ಮಾಡಿಕೊಂಡರು.

ನಗರ ಪೊಲೀಸ್ ಆಯುಕ್ತ ಡಾ. ಬಿ. ರಮೇಶ್, ಡಿಸಿಪಿ ಎಂ. ಮುತ್ತುರಾಜ್, ಎನ್.ಆರ್. ಉಪವಿಭಾಗದ ಎಸಿಪಿ ಸಿ.ಕೆ. ಅಶ್ವತ್ಥ ನಾರಾಯಣ ನೇತೃತ್ವದಲ್ಲಿ ರಂಜಾನ್ ಸಾಮೂಹಿಕ ಪ್ರಾರ್ಥನೆಗೆ ಭಾರಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಕಳೆದ ಬಾರಿ ವಾಸುಗೆ ಟಿಕೆಟ್ ಕೊಟ್ಟು ಸೋಲಿಸಿದರು; ಈ ಬಾರಿ ಟಿಕೆಟನ್ನೇ ತಪ್ಪಿಸಿದರು!

ಬಿಜೆಪಿ ಸೇರ್ಪಡೆಗೆ ಮಾಜಿ ಕಾರ್ಪೊರೇಟರ್ ಪ್ರಶಾಂತ್‌ಗೌಡ ನಿರ್ಧಾರ



ಮೈಸೂರು,ಏ.22(ಪಿಎಂ)– ಕಾಂಗ್ರೆಸ್‌ನಲ್ಲಿ ಮೂಲ ಕಾಂಗ್ರೆಸಿಗರನ್ನು ಕಡೆಗಣಿಸಲಾಗುತ್ತಿದೆ. ಜೊತೆಗೆ ಮಾಜಿ ಶಾಸಕ ವಾಸು ಅವರಿಗೆ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ತಪ್ಪಿಸಿದ ಕಾರಣ ತಾವು ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಸೇರ್ಪಡೆಯಾಗುತ್ತಿರುವುದಾಗಿ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಸಾಂಕೇತಿಕವಾಗಿ ಬಿಜೆಪಿ ಸೇರ್ಪಡೆಯಾಗಿದ್ದೇನೆ. ನಾಳೆ ನಾಳಿದ್ದರಲ್ಲಿ ಬಿಜೆಪಿ ಕಚೇರಿಯನ್ನು ಅಧಿಕೃತವಾಗಿ ಪ್ರವೇಶಿಸಲಿದ್ದೇನೆ. ಜೊತೆಗೆ ಚಾಮರಾಜ ಕ್ಷೇತ್ರದ 150ಕ್ಕೂ ಹೆಚ್ಚು ಯುವಕರೂ ಬಿಜೆಪಿ ಸೇರುತ್ತಿದ್ದಾರೆ ಎಂದರು.

ಇಂದು ಕಾಂಗ್ರೆಸ್‌ನಲ್ಲಿ ಸಿದ್ಧಾಂತ ಮತ್ತು ಜಾತ್ಯಾತೀತತೆ ಎಂಬುದನ್ನು ಕೆಲ ವ್ಯಕ್ತಿಗಳಿಗೆ ಮಾರಾಟ ಮಾಡಲಾಗಿದೆ. 2013ರಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ವಾಸು ಶಾಸಕರಾಗಿ ಆಯ್ಕೆಯಾದರು. ಅವರು ತಮ್ಮ ಅವಧಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದರು. 2018ರ ಚುನಾವಣೆಯಲ್ಲಿ ಪಕ್ಷದಲ್ಲಿರುವ ಕೆಲ ಮುಖಂಡರು ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣ ಅವರು ಸೋಲು ಕಾಣಬೇಕಾಯಿತು. ಈ ಸಂಬಂಧ ಕೆಪಿಸಿಸಿಗೆ ದೂರು ಕೊಟ್ಟರೂ ಯಾವುದೇ ಕ್ರಮವಾಗಲಿಲ್ಲ ಎಂದು ದೂರಿದರು.


ಈ ಚುನಾವಣೆಯಲ್ಲಿ ವಾಸು ಅವರಿಗೆ ಟಿಕೆಟ್ ಕೊಡುವುದಾಗಿ ಹೇಳಿ ಕೊನೆಯಲ್ಲಿ ತಪ್ಪಿಸಲಾಯಿತು. ಅವರಿಗೆ ಟಿಕೆಟ್ ದೊರೆಯದಿರಲು ನೇರವಾಗಿ ಸಿದ್ದರಾಮಯ್ಯ ಕಾರಣ. ವಾಸು ಅವರು ಗೆಲುತ್ತಾರೆ. ಸರ್ಕಾರ ಬಂದರೆ ಮಂತ್ರಿಯಾಗುತ್ತಾರೆ ಎಂಬ ಕಾರಣಕ್ಕೆ ಟಿಕೆಟ್ ನೀಡಿಲ್ಲ. ವಾಸು ಅವರಿಗೆ ಟಿಕೆಟ್ ತಪ್ಪಲು ಕಾರಣ ಏನೆಂದು ಸಿದ್ದರಾಮಯ್ಯನವರು ಹೇಳಬೇಕು. ಇದನ್ನು ನಾನು ವಾಸು ಅವರ ಅಭಿಮಾನಿಯಾಗಿ ಕೇಳುತ್ತಿದ್ದೇನೆ ಎಂದು ಆಗ್ರಹಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅರ್ಜಿ ಹಾಕದೇ ಇರುವ ಮಾವಿನನಹಳ್ಳಿ ಸಿದ್ದೇಗೌಡ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ ಇದು ಅರ್ಥವೇನು? ಮೈಸೂರು ಜಿಲ್ಲೆಯಲ್ಲಿ ಹಳೇ ಕಾಂಗ್ರೆಸಿಗರನ್ನು ಮುಗಿಸುವ ಯತ್ನ ನಡೆಯುತ್ತಿದೆ ಕಾಂಗ್ರೆಸ್ ಬಿಡದೇ ತಟಸ್ಥವಾಗಿ ಕಾಂಗ್ರೆಸ್‌ನಲ್ಲಿ ಇರುವುದಾಗಿ ವಾಸು ಹೇಳಿದ್ದಾರೆ. ಬಿಜೆಪಿ ಪಕ್ಷವು ಚಾಮರಾಜ ಕ್ಷೇತ್ರದಲ್ಲಿ ಕಳೆದ ಚುನಾವಣೆಗಿಂತಲೂ ಈ ಬಾರಿ ಭಾರೀ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಿಜೆಪಿ ಸೇರಲಿರುವ ನುದ್ದ್ ಕುಮಾರ್, ಉಮೇಶ್, ಶಿವು, ಹರೀಶ್‌ಗೌಡ ಪ್ರಶಾಂತ್ ಗೋಷ್ಠಿಯಲ್ಲಿದ್ದರು.


ನಂ.ಗೂಡು ಜೆಎಸ್‌ಎಸ್ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ




ಮೌನ



ಪೂಜಾ



ಮಧುಸೂದನ್



ಅನನ್ಯ

ಮೈಸೂರು, ಏ.22– ನಂಜನಗೂಡು ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದ ಹೆಚ್.ಪಿ.ಅನನ್ಯ 533(ಶೇ.92.16), ವಾಣಿಜ್ಯ ವಿಭಾಗದ ಹೆಚ್.ಎಂ.ಮೌನ 576(ಶೇ.96), ಹೆಚ್.ಎಸ್.ಪೂಜಾ 548(ಶೇ.91.3) ಹಾಗೂ ಕಲಾ ವಿಭಾಗದ ಎ.ಮಧುಸೂದನ್ 561(ಶೇ.93.5) ಅಂಕ ಗಳಿಸಿದ್ದಾರೆ. ಇವರೊಂದಿಗೆ ಅತ್ಯುನ್ನತ ಶ್ರೇಣಿಯ 13 ಮಂದಿ ಸೇರಿ ಒಟ್ಟು 105 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಪರಿಶಿಷ್ಟ ಸಮುದಾಯದ ಶ್ರೇಯೋಭಿವೃದ್ಧಿಗೆ ಬಿಜೆಪಿ ಬೆಂಬಲಿಸಿ

ನಂ.ಗೂಡಿನ 25, 27 ವಾರ್ಡ್‌ನಲ್ಲಿ ಪ್ರಚಾರ ನಡೆಸಿದ ಶಾಸಕ ಬಿ.ಹರ್ಷವರ್ಧನ್



ನಂಜನಗೂಡು, ಏ.22– ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಾತಿ ಹೆಚ್ಚಿಸುವ ಜೊತೆಗೆ ಪರಿಶಿಷ್ಟ ಸಮುದಾಯದ ಜನರ ಹಲವು ದಶಕಗಳ ಬೇಡಿಕೆಯಾಗಿದ್ದ ಒಳ ಮೀಸಲಾತಿ ಜಾರಿಗೊಳಿಸುವ ಮೂಲಕ ಬಿಜೆಪಿ ಸರ್ಕಾರ ಶೋಷಿತ ಸಮುದಾಯದ ಧ್ವನಿಯಾಗಿದೆ. ಹೀಗಾಗಿ ಪರಿಶಿಷ್ಟ ಸಮುದಾಯದ ಶ್ರೇಯೋಭಿವೃದ್ಧಿಗೆ ಬಿಜೆಪಿ ಬೆಂಬಲಿಸುವಂತೆ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ನಗರದ 25, 27ನೇ ವಾರ್ಡ್‌ಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ನೀಡಿದಂತೆ ಈ ಬಾರಿಯೂ ಬೆಂಬಲ ನೀಡುವ ಮೂಲಕ ಮತ್ತೊಮ್ಮೆ ನನ್ನನ್ನು ಭಾರೀ ಮತಗಳ ಅಂತರದಿಂದ ಗೆಲ್ಲಿಸಬೇಕು. ಚುನಾವಣೆಗೂ ಮುನ್ನ ನೀಡಿದ್ದ ಭರವಸೆಯಂತೆ ನಂಜನಗೂಡಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಭವಣೆ ನಿವಾರಣೆಗೆ ಕ್ರಮ ಕೈಗೊಳ್ಳುವ ಜತೆಗೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯುಜಿಡಿ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರದಿಂದ ಹೆಚ್ಚುವರಿ ಅನುದಾನ ಪಡೆಯಲಾಗಿದೆ. ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಭಕ್ತರಿಗೆ ಮೂಲ ಸೌಕರ್ಯ ಕಲ್ಪಿಸುವ ಜತೆಗೆ ದೇಗುಲದಲ್ಲಿ ಬೆಳ್ಳಿ ರಥ ನಿರ್ಮಾಣ ಹಾಗೂ ಅತಿಥಿಗೃಹ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ನಗರಸಭೆ ಪಕ್ಷೇತರ ಸದಸ್ಯೆ ಮಂಗಳಮ್ಮ ಮಾತನಾಡಿ, ಶಾಸಕ ಬಿ.ಹರ್ಷವರ್ಧನ್ ಅವರು ನಗರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಆಡಳಿತಾರೂಢ ಬಿಜೆಪಿ ಸರ್ಕಾರ ಮಾದಿಗ ಸಮುದಾಯದ ಹಲವು ವರ್ಷಗಳ ಬೇಡಿಕೆಯಾಗಿದ್ದ ಒಳ ಮೀಸಲಾತಿ ಜಾರಿಗೊಳಿಸಿರುವುದರಿಂದ ಈ ಬಾರಿ ಸಮುದಾಯದ ಮುಖಂಡರ ಸಲಹೆಯಂತೆ ಬಿಜೆಪಿ ಬೆಂಬಲಿಸಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ಚುನಾವಣಾ ಪ್ರಚಾರದಲ್ಲಿ ನಗರ ಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ನಗರ ಸಭಾ ಸದಸ್ಯರಾದ ವಿಜಯಲಕ್ಷ್ಮಿ ಕುಮಾರ್, ಮಂಗಳಮ್ಮ ಮಹದೇವಪ್ರಸಾದ್, ಎಪಿಎಂಸಿ ಮಾಜಿ ಸದಸ್ಯರಾದ ಗುರುಸ್ವಾಮಿ, ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಬಾಲಚಂದ್ರು ಮಹೇಶ್ ಅತ್ತಿಖಾನೆ, ಕೃಷ್ಣಪ್ಪ ಗೌಡ, ರಾಮಚಂದ್ರಗೌಡ, ರಾಘವೇಂದ್ರ, ಕೃಷ್ಣ ಪುನೀತ್, ಬಾಲರಾಜು, ಸಂತೋಷ್, ಶಶಿ, ವಿನೋದ್, ಶ್ಯಾಂಪಟೇಲ್, ಮಹೇಶ್, ಹಂಡುವಿನಹಳ್ಳಿ ರಾಜು, ಮಾದೇಶ ಮತ್ತಿತರರಿದ್ದರು.

ಬಡವರ ಹಿತ ಕಾಪಾಡುವ ಕಾಂಗ್ರೆಸ್ ಬೆಂಬಲಿಸಲು ಮನವಿ



ಮಲ್ಕುಂಡಿ, ಏ.22– ಚುನಾವಣೆಯಲ್ಲಿ ಬಡವರ, ದಲಿತರ, ಹಿಂದುಳಿದವರ ಪರ ಕೆಲಸ ಮಾಡುವ ಕಾಂಗ್ರೆಸ್ ಪಕ್ಷ ಬೆಂಬಲಿಸಿ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು. ನಂಜನಗೂಡು ಕ್ಷೇತ್ರದ ಕೂಗಲೂರು, ಕಸುವಿನಹಳ್ಳಿ, ಸಿದ್ದಯ್ಯನಹುಂಡಿ, ಮಾಕನಪುರ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನ ತಂದೆ ಆರ್.ಧ್ರುವನಾರಾಯಣ್ ಸಂಸದರಾಗಿದ್ದ ವೇಳೆ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರ ಅಭಿವೃದ್ಧಿ ಕಾರ್ಯ ನನ್ನ ಗೆಲುವಿಗೆ ಶ್ರೀರಕ್ಷೆಯಾಗಿದೆ. ಅದೇ ರೀತಿ ಸಿದ್ದರಾಮಯ್ಯ ತಮ್ಮ ಅಧಿಕಾರವಧಿಯಲ್ಲಿ ಅನ್ನಭಾಗ್ಯ, ಶಾಲಾ ಮಕ್ಕಳಿಗೆ ಕ್ಷೀರಭಾಗ್ಯ ಸೇರಿದಂತೆ ಅನೇಕ ಜನಪರ ಯೋಜನೆ ಜಾರಿಗೆ ತಂದು ಬಡವರ ಪರ ಕೆಲಸ ಮಾಡಿದ್ದಾರೆ. ನನ್ನ ತಂದೆಯಂತೆ ನಾನು ಕೂಡ ಕ್ಷೇತ್ರದ ಜನತೆ ಸೇವೆ ಮಾಡಲು ಮುಂದಾಗಿದ್ದೇನೆ. ನಾನು ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡು ತಬ್ಬಲಿಯಾಗಿದ್ದು, ನಿಮ್ಮ ಮಗನಾಗಿ ನಿಮ್ಮ ಸೇವೆ ಮಾಡಲು ನನಗೊಂದು ಅವಕಾಶ ನೀಡಿ. ನನ್ನ ತಂದೆ ಕನಸನ್ನು ಈಡೇರಿಸಲು ನಿಮ್ಮ ಸಹಕಾರ ಮುಖ್ಯ ಎಂದು ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ, ವಕೀಲ ನಾಗರಾಜು, ಯುವ ಘಟಕದ ಅಧ್ಯಕ್ಷ ದೇಬೂರು ಅಶೋಕ್, ಬಸವಣ್ಣ, ಗೋವಿಂದರಾಜು, ಗ್ರಾಪಂ ಸದಸ್ಯ ಕೆ.ಎಂ.ಮಲ್ಲೇಶ್, ಕೆ.ಎನ್.ಚಿನ್ನಸ್ವಾಮಿ, ಶಿವಪ್ಪ ಸೇರಿದಂತೆ ಇತರರಿದ್ದರು.

ವಿವಿಧೆಡೆ ಶಾಸಕ ಎಂ.ಅಶ್ವಿನ್ ಕುಮಾರ್ ಮತಯಾಚನೆ



ತಿ.ನರಸೀಪುರ, ಏ.22– ಯಾವುದೇ ತಾರತಮ್ಯ ಮಾಡದೇ ಕ್ಷೇತ್ರದಲ್ಲಿ ಪಕ್ಷಾತೀತ, ಜಾತ್ಯಾತೀತವಾಗಿ ಕೆಲಸ ಮಾಡಿಕೊಂಡು ಬಂದಿದ್ದೇನೆ ಎಂದು ಜೆಡಿಎಸ್ ಅಭ್ಯರ್ಥಿ, ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ದೊಡ್ಡಮುಲಗೂಡು, ಮೆಣಸಿಕ್ಯಾತನಹಳ್ಳಿ, ಕೆಂಪೇಗೌಡನಕೊಪ್ಪಲು, ಅಂಕನಹಳ್ಳಿ, ಕಾಡುಕೊತ್ತನಹಳ್ಳಿ, ಕರಿಹುರಳಿಕೊಪ್ಪಲು, ಗುಡ್ಡದ ಕೊಪ್ಪಲು ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ನನ್ನ ಆತ್ಮಸಾಕ್ಷಿಗೆ ಒಪ್ಪುವಂತೆ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ ಎಂದರು.

ನನ್ನ ಅಧಿಕಾರವಧಿಯಲ್ಲಿ ಯಾವುದೇ ಗೊಂದಲ, ಘರ್ಷಣೆಗಳಿಗೆ ಅವಕಾಶ ನೀಡದೇ ಕ್ಷೇತ್ರದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಪಕ್ಷದ ಮುಖಂಡರು ನನ್ನ ಮೇಲಿಟ್ಟಿರುವ ಪ್ರೀತಿ, ವಿಶ್ವಾಸವೇ ಕಾರಣ. ಎಲ್ಲೇ ಹೋದರೂ ಯಾವುದೇ ಪ್ರಶ್ನೆ ಮಾಡದೇ ನನಗೆ ಸಂಪೂರ್ಣ ಸ್ವತಂತ್ರ ಕೊಟ್ಟಿದ್ದರಿಂದ ಕ್ಷೇತ್ರದ ಅಭಿವೃದ್ಧಿ ಮಾಡಲು ಸಾಧ್ಯವಾಯಿತು ಎಂದ ಅವರು ಪಕ್ಷಾತೀತ, ಜಾತ್ಯಾತೀತವಾಗಿ ಕೆಲಸ ಮಾಡಲು ಮುಖಂಡರ ಸಹಕಾರವೇ ಮುಖ್ಯ ಕಾರಣ ಎಂದರು.

ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರಲು, ಮತ್ತೊಮ್ಮೆ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಈ ಬಾರಿ ನನ್ನನ್ನು ಗೆಲ್ಲಿಸುವಂತೆ ಮನವಿ ಮಾಡಿದ ಅವರು, ಕುಮಾರಸ್ವಾಮಿ ಅವರು ಪಂಚರತ್ನ ಯೋಜನೆಯಲ್ಲಿ ವಸತಿ, ಶಿಕ್ಷಣ, ಆರೋಗ್ಯ, ಕೃಷಿ, ಉದ್ಯೋಗ ಸೇರಿದಂತೆ ಇನ್ನಿತರ ಉದ್ದೇಶವನ್ನು ಸೇರಿಸಿದ್ದು, ಸ್ತ್ರೀ ಶಕ್ತಿ ಸಂಘದ ಸಾಲ ಸಂಪೂರ್ಣವಾಗಿ ಮನ್ನಾ ಮಾಡುವ ಹೆಬ್ಬಯಕೆ ಹೊಂದಿದ್ದು, ಅವರನ್ನು ಮುಖ್ಯಮಂತ್ರಿ ಮಾಡಲು ನಾವೆಲ್ಲರೂ ಬದ್ಧರಾಗಿ ಕೆಲಸ ಮಾಡೋಣ ಎಂದರು.

ಈ ವೇಳೆ ಜೆಡಿಎಸ್ ಹಿರಿಯ ಮುಖಂಡ ಕೊಡಗಳ್ಳಿ ಚಿಕ್ಕಜವರಪ್ಪ ಮಾದಿಗಹಳ್ಳಿ ಸ್ವಾಮಿಯಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಹೋಟೆಲ್ ರಾಮಸ್ವಾಮಿ, ತಾಲೂಕು ಜೆಡಿಎಸ್ ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ್, ಬನ್ನೂರು ಹೋಬಳಿ ಅಧ್ಯಕ್ಷ ಕುಮಾರಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಹೆಗ್ಗುರು ಗ್ರಾಪಂ ಮಾಜಿ ಅಧ್ಯಕ್ಷ ರಾಜು, ಮುಖಂಡರಾದ ಗೊರವನಹಳ್ಳಿ ನಾಗರಾಜು, ಚಿನ್ನು ಮಹಾಲಿಂಗಣ್ಣ, ಲೋಕೇಶ್ ಕುಮಾರ್, ಮಣಿ, ಮಹೇಂದ್ರ, ವೈ.ಕೆ.ನವೀನ್, ಬೀಡನಹಳ್ಳಿ ದೇವರಾಜ್, ಬಾನಗವಾಡಿ ನಾರಾಯಣಸ್ವಾಮಿ, ಪಟೇಲ್ ವೆಂಕಟೇಶ್ ಇದ್ದರು.

ಮುಸ್ಲಿಂ ಯುವ ಮುಖಂಡರು ಬಿಜೆಪಿಗೆ ಸೇರ್ಪಡೆ



ತಿ.ನರಸೀಪುರ, ಏ.22– ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ರೇವಣ್ಣ ಸಮ್ಮುಖದಲ್ಲಿ ಪಟ್ಟಣದ ಜಾಮೀಯಾ ಮಸೀದಿ ಬೀದಿಯ ಹಲವು ಮುಸ್ಲಿಂ ಯುವ ಮುಖಂಡರು ಬಿಜೆಪಿಗೆ ಸೇರ್ಪಡೆಗೊಂಡರು.

ಶುಕ್ರವಾರ ರಾತ್ರಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮುಸ್ಲಿಂ ಮುಖಂಡರಾದ ಉಮರ್, ಮಹಮ್ಮದ್ ನೇಮತ್, ಅಮ್ಜದ್ ಪಾಷ, ಸೈಫುಲ್ಲಾ, ಆದಿಲ್ ಪಾಷ, ಅಫ್ಜಲ್ ಪಾಷ, ಮಹಮ್ಮದ್ ವಾಜಿರ್ ಹಾಗೂ ಆಟೋ ಸೈಫುಲ್ಲಾ ಸೇರಿದಂತೆ ಅನೇಕ ಮುಖಂಡರು ಪಕ್ಷಕ್ಕೆ ಸೇರ್ಪಡೆಯಾಗಿ ಡಾ.ರೇವಣ್ಣರ ಗೆಲುವಿಗೆ ಶ್ರಮಿಸುವುದಾಗಿ ತಿಳಿಸಿದರು.

ರೇವಣ್ಣ ಮಾತನಾಡಿ, ಕೆಲವರು ಬಿಜೆಪಿ ಮುಸ್ಲಿಂ ವಿರೋಧಿ ಪಕ್ಷ ಎಂದು ಬಿಂಬಿಸಲು ಹೊರಟಿದ್ದಾರೆ. ಆದರೆ ಪಕ್ಷ ಅಲ್ಪ ಸಂಖ್ಯಾತರ ಪರವಾಗಿ ಕೆಲಸ ಮಾಡುತ್ತಿದೆ. ಈ ಬಾರಿ ನನಗೆ ಅವಕಾಶ ಮಾಡಿಕೊಟ್ಟರೆ ಸಮುದಾಯಕ್ಕೆ ಸಿಗಬೇಕಾದ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸುವ ಜೊತೆಗೆ ಸರ್ಕಾರದಿಂದ ಬರುವ ಅನುದಾನದಲ್ಲಿ ಮುಸಲ್ಮಾನ್ ಕಾಲೋನಿ ಅಭಿವೃದ್ಧಿ ಪಡಿಸಲು ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕೊತ್ತೇಗಾಲ ಕಿಟ್ಟಿ(ಸಿದ್ದಮಲ್ಲಪ್ಪ) ಸೇರಿದಂತೆ ಮತ್ತಿತರರಿದ್ದರು.

ಮತ್ತೊಮ್ಮೆ ಸಾ.ರಾ.ಮಹೇಶ್ ಗೆಲ್ಲಿಸಿ: ಮನವಿ



ಕೆ.ಆರ್.ನಗರ, ಏ.22– ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಮ್ಮೆ ಶಾಸಕ ಸಾ.ರಾ.ಮಹೇಶ್ ಅವರನ್ನು ಗೆಲ್ಲಿಸಿ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ಮನವಿ ಮಾಡಿದರು.

ತಾಲೂಕಿನ ಲಾಳಂದೇವನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಶಾಸಕ ಸಾ.ರಾ.ಮಹೇಶ್ ಪರ ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿ ಮಾತನಾಡಿದ ಅವರು, ಶಾಸಕ ಸಾ.ರಾ.ಮಹೇಶ್ ಅಧಿಕಾರವಧಿಯಲ್ಲಿ ಕ್ಷೇತ್ರ ಅಭಿವೃದ್ಧಿ ಪಥದತ್ತ ಸಾಗಿದ್ದು, ಇದನ್ನು ಸಹಿಸದ ವಿರೋಧಿಗಳು ಕ್ಷೇತ್ರ ಅಭಿವೃದ್ಧಿಯಾಗಿಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಸಾ.ರಾ.ಮಹೇಶ್ ಅವರು ತಾಲೂಕಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಭರವಸೆಯ ಹಾದಿಯಲ್ಲಿ ಹೊಸ ಭವಿಷ್ಯದ ಬೆಳಕು ಎಂಬ ಕೈಪಿಡಿಯನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದ್ದಾರೆ. ಎಲ್ಲರೂ ಅದನ್ನು ಓದಿ ಎಂದರು.

ವಿರೋಧಿಗಳಿಗೆ ಶಾಸಕರ ಬಗ್ಗೆ ಟೀಕಿಸಲು ಯಾವುದೇ ಅಸ್ತ್ರ ಇಲ್ಲ. ಸಾ.ರಾ.ಮಹೇಶ್ ಭ್ರಷ್ಟನಲ್ಲ, ವರ್ಗಾವಣೆ ಮಾಡಿಸಲು ಯಾರಿಂದಲೂ ಹಣ ಪಡೆದಿಲ್ಲ, ನೌಕರಿ ಕೊಡಿಸುತ್ತೇನೆ ಎಂದು ಹಣ ಪಡೆದಿಲ್ಲ, ಇಂತಹ ಪ್ರಾಮಾಣಿಕ ಶಾಸಕನನ್ನು ಮತ್ತೊಮ್ಮೆ ಗೆಲ್ಲಿಸಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು. ಇದಕ್ಕೂ ಮುನ್ನಾ ಲಾಳಂದೇವನಹಳ್ಳಿಯ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಸವರಾಜಪುರ, ಹೊಸಹಳ್ಳಿ, ವಡ್ಡರಹಳ್ಳಿ, ಮಾರ್ಚಹಳ್ಳಿ, ಮೂಲೆಪೆಟ್ಲು, ಲಾಲನಹಳ್ಳಿ ಗ್ರಾಮಗಳಲ್ಲಿ ಮನೆಮನೆಗೆ ತೆರಳಿ ಶಾಸಕ ಸಾ.ರಾ.ಮಹೇಶ್ ಅವರ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಿಳಿಸಿ ಮತಯಾಚಿಸಿದರು.

ಈ ವೇಳೆ ಭೂ ನ್ಯಾಯ ಮಂಡಳಿ ಮಾಜಿ ಸದಸ್ಯ ಹೆಚ್.ಪಿ.ಶಿವಣ್ಣ ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಮಹದೇವ್, ಜೆಡಿಎಸ್ ಮುಖಂಡರಾದ ಪುಟ್ಟುರಾಜು, ಗ್ರಾಪಂ ಸದಸ್ಯ ಬಾಲಾಜಿ ಗಣೇಶ್, ಶಿವು, ಜೆಡಿಎಸ್ ಮುಖಂಡ ಮಧು, ವಸಂತಣ್ಣ, ಶ್ರೀಧರಮೂರ್ತಿ, ಪಾಪಣ್ಣ, ಎಲ್.ಪಿ.ನಾಗರಾಜು, ಗೌತಮ್, ಮಹದೇವ, ಜಯಶಂಕರ, ಗುರು ಸೇರಿದಂತೆ ಅನೇಕರಿದ್ದರು.

ಅನಿಲ್ ಚಿಕ್ಕಮಾದು ಮತ್ತೊಮ್ಮೆ ಶಾಸಕರಾಗುವುದು ಖಚಿತ

ನಾಯಕ ಸಮಾಜದ ಅಧ್ಯಕ್ಷ ಬಸವರಾಜು ವಿಶ್ವಾಸ



ಸರಗೂರು, ಏ.22– ಶಾಸಕ ಅನಿಲ್ ಚಿಕ್ಕಮಾದು ಅವರು ಈ ಬಾರಿ ಮತ್ತೊಮ್ಮೆ ಶಾಸಕರಾಗುವುದು ಖಚಿತ ಎಂದು ತಾಲೂಕಿನ ನಾಯಕ ಸಮಾಜದ ಅಧ್ಯಕ್ಷ ಬಸವರಾಜು ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಕೊತ್ತೇಗಾಲದಲ್ಲಿ ಶುಕ್ರವಾರ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಶಾಸಕ ಅನಿಲ್ ಚಿಕ್ಕಮಾದು ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರದಲ್ಲಿದ್ದ ವೇಳೆ ಸರಗೂರು ನೂತನ ತಾಲೂಕು ಕೇಂದ್ರವಾಗಿ ಘೋಷಣೆಯಾಯಿತು. ಶಾಸಕ ಅನಿಲ್ ಚಿಕ್ಕಮಾದು ಗ್ರಾಮೀಣಾಭಿವೃದ್ಧಿಗೆ ಅನುದಾನ ನೀಡಿ ಶ್ರಮಿಸಿದ್ದಾರೆ. ಕೊತ್ತೇಗಾಲಕ್ಕೆ 75 ಲಕ್ಷ ಅನುದಾನ ನೀಡಿ ಅಭಿವೃದ್ಧಿಪಡಿಸಿದ್ದಾರೆ. ಹೀಗಾಗಿ ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿ, ಎಲ್ಲರೂ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಗೃಹಜ್ಯೋತಿ ಯೋಜನೆ ಮೂಲಕ 200 ಯುನಿಟ್ ಉಚಿತ ವಿದ್ಯುತ್, ಮನೆಯೊಡತಿಗೆ 2 ಸಾವಿರ ರೂ. ಪ್ರೋತ್ಸಾಹಧನ ನೀಡಲು ಗೃಹಲಕ್ಷ್ಮಿ ಯೋಜನೆ ಜಾರಿ, ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಉಚಿತ ಅಕ್ಕಿ ವಿತರಿಸಲಾಗುವುದು ಎಂದರು.

ಜಿಪಂ ಸದಸ್ಯ ಚಿಕ್ಕವೀರ ನಾಯಕ ಮಾತನಾಡಿದರು. ಈ ವೇಳೆ ಕಾರ್ಯಕರ್ತರಾದ ಗುರುಸ್ವಾಮಿ, ಶಿವರಾಜು, ಮಂಜು, ಮಲ್ಲಿಕಾರ್ಜನಸ್ವಾಮಿ, ಪುಟ್ಟೇಗೌಡ, ಗಣೇಶ್, ಶಂಕರಪ್ಪ, ಚನ್ನಪ್ಪ, ವಿಜಯೇಂದ್ರ, ರಾಜೇಶ್, ಮಹದೇವ್, ಸ್ವಾಮಿ, ನಾಗರಾಜು, ಬಸವರಾಜು, ಚಿನ್ನಸ್ವಾಮಿ, ಸೋಮಶೇಖರ್, ತಿಮ್ಮಯ್ಯ, ಮಹೇಶ್, ಮಣಿಕಂಠ ಸೇರಿದಂತೆ ಇನ್ನಿತರರಿದ್ದರು.

ಚುನಾವಣಾ ವೀಕ್ಷಕರ ನೇಮಕ

ಹುಣಸೂರು, ಏ.22– ವಿಧಾನಸಭಾ ಚುನಾವಣೆ ಸಂಬಂಧ ಹುಣಸೂರು ಕ್ಷೇತ್ರದ ಚುನಾವಣಾ ಸಾಮಾನ್ಯ ವೀಕ್ಷಕರಾಗಿ ಐಎಎಸ್ ಅಧಿಕಾರಿ ಶಲ ದಿವೇಶ್ ಸಹರ (ಮೊ:8217256464), ಚುನಾವಣಾ ವೆಚ್ಚ ವೀಕ್ಷಕರಾಗಿ, ಐಆರ್‌ಎಸ್ ಅಧಿಕಾರಿ ರಾಮಕೃಷ್ಣ ಕದಿಯ (ಮೊ:9110644008) ಅವರನ್ನು ನಿಯೋಜಿಸಲಾಗಿದೆ. ಚುನಾವಣಾ ಸಾಮಾನ್ಯ ವೀಕ್ಷಕರು ಮತ್ತು ವೆಚ್ಚ ವೀಕ್ಷಕರು ನಗರದ ಹುಣಸೂರು ನಗರಸಭಾ ಕಾರ್ಯಾಲಯ ಕೊಠಡಿ ಸಂಖ್ಯೆ 2 ಮತ್ತು 4 ರಲ್ಲಿ ಮಧ್ಯಾಹ್ನ 12.30ರಿಂದ 1.30ರವರೆಗೆ ಲಭ್ಯವಿರುತ್ತಾರೆ. ಸಾರ್ವಜನಿಕರು ದೂ: 08222–252048 ಮೂಲಕವೂ ಸಂಪರ್ಕಿಸಬಹುದು ಎಂದು ಹುಣಸೂರು ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಡಾ.ಅಶೋಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಶಂಕರಚಾರ್ಯರ ಜಯಂತಿ: ವಿವಿಧ ಕಾರ್ಯಕ್ರಮ

ನಂಜನಗೂಡು, ಏ.22– ಜಗದ್ಗುರು ಶ್ರೀಶಂಕರಚಾರ್ಯರ ಜಯಂತಿ ಅಂಗವಾಗಿ ನಗರದ ಶೃಂಗೇರಿ ಶಾರದ ಮಠದಲ್ಲಿ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಠದ ಕಾರ್ಯದರ್ಶಿ ಶ್ರೀಕಂಠ ಜೋಯಿಸ್ ತಿಳಿಸಿದರು. ಏ.21ರಿಂದಲೇ ದೇವತಾ ಕಾರ್ಯ ಆರಂಭವಾಗಿದ್ದು, 25ರಂದು ಬೆಳಗ್ಗೆ 8ಗಂಟೆಗೆ ಶ್ರೀಶಂಕರ ಭಗವತ್ಪಾದಾಚಾರ್ಯರ ಉತ್ಸವ ವೇದಘೋಷಗಳೊಂದಿಗೆ ರಥ ಬೀದಿಯಲ್ಲಿ ಜರುಗಲಿದೆ. ಬೆಳಗ್ಗೆ 10.30ಕ್ಕೆ ಶ್ರೀಕಂಠೇಶ್ವರಸ್ವಾಮಿ ಮಂಟಪೋತ್ಸವ ನಡೆಯಲಿದೆ ಮತ್ತು ಪ್ರತಿದಿನ ಪ್ರಾತಃಕಾಲ 8 ರಿಂದ 12ಗಂಟೆವರೆಗೆ ಮಹಾನ್ಯಾಸ ಪೂರ್ವಕ ಏಕದಶವರ ರುದ್ರಾಭಿಷೇಕ ಮತ್ತು ಮಹಾಮಂಗಳಾರತಿ ಜರುಗಲಿದೆ ಎಂದು ಮಾಹಿತಿ ನೀಡಿದರು. ಏ.23ರಂದು ಸಂಜೆ 6 ರಿಂದ 7 ರವರೆಗೆ, ಏ.24 ರಂದು ಸಂಜೆ 5 ರಿಂದ 7 ರವರೆಗೆ, ಏ.25ರಂದು ಸಂಜೆ 5 ರಿಂದ 8 ಗಂಟೆವರೆಗೆ ಭಜನಾ ಕಾರ್ಯಕ್ರಮ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ



ರಂಜಾನ್ ಅಂಗವಾಗಿ ಸರಗೂರು ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಶನಿವಾರ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಗುರುಗಳಾದ ಅಬ್ದುಲ್ ರಶೀದ್, ಅಬ್ದುಲ್ ಜಲೀಲ್, ಯಜಮಾನರಾದ ಅಬ್ದುಲ್ ಮಜೀದ್, ಹಾಜಿ ಅಬ್ದುಲ್ ಅಜೀಜ್, ಮುಖಂಡರಾದ ಮುಜೀಬ್, ಸುಭಾನ್, ಜಲೀಲ್, ನಾಸೀರ್, ಜಾವೀದ್, ಅಮೀರ್ ಸುಹೇಲ್, ಇಬ್ರಾಹಿಂ, ಇದಾಯತ್, ಸುಹೇಲ್, ಅನಾಸ್, ರಫಿ,ಚಾಂದ್, ಸೇಟು, ಸಾಧನ್, ಜಲೀಲ್ ಹಾಜ್ರತ್, ಸಿರಾಜ್ ಪಾಷ ಇನ್ನಿತರರಿದ್ದರು.

ಸಂಘರ್ಷ ಪೀಡಿತ ಸುಡಾನ್ ಸಂಕಷ್ಟ

ಪಕ್ಷಿರಾಜಪುರದ ಏಳು ಮಂದಿ ಸುರಕ್ಷಿತ



ಮೈಸೂರು, ಏ.22– ಸುಡಾನ್‌ನ ಘರ್ಷಣೆ ಪೀಡಿತ ಖಾರ್ಟೂಮ್ ನಗರದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಹುಣಸೂರು ತಾಲೂಕು ಪಕ್ಷಿರಾಜಪುರದ ಏಳು ಮಂದಿ ನಿರಂತರ ಕಾಲ್ನಡಿಗೆಯಲ್ಲೇ ಸುರಕ್ಷಿತ ಸ್ಥಳ ತಲುಪಿದ್ದಾರೆ.

ಬಾಂಬ್, ಗುಂಡಿನ ಸುರಿಮಳೆಯ ಸದ್ದಿನ ನಡುವೆಯೇ ಹಕ್ಕಿಪಿಕ್ಕಿ ಜನರು ಸಂಘರ್ಷ ವಿರಾಮದ ಸಮಯದಲ್ಲಿ 6ಕಿ.ಮಿ. ದೂರದ ಉಂಬಡ ಎಂಬ ಸ್ಥಳ ತಲುಪಿ ತಂಗಿದ್ದಾರೆ.

ಸುಡಾನ್‌ನಲ್ಲಿ ಏಕಾಏಕಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವೆ ಸಂಘರ್ಷ ಆರಂಭವಾಗಿ ರಣರಂಗ ಏರ್ಪಟ್ಟಿದೆ. ತಿಂಗಳ ಹಿಂದೆ ಕಾಶಿನಾಥ್ ಮಕ್ಕಳಾದ ಕ್ರಾಂತ್ ಕುಮಾರ್, ಶಕ್ತಿಕುಮಾರ್, ಸೊಸೆಯರಾದ ಗೀತಾ, ವೈಶಾಲಿ ಮತ್ತು ಅಳಿಯ ಶರತ್ ಅವರು ಆಯುರ್ವೇದ ಎಣ್ಣೆ ಮಾರಾಟ ಮತ್ತು ಮಸಾಜ್ ಮಾಡಿ ಹಣ ಸಂಪಾದನೆಗೆ ಸುಡಾನ್‌ಗೆ ತೆರಳಿದ್ದರು. ಅಲ್ಲಿನ ಖಾರ್ಟೂಮ್ ನಗರದ ಮನೆಯೊಂದರಲ್ಲಿ ಉಳಿದಿದ್ದರು. ನೆರೆಯ ಗ್ರಾಮವಾದ ಉಂಬಡ ಎಂಬಲ್ಲಿಗೆ ಯಾವುದೇ ರಕ್ಷಣೆ ಇಲ್ಲದೆ ತೆರಳಿ ಸುರಕ್ಷಿತವಾದ ಹೋಟೆಲ್‌ವೊಂದರ ರೂಂನಲ್ಲಿ ಉಳಿದುಕೊಂಡಿದ್ದೇವೆ. ಇಲ್ಲಿ ಯಾರೂ ಇಲ್ಲ, ನಮ್ಮ ಬಳಿ ಹಣವೂ ಇಲ್ಲ ಎಂದು ಸುಡಾನ್‌ನಲ್ಲಿರುವ ಕಾಶಿನಾಥ್ ಕುಟುಂಬದ ಸದಸ್ಯ ಶಕ್ತಿಕುಮಾರ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಉಂದ್ರಾ ಪ್ರದೇಶದಲ್ಲಿ ಮಾಲ್‌ಗಳು ಎಂದಿನಂತೆ ತೆರೆದಿದ್ದು, ಎಲ್ಲವೂ ಸಿಗುತ್ತಿದೆ. ಮಿಲಿಟರಿ ಪಡೆ ಸುತ್ತುವರೆದು ಸ್ಥಳೀಯರಿಗೆ ರಕ್ಷಣೆ ನೀಡಿದೆ. ಆಹಾರ, ನೀರು ಎಲ್ಲವೂ ಸಿಗುತ್ತಿದೆ. ಈಗ ನಾವು ಬದುಕುಳಿಯುವ ವಿಶ್ವಾಸ ಬಂದಿದೆ ಎಂದು ತಿಳಿಸಿದ್ದಾರೆ.

ಪಾಸ್ ಪೋರ್ಟ್ ಮತ್ತು ವೀಸಾವನ್ನು ಸ್ಥಳೀಯ ಏಜೆಂಟ್‌ಗೆ ನೀಡಿದ್ದೆವು. ಸೇನಾ ಪಡೆಗಳ ನಡುವೆ ಸಂಘರ್ಷ ಆರಂಭವಾದ್ದರಿಂದ ದಿಕ್ಕಾಪಾಲಾಗಿದ್ದೇವೆ. ಅವರನ್ನು ಸಂಪರ್ಕಿಸಲು ಆಗುತ್ತಿಲ್ಲ. ಭಾರತದ 58 ಜನರ ಪಾಸ್ ಪೋರ್ಟ್ ಅವರ ಬಳಿ ಉಳಿದಿದ್ದು, ನಮಗೆ ಈಗ ದಾರಿತೋರದಂತಾಗಿದೆ ಮತ್ತೊಬ್ಬರು ಆತಂಕ ವ್ಯಕ್ತಪಡಿಸಿದ್ದಾರೆ.

ಸುಡಾನ್‌ನಲ್ಲಿ ಸಿಲುಕಿರುವವರ ರಕ್ಷಣೆಗೆ ಸೂಕ್ತ ಕ್ರಮ


ಟೈಗರ್ ಬ್ಲಾಕ್‌ಗೆ ಭೇಟಿ ನೀಡಿ ಶಾಸಕ ಅನಿಲ್ ಭರವಸೆ



ಹೆಚ್.ಡಿ.ಕೋಟೆ, ಏ.22– ನಾನು ಚುನಾವಣಾ ಪ್ರಚಾರಕ್ಕೆ ಬಂದಿಲ್ಲ. ಬದಲಿಗೆ ಸುಡಾನ್‌ನಲ್ಲಿ ಸಿಲುಕಿರುವ ಎಲ್ಲರನ್ನು ಸುರಕ್ಷಿತವಾಗಿ ಕರೆತರುವುದಾಗಿ ಭರವಸೆ ನೀಡಲು ಬಂದಿದ್ದೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.


ತಾಲೂಕಿನ ಟೈಗರ್ ಬ್ಲಾಕ್‌ಗೆ ಭೇಟಿ ನೀಡಿ, ದಕ್ಷಿಣ ಆಫ್ರಿಕಾದ ಸುಡಾನ್‌ನಲ್ಲಿ ಸಿಲುಕಿರುವವರ ಕುಟುಂಬದವರಿಗೆ ಧೈರ್ಯ ತುಂಬಿ ಮಾತನಾಡಿದ ಅವರು, ಸುಡಾನ್‌ನಲ್ಲಿ ಸಿಲುಕಿರುವ ಎಲ್ಲರನ್ನೂ ಸುರಕ್ಷಿತವಾಗಿ ಭಾರತಕ್ಕೆ ಕರೆತರುವ ವಿಚಾರವಾಗಿ ಈಗಾಗಲೇ ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ. ಈ ಸಂಬಂಧ ಅವರು ಶುಕ್ರವಾರ ಇಲ್ಲಿಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದು, ಸರ್ಕಾರದ ಗಮನಕ್ಕೆ ತಂದು ಹಾಗೂ ವಿದೇಶಾಂಗ ಸಚಿವಾಲಯದ ಅಧಿಕಾರಿಗಳ ಜೊತೆ ಸಂಪರ್ಕ ಸಾಧಿಸಿ ಎಲ್ಲರನ್ನೂ ಸುರಕ್ಷಿತವಾಗಿ ಕರೆತರಲು ಕ್ರಮ ಕೈಗೊಳ್ಳಲಾಗಿದೆ. ಆದ್ದರಿಂದ ತಾವೆಲ್ಲರೂ ಸುಡಾನ್‌ನಲ್ಲಿ ಸಿಲುಕಿರುವವರಿಗೆ ಧೈರ್ಯ ತುಂಬುವ ಕೆಲಸ ಮಾಡಿ ಎಂದರು. ಸುಡಾನ್‌ನಲ್ಲಿ ಸಿಲುಕಿರುವವರೊಂದಿಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ ಶಾಸಕರು, ಯಾವುದೇ ಕಾರಣಕ್ಕೂ ಧೈರ್ಯ ಕಳೆದುಕೊಳ್ಳಬೇಡಿ. ನಿಮ್ಮನ್ನು ಸುರಕ್ಷಿತವಾಗಿ ಕರೆತರಲು ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಭರವಸೆ ನೀಡಿದರು. ಈ ವೇಳೆ ಕೆಪಿಸಿಸಿ ವಕ್ತಾರ ಜಿ.ವಿ.ಸೀತಾರಾಮ, ಪುರಸಭಾ ಸದಸ್ಯ ಹೆಚ್.ಸಿ. ನರಸಿಂಹಮೂರ್ತಿ, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ್, ಪ್ರದೀಪ್, ಪ್ರವೀಣ್, ಸಂತೋಷ್, ಹೀವಾನ್ ರಾಜ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಈ ಬಾರಿ ಜೆಡಿಎಸ್ ಬೆಂಬಲಿಸಲು ಮನವಿ



ರಾವಂದೂರು, ಏ.22– ತಾಲೂಕಿನ ಪ್ರತಿ ಗ್ರಾಮಗಳ ಅಭಿವೃದ್ಧಿ ಶ್ರಮಿಸಿರುವ ನನ್ನನ್ನು ಈ ಬಾರಿಯ ಚುನಾವಣೆಯಲ್ಲಿ ಬೆಂಬಲಿಸುವಂತೆ ಪಿರಿಯಾಪಟ್ಟಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಮನವಿ ಮಾಡಿದರು. ಇಲ್ಲಿಗೆ ಸಮೀಪದ ಭೋಗನಹಳ್ಳಿ ಗ್ರಾಮದಲ್ಲಿ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದ ಜನತೆಗೆ ಮೂಲ ಸೌಕರ್ಯ ಒದಗಿಸುವ ಜೊತೆಗೆ ತಾಲೂಕಿನ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ರಾಜ್ಯದಲ್ಲಿ ಬೇರೆ ಸರ್ಕಾರ ಅಧಿಕಾರದಲ್ಲಿದ್ದರೂ ಹೆಚ್ಚು ಅನುದಾನ ತರುವ ಮೂಲಕ ತಾಲೂಕಿನ ಜನತೆಯ ಸೇವೆ ಮಾಡಿದ್ದೇನೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಶಾಸಕ ಮಹದೇವ್ ಮಾಕೋಡು, ಮಂಟಿಕೊಪ್ಪಲು, ಆರ್.ಹೊಸಹಳ್ಳಿ, ಹರಳಹಳ್ಳಿ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸಿದರು. ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ತಾಪಂ ಮಾಜಿ ಅಧ್ಯಕ್ಷ ಜವರಪ್ಪ, ಮಹೇಶ್, ಶಿವದೇವ ಸೇರಿದಂತೆ ಮಹಿಳಾ ಸಂಘದ ಸದಸ್ಯರಿದ್ದರು.

ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ಮಹದೇವರಾವ್
ನಿವೃತ್ತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್
ಮಾಲೀಕರು: ಮೆರೈನ್ ಅಕ್ವೇರಿಯಂ
ಶಿವರಾಂಪೇಟೆ, ಮೈಸೂರು.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ. ನಿಮ್ಮ ನೆನಪಿನಲ್ಲೇ ಇರುವ
ಇಂತಿ: ಮಕ್ಕಳು ಮತ್ತು ಕುಟುಂಬವರ್ಗ
ಹಾಗೂ
ಮೆರೈನ್ ಅಕ್ವೇರಿಯಂ ಬಳಗ.

ನಿಧನ



ಶ್ರೀಮತಿ ತ್ರಿವೇಣಿ
(ಮೈಸೂರು & ಚಾ.ನಗರ ಜಿಲ್ಲೆಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಪಿ.ಬೋರೇಗೌಡರ ಧರ್ಮಪತ್ನಿ)

ಇವರು ದಿನಾಂಕ: 22-04-2023ರಂದು ನಿಧನರಾಗಿದ್ದು, ಇವರ ದಿ.23-04-2023ರ 11 ಗಂಟೆಯ ವರೆಗೆ ಮೃತರ ಪಾರ್ಥಿವ ಶರೀರವನ್ನು ಮೈಸೂರಿನ ವಿದ್ಯಾರಣ್ಯಪುರದಲ್ಲಿ ಒಕ್ಕಲಿಗರ ಸಮುದಾಯ ಭವನದ ಪಕ್ಕದಲ್ಲಿರುವ ನಿವಾಸದಲ್ಲಿ ಇರಿಸಿ ನಂತರ ಮಧ್ಯಾಹ್ನ 2 ಗಂಟೆಗೆ ಹೆಚ್.ಡಿ.ಕೋಟೆ ತಾಲ್ಲೂಕಿನ ಬೆಟ್ಟದಬೀಡು ಗ್ರಾಮದ ತೋಟದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಮಕ್ಕಳು ಮತ್ತು ಕುಟುಂಬವರ್ಗದವರು

ಹಸಿರು ನಮ್ಮ ಉಸಿರು

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ ಶಿವಲಿಂಗೇಗೌಡರು
PWD Contractor,
ಮಾಲೀಕರು, S.K Traders , S.K Constructions
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ಸದಾ ನಿಮ್ಮ ನೆನಪಿನಲ್ಲಿರುವ ಎಸ್.ಕುಶಲ್ ಗೌಡ, ವರ್ಷಿತಾ.ಡಿ ಎಸ್.ಕಿಶನ್ ಗೌಡ ಹಾಗೂ ಕುಟುಂಬವರ್ಗ.